04 June 2026 Thursday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಆನೆಯನ್ನಾದರೂ ಸಾಕಬಹುದು, ಆದರೆ ಆಮಿಷವನ್ನು ಸಾಕುವುದು ತುಂಬಾ ಕಷ್ಟ!

-ಸ್ನೇಹಾ ಆನಂದ್

info.varthaman@gmail.com


ಡಿಕೆಶಿ ಮುಖ್ಯಮಂತ್ರಿ: ರಾಮನಗರದಲ್ಲಿ ಕಾಂಗ್ರೆಸ್ ಸಂಭ್ರಮ — ಪುಟ ಸಂ. 2

ಡಿಕೆಶಿ ಸಿಎಂ: ಪೀರನ್ ಷಾ ವಲಿ ದರ್ಗಾದಲ್ಲಿ ಪ್ರಾರ್ಥನೆ — ಪುಟ ಸಂ. 3

ಮಡಿಕೇರಿ: 21ರಂದು ಅಂತಾರಾಷ್ಟ್ರೀಯ ಯೋಗ ದಿನ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN | Volume: 69 | Issue: 188 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಸಿಎಂ ಡಿಕೆ ಪರ್ವ ಆರಂಭ

## ಡಿಸಿಎಂ ಆಗಿ ಡಾ.ಜಿ.ಪರಮೇಶ್ವರ್ । 13 ಸಚಿವರೊಂದಿಗೆ ಪ್ರಮಾಣವಚನ ಸ್ವೀಕಾರ

**ಬೆಂಗಳೂರು:** ರಾಜ್ಯದಲ್ಲಿ ಹೋರಾಟದ ಮೂಲಕವೇ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸಿದ ಡಿ.ಕೆ.ಶಿವಕುಮಾರ್ ಅವರು ಬುಧವಾರ ಕರ್ನಾಟಕದ ನೂತನ ಮುಖ್ಯಮಂತ್ರಿಯಾಗಿ ಗದ್ದುಗೆ ಏರಿದರು. ಈ ಮೂಲಕ ರಾಜ್ಯದಲ್ಲಿ ಡಿ.ಕೆ.ಶಿವಕುಮಾರ್ ಪರ್ವ ಆರಂಭವಾಗಿದೆ.

ಲೋಕಭವನದ ಗಾಜಿನ ಮನೆಯಲ್ಲಿ ಬುಧವಾರ ಸಂಜೆ 4.15ಕ್ಕೆ ನಡೆದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಡಿ.ಕೆ. ಶಿವಕುಮಾರ್ ಅವರಿಗೆ ಪ್ರಮಾಣವಚನ ಬೋಧಿಸಿದರು. ಸಂವಿಧಾನ ಪುಸ್ತಕ ಹಿಡಿದ ಡಿ.ಕೆ.ಶಿವಕುಮಾರ್ ಅವರು ಕರ್ನಾಟಕದ 18ನೇ ಮುಖ್ಯಮಂತ್ರಿಯಾಗಿ ವೀರಗಂಗಾಧರ ಅಜ್ಜಯ್ಯನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಪ್ರಮಾಣ ವಚನ ಸ್ವೀಕರಿಸುವ ಮೊದಲು ವೇದಿಕೆಯಲ್ಲಿ ಡಿ.ಕೆ ಶಿವಕುಮಾರ್ ಅವರು ನೆಲಕ್ಕೆ ಅಡ್ಡಬಿದ್ದು ನಮಸ್ಕರಿಸಿದರು. ಬಳಿಕ ಅಜ್ಜಯ್ಯನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೆ ಡಿಸಿಎಂ ಡಾ.ಜಿ.ಪರಮೇಶ್ವರ್ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿದರು. ಸಿಎಂ ಜೊತೆ 13 ಮಂದಿ





ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಪಡೆದರು.

ಪಕ್ಷದ ಕಾರ್ಯಕರ್ತರು ಮತ್ತು ಬೆಂಬಲಿಗರಿಂದ ಪಟಾಕಿ ಸಿಡಿಸುವಿಕೆ ಮತ್ತು ಜೋರಾದ ಹರ್ಷೋದ್ಗಾರಗಳ ನಡುವೆ ಡಿ.ಕೆ ಶಿವಕುಮಾರ್ ಪ್ರಮಾಣ ವಚನ ಸ್ವೀಕರಿಸಿದರು. ಅಜ್ಜಯ್ಯ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಡಿ.ಕೆ.ಶಿವಕುಮಾರ್ ಬೆನ್ನಲ್ಲೇ ಡಾ.ಜಿ.ಪರಮೇಶ್ವರ್, ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್, ಎಂ.ಬಿ.ಪಾಟೀಲ್, ಕೃಷ್ಣಬೈರೇಗೌಡ, ರಾಮಲಿಂಗಾರೆಡ್ಡಿ, ಸತೀಶ್ ಜಾರಕಿಹೊಳಿ, ಈಶ್ವರ್ ಖಂಡ್ರೆ, ಯು.ಟಿ. ಖಾದರ್, ಪ್ರಿಯಾಂಕ್ ಖರ್ಗೆ, ಯತೀಂದ್ರ ಸಿದ್ದರಾಮಯ್ಯ, ಬೈರತಿ ಸುರೇಶ್, ಶರಣಪ್ರಕಾಶ್ ಪಾಟೀಲ್ ಪ್ರಮಾಣ ವಚನ ಸ್ವೀಕರಿಸಿದರು.

| ಸಂಪುಟ ದರ್ಜೆ ಸಚಿವರು | |
|---|---|
| ಡಾ.ಜಿ.ಪರಮೇಶ್ವರ್, ಡಿಸಿಎಂ | ಪರಿಶಿಷ್ಟ ಜಾತಿ (ಬಲಗೈ) |
| ಕೆ.ಎಚ್.ಮುನಿಯಪ್ಪ | ಪರಿಶಿಷ್ಟ ಜಾತಿ (ಎಡಗೈ) |
| ಯು.ಟಿ.ಖಾದರ್ | ಮುಸ್ಲಿ ಸಮುದಾಯ |
| ರಾಮಲಿಂಗಾರೆಡ್ಡಿ | ರೆಡ್ಡಿ ಒಕ್ಕಲಿಗ |
| ಕೆ.ಜೆ.ಜಾರ್ಜ್ | ಕ್ರಿಶ್ಚಿಯನ್ |
| ಪ್ರಿಯಾಂಕ್ ಖರ್ಗೆ | ದಲಿತ (ಬಲಗೈ) |
| ಸತೀಶ್ ಜಾರಕಿಹೊಳಿ | ಪರಿಶಿಷ್ಟ ಪಂಗಡ |
| ಎಂ.ಬಿ.ಪಾಟೀಲ್ | ಲಿಂಗಾಯತ |
| ಕೃಷ್ಣಬೈರೇಗೌಡ | ಒಕ್ಕಲಿಗ |
| ಯತೀಂದ್ರ ಸಿದ್ದರಾಮಯ್ಯ | ಕುರುಬ |
| ಬೈರತಿ ಸುರೇಶ್ | ಕುರುಬ |
| ಈಶ್ವರ್ ಖಂಡ್ರೆ | ಲಿಂಗಾಯತ |
| ಶರಣಪ್ರಕಾಶ್ ಪಾಟೀಲ್ | ಲಿಂಗಾಯತ |

### ಮಾಲವ್ಯ ಯೋಗ ಮುಹೂರ್ತ

**ಬೆಂಗಳೂರು:** ಡಿ.ಕೆ.ಶಿವಕುಮಾರ್ ಪದಗ್ರಹಣಕ್ಕೆ ಜ್ಯೋತಿಷ್ಯ ಮತ್ತು ಸಂಖ್ಯಾಶಾಸ್ತ್ರದ ಪ್ರಕಾರ ಅತ್ಯಂತ ಅಪರೂಪದ ಹಾಗೂ ಶಕ್ತಿಶಾಲಿ ಮಾಲವ್ಯ ಯೋಗದ ಮುಹೂರ್ತವನ್ನು ನಿಗದಿಪಡಿಸಲಾಗಿತ್ತು. ಡಿಕೆಶಿ ಅವರು ತುಲಾ ಲಗ್ನದಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಪ್ರಸ್ತುತ ಅವರ ಜಾತಕದಲ್ಲಿ ಗುರು ಗ್ರಹ ಉಚ್ಚ ಸ್ಥಿತಿ ಪುಟ 2ಕ್ಕೆ

### ಬಿ.ಕೆ.ಹರಿಪ್ರಸಾದ್ ಸೇರಿ ನಾಲ್ವರಿಗೆ ಪರಿಷತ್ ಸ್ಥಾನ



**ಬೆಂಗಳೂರು:** ವಿಧಾಸಭೆಯಿಂದ ವಿಧಾನಪರಿಷತ್ತಿಗೆ ಚುನಾವಣೆಗೆ ಕಾಂಗ್ರೆಸ್ ನಾಲ್ಕು ಅಭ್ಯರ್ಥಿಗಳನ್ನು ಘೋಷಿಸಿದೆ. ಒಟ್ಟು ಏಳು ಸ್ಥಾನಗಳು ಖಾಲಿ ಇದೆ. 4 ಸ್ಥಾನಗಳಿಗೆ ಅಭ್ಯರ್ಥಿಗಳನ್ನು ಬುಧವಾರ ಹೈಕಮಾಂಡ್ ಅಖೈರು ಮಾಡಿದೆ. ಬಿ.ಕೆ.ಹರಿಪ್ರಸಾದ್, ತಿಪ್ಪಣ್ಣಪ್ಪ ಕಮಕನೂರು, ಪಿ.ವಿ.ಮೋಹನ್, ಶಿವಣ್ಣ ಮಳವಳ್ಳಿ ಅವರ ಹೆಸರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಂತಿಮಗೊಳಿಸಿ ಆದೇಶಿಸಿದ್ದಾರೆ.

### ಡಿಕೆಶಿಗೆ ಅಜ್ಜಯ್ಯನ ಕೃಪೆ: ನೊಣವಿನಕೆರೆ ಶ್ರೀ ಆಶೀರ್ವಾದ




**ಬೆಂಗಳೂರು:** ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ನೊಣವಿನಕೆರೆ ಶ್ರೀ ಶಿವವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಶುಭ ಹಾರೈಸಿದರು.

ನಮ್ಮ ಡಿ.ಕೆ.ಶಿವಕುಮಾರ್ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸುತ್ತಿರುವುದು ವಿಶೇಷ ಎನಿಸಿದೆ. ಶಿವಕುಮಾರ್ ನಮ್ಮ ಮಠದ ಮಗನಾಗಿ, ಶ್ರದ್ಧಾ ಭಕ್ತಿಯಿಂದ ಸೇವೆ ಸಲ್ಲಿಸಿದ್ದಾರೆ. ವೀರ ಗಂಗಾಧರ ಶಿವಾಚಾರ್ಯರ ಕೃಪಾಶೀರ್ವಾದದಿಂದ ಅವರಿಗೆ ಜಯ ಲಭಿಸಿದೆ. ಸಿಎಂ ಕಚೇರಿಯಲ್ಲಿ ಅಜ್ಜಯ್ಯ ಅವರ ಭಾವಚಿತ್ರವಿದೆ. ಹೀಗಾಗಿ ಎಲ್ಲಾ ಭಕ್ತಾದಿಗಳ ಸಂಕಲ್ಪದಿಂದ ಎಲ್ಲರೂ ಗೆದ್ದಿದ್ದಾರೆಂಬ ಸಂತೋಷವಿದೆ. ರೈತರು, ವರ್ತಕರು, ಸೈನಿಕರು, ಮಹಿಳೆಯರು, ಯುವಕರು ಹಾಗೂ ಮುತ್ಸದ್ದಿಗಳ ಸೇವೆ ಮಾಡುವ ಶಕ್ತಿಯನ್ನು ಭಗವಂತ ಅವರಿಗೆ ಕರುಣಿಸಲಿ ಎಂದು ಆಶೀರ್ವದಿಸಿದ್ದಾರೆ.

ಸಿಎಂ ಆಗಲಿರುವ ಡಿಕೆಶಿ ಸೇವೆ ಸರಳ ಹಾಗೂ ಸಜ್ಜನಿಕೆಯಿಂದ ತೃಪ್ತಿಕರವಾಗಿರಲಿ. ಪುಟ 2ಕ್ಕೆ

### ಸೋನಿಯಾಗಾಂಧಿ ಶುಭ ಹಾರೈಕೆ


**ಬೆಂಗಳೂರು:** ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ ಅವರು ಸಿಎಂ ಡಿ.ಕೆ ಶಿವಕುಮಾರ್ ಅವರಿಗೆ ಬುಧವಾರ ದೂರವಾಣಿ ಕರೆ ಮಾಡಿ ಶುಭ ಹಾರೈಸಿದರು.



ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಿರಿ. ಕರ್ನಾಟಕವನ್ನು ಯಶಸ್ವಿಯಾಗಿ ಮುನ್ನಡೆಸುತ್ತೀರಿ ಎಂಬ ಅದಮ್ಯ ವಿಶ್ವಾಸ ನನಗಿದೆ. ಹೊಸ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿ. ಮತ್ತಷ್ಟು ಯಶಸ್ಸು ನಿಮ್ಮದಾಗಲಿ ಎಂದು ಸೋನಿಯಾ ಗಾಂಧಿ ಅವರು ಡಿಕೆ ಶಿವಕುಮಾರ್ ಅವರಿಗೆ ಶುಭಾಶಯ ಹೇಳಿದರು.

### ನೂತನ ಸಿಎಂಗೆ ಮೋದಿ ಅಭಿನಂದನೆ

**ನವದೆಹಲಿ:** ಕರ್ನಾಟಕದ 18ನೇ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಡಿ.ಕೆ.ಶಿವಕುಮಾರ್ ಅವರಿಗೆ



ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ತಿಳಿಸಿದ್ದಾರೆ. ಜನರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಕರ್ನಾಟಕ ಸರ್ಕಾರದೊಂದಿಗೆ ನಿಕಟವಾಗಿ ಕೆಲಸ ಮಾಡುತ್ತದೆ ಎಂದು ನರೇಂದ್ರ ಮೋದಿ ಅವರು ಟ್ವೀಟ್ ಮಾಡಿದ್ದಾರೆ.

## ಪರಮೇಶ್ವರ್ ಏಕೈಕ ಉಪ ಮುಖ್ಯಮಂತ್ರಿ

### ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಡಕ್ಕೆ ಮಣಿದ ಹೈಕಮಾಂಡ್

**ಬೆಂಗಳೂರು:** ರಾಜ್ಯದ ನೂತನ ಉಪ ಮುಖ್ಯಮಂತ್ರಿ ಆಗಿ ಜಿ.ಪರಮೇಶ್ವರ್ ಅವರು ಪ್ರಮಾಣ ವಚನ ಸ್ವೀಕರಿಸಿದರು. ಈ ಮೂಲಕ ಸಂಪುಟ ರಚನೆಯ ಆರಂಭದಿಂದಲೂ ತೀವ್ರ ಕುತೂಹಲ ಮೂಡಿಸಿದ್ದ ಉಪಮುಖ್ಯಮಂತ್ರಿ ಹುದ್ದೆಯ ಸಸ್ಪೆನ್ಸ್ ಕೊನೆಗೂ ತೆರೆಬಿದ್ದಿದೆ.

ಲೋಕಭವದ ಗ್ಲಾಸ್‌ಹೌಸ್‌ನಲ್ಲಿ ನಡೆದ ಸಮಾರಂಭದಲ್ಲಿ ಪರಮೇಶ್ವರ್ ಉಪ ಮುಖ್ಯಮಂತ್ರಿಯಾಗಿ ಡಾ. ಬಿ.ಆರ್.ಅಂಬೇಡ್ಕರ್ ಹೆಸರಿನಲ್ಲಿ ಪ್ರಮಾಣ ಸ್ವೀಕಾರ ಮಾಡಿದರು. ನೂತನ ಉಪಮುಖ್ಯಮಂತ್ರಿಗಳಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹಾಗೂ ನೂತನ ಸಿಎಂ ಡಿಕೆ ಶಿವಕುಮಾರ್ ಅವರು ಹೂಗುಚ್ಛ ನೀಡಿ ಸ್ವಾಗತಿಸಿದರು.

ರಾಜ್ಯದ ಪ್ರಮುಖ ಸಮುದಾಯಗಳಾದ ಲಿಂಗಾಯತ, ಪರಿಶಿಷ್ಟ ಪಂಗಡ, ದಲಿತ ಸಮುದಾಯ ಸೇರಿದಂತೆ 4 ಡಿಸಿಎಂ ಹುದ್ದೆಗಳಿಗೆ ಬೇಡಿಕೆ ಇತ್ತು. ಆದರೆ, ಡಿಸಿಎಂ ಹುದ್ದೆ ಸೃಷ್ಟಿಗೆ ಡಿ.ಕೆ.ಶಿವಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದರು. ಕೊನೆಗೇ ಸಿದ್ದರಾಮಯ್ಯ ಅವರು ಪಟ್ಟು ಹಿಡಿದ ಹಿನ್ನೆಲೆಯಲ್ಲಿ ಪರಮೇಶ್ವರ್ ಅವರಿಗೆ ಡಿಸಿಎಂ ಸ್ಥಾನ



ನೀಡಲು ಹೈಕಮಾಂಡ್ ಒಪ್ಪಿಗೆ ನೀಡಿದೆ ಎನ್ನಲಾಗಿದೆ.

ಪರಮೇಶ್ವರ್ ಅವರು ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಗೃಹ ಸಚಿವರಾಗಿದ್ದರು. 2018ರ ಮೇನಿಂದ 2019ರ ಜುಲೈವರೆಗೆ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಉಪಮುಖ್ಯಮಂತ್ರಿ ಹುದ್ದೆ ಅಲಂಕರಿಸಿದ್ದರು.

ಪ್ರಮುಖ ದಲಿತ ನಾಯಕರಾದ ಪರಮೇಶ್ವರ ಅವರು 2010ರಿಂದ 2018ರವರೆಗೆ ಕರ್ನಾಟಕ ಪುಟ 2ಕ್ಕೆ

## ಯಡಿಯೂರಪ್ಪ, ದೇವೇಗೌಡರ ನಿವಾಸಕ್ಕೆ ಡಿಕೆಶಿ ಭೇಟಿ, ಆಹ್ವಾನ

**ಬೆಂಗಳೂರು:** ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರ ನಿವಾಸಕ್ಕೆ ಡಿ.ಕೆ.ಶಿವಕುಮಾರ್ ಅವರು ಬುಧವಾರ ಬೆಳಗ್ಗೆ ಭೇಟಿ ನೀಡಿ ಪ್ರಮಾಣ ವಚನ ಕಾರ್ಯಕ್ರಮಕ್ಕೆ ಆಹ್ವಾನಿಸಿದರು.

ಬೆಂಗಳೂರಿನ ಪದ್ಮನಾಭನಗರದಲ್ಲಿರುವ ದೇವೇಗೌಡರ ನಿವಾಸಕ್ಕೆ ಆಗಮಿಸಿದ ಡಿ.ಕೆ.ಶಿವಕುಮಾರ್, ಹಿರಿಯ ಮುತ್ಸದ್ದಿ ನಾಯಕನ ಕಾಲಿಗೆ ಬಿದ್ದು ನಮಸ್ಕಾರ ಮಾಡಿ ಆಶೀರ್ವಾದ ಪಡೆದರು. ಸಂಜೆ ನಡೆಯಲಿರುವ ತಮ್ಮ ಪುಟ 2ಕ್ಕೆ





### ಸಿದ್ದುಗೆ ಸಿಡಬ್ಲ್ಯೂಸಿ ಸದಸ್ಯತ್ವ: ಪರಮೋಚ್ಚ ಸಮಿತಿಗೆ ನೇಮಕ

**ನವದೆಹಲಿ:** ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮೂಲಕ ಅತ್ಯಂತ ಗೌರವಯುತವಾಗಿ ಅಧಿಕಾರ ಹಸ್ತಾಂತರ ಮಾಡಿದ್ದ ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಮಹತ್ವದ ಹುದ್ದೆ ನೀಡಿದೆ.



ಪಕ್ಷದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯೂಸಿ) ಸದಸ್ಯ ಸ್ಥಾನ ನೀಡಿ ಹೈಕಮಾಂಡ್ ಆದೇಶ ಹೊರಡಿಸಿದೆ.

ಡಿಕೆಶಿ ಪದಗ್ರಹಣಕ್ಕೂ ಮುನ್ನವೇ ಸಿದ್ದರಾಮಯ್ಯ ಅವರನ್ನು ಸಿಡಬ್ಲ್ಯೂಸಿ ಸದಸ್ಯರಾಗಿ ನೇಮಕ ಮಾಡಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆದೇಶ ಹೊರಡಿಸಿದ್ದಾರೆ. ಈ ಮೂಲಕ ಸಿದ್ದರಾಮಯ್ಯ ಅವರು ಮತ್ತೆ ಪರಮೋಚ್ಚ ಸಮಿತಿಗೆ ಮರಳಿದ್ದಾರೆ.

### ಸ್ಪೀಕರ್ ಸ್ಥಾನಕ್ಕೆ ಖಾದರ್ ರಾಜೀನಾಮೆ

#### ಸಂಪುಟ ದರ್ಜೆ ಸಚಿವರಾಗಿ ಪ್ರಮಾಣ ವಚನ ಸ್ವೀಕಾರ

**ಬೆಂಗಳೂರು:** ರಾಜ್ಯದ ನೂತನ ಸಿಎಂ ಡಿ.ಕೆ ಶಿವಕುಮಾರ್ ಸಂಪುಟದಲ್ಲಿ ಸ್ಥಾನ ಪಡೆದಿರುವ ಯು.ಟಿ ಖಾದರ್ ಅವರು ವಿಧಾನಸಭೆ ಸ್ಪೀಕರ್ ಸ್ಥಾನಕ್ಕೆ ಬುಧವಾರ ರಾಜೀನಾಮೆ ನೀಡಿದ್ದಾರೆ.

ನೂತನ ಡಿ.ಕೆ.ಶಿವಕುಮಾರ್ ಸರ್ಕಾರದ ಭಾಗವಾಗುತ್ತಿರುವ ಹಿನ್ನೆಲೆಯಲ್ಲಿ ವಿಧಾನಸಭೆ ಸ್ಪೀಕರ್ ಹುದ್ದೆಗೆ ಯು.ಟಿ. ಖಾದರ್ ರಾಜೀನಾಮೆ ನೀಡಿದ್ದಾರೆ. ಡೆಪ್ಯುಟಿ ಸ್ಪೀಕರ್ ರುದ್ರಪ್ಪ ಲಮಾಣಿ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ.


ಲೋಕಭವನದಲ್ಲೇ ಡೆಪ್ಯುಟಿ ಸ್ಪೀಕರ್ ಗೆ ಖಾದರ್ ರಾಜೀನಾಮೆ ಪತ್ರ ಸಲ್ಲಿಸಿದರು. ಸಚಿವರಾಗಿ ಪ್ರಮಾಣವಚನ ಸ್ವೀಕರಿಸಲು ಬರುವಂತೆ ನಿಯೋಜಿತ ಸಿಎಂ ಡಿ.ಕೆ. ಶಿವಕುಮಾರ್ ಅವರಿಂದ ಕರೆ ಬೆನ್ನಲ್ಲೇ ತಮ್ಮ ಸ್ಥಾನಕ್ಕೆ ರಾಜೀ



ನಾಮೆ ನೀಡಿದ್ದಾರೆ.

ಸಚಿವ ಸ್ಥಾನದ ವಿಚಾರವಾಗಿ ಪ್ರತಿಕ್ರಿಯಿಸಿರುವ ಯು.ಟಿ.ಖಾದರ್, 'ನಾನು ಯಾವುದೇ ಖಾತೆಗೆ ಬೇಡಿಕೆ ಇಟ್ಟಿಲ್ಲ. ಆದರೆ ಆರೋಗ್ಯ ಖಾತೆ ಅಥವಾ ವಸತಿ ಖಾತೆ ಸಿಕ್ಕರೆ ಒಳಿತು ಎಂಬ ಬಯಕೆ ಇದೆ. ನಾಯಕರು ಯಾವುದೇ ಜವಾಬ್ದಾರಿ ಕೊಟ್ಟರೂ ನಿಭಾಯಿಸುತ್ತೇನೆ. ಯಾವ ಬಾಲ್ ಬಂದರೂ ಬ್ಯಾಟಿಂಗ್ ಮಾಡುತ್ತೇನೆ ಪುಟ 2ಕ್ಕೆ

### ನೂತನ ಮುಖ್ಯಮಂತ್ರಿಗೆ ವಿಧಾನಸೌಧಕ್ಕೆ ಅದ್ದೂರಿ ಸ್ವಾಗತ



**ಬೆಂಗಳೂರು:** ಮುಖ್ಯಮಂತ್ರಿ ಹಾಗೂ ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭದ ಬೆನ್ನಲ್ಲೇ ರಾಜ್ಯದ ಆಡಳಿತ ಕೇಂದ್ರವಾದ ವಿಧಾನಸೌಧದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿತ್ತು.

ಪ್ರಮಾಣ ವಚನ ಮುಗಿದ ತಕ್ಷಣವೇ ಸಿಎಂ ಡಿ.ಕೆ.ಶಿವಕುಮಾರ್ ಮತ್ತು ನೂತನ ಸಚಿವರು ವಿಧಾನಸೌಧಕ್ಕೆ ಆಗಮಿಸುತ್ತಿರುವ ಪುಟ 2ಕ್ಕೆ

## ಹರಿಪ್ರಸಾದ್‌ಗೆ ಕೆಪಿಸಿಸಿ ಸಾರಥ್ಯ

### ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲು ಸೋನಿಯಾ ಗಾಂಧಿ ಮನವೊಲಿಕೆ

**ನವದೆಹಲಿ:** ಮುಖ್ಯಮಂತ್ರಿ ಹಾಗೂ ಸಚಿವರ ಪದಗ್ರಹಣದ ಬೆನ್ನಲ್ಲೇ, ಕೆಪಿಸಿಸಿ ಅಧ್ಯಕ್ಷರಾಗಿ ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರನ್ನು ಎಐಸಿಸಿ ಬುಧವಾರ ರಾತ್ರಿ ನೇಮಕ ಮಾಡಿದೆ.

ಕೆಪಿಸಿಸಿ ಅಧ್ಯಕ್ಷರಾಗಿ ಹರಿಪ್ರಸಾದ್ ಅವರನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇಮಕ ಮಾಡಿ ಆದೇಶಿಸಿದ್ದಾರೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ತಿಳಿಸಿದ್ದಾರೆ.

ಬಿ.ಕೆ.ಹರಿಪ್ರಸಾದ್ ಅವರು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದರು. ಸಚಿವರ ಮೊದಲ ಪಟ್ಟಿಯಲ್ಲಿ ಅವರ ಹೆಸರು ಇರಲಿಲ್ಲ. ಕೆಪಿಸಿಸಿ ಅಧ್ಯಕ್ಷರಾಗುವಂತೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ಹರಿಪ್ರಸಾದ್ ಅವರ ಮನವೊಲಿಸಿದರು ಎನ್ನಲಾಗಿದೆ. ಬಳಿಕ ಹರಿಪ್ರಸಾದ್ ಅವರು ಅಧ್ಯಕ್ಷ ಗಾದಿ ವಹಿಸಿಕೊಳ್ಳಲು ಒಪ್ಪಿದರು.

ಈಡಿಗ ಸಮುದಾಯದ ಹರಿಪ್ರಸಾದ್ ಅವರು ನಾಲ್ಕು ಅವಧಿಗೆ ರಾಜ್ಯಸಭಾ ಸದಸ್ಯರಾಗಿದ್ದರು. ಆರು ವರ್ಷಗಳಿಂದ ವಿಧಾನ ಪರಿಷತ್ ಸದಸ್ಯರಾಗಿದ್ದಾರೆ. ಜೂನ್ 30ಕ್ಕೆ ಅವರ ಪರಿಷತ್ ಸದಸ್ಯತ್ವ ಮುಗಿಯಲಿದೆ. ಪರಿಷತ್ ಚುನಾವಣೆಗೆ ಮತ್ತೆ ಅವರನ್ನು ಕಣಕ್ಕಿಳಿಸಲಾಗಿದೆ.

ಹೈಕಮಾಂಡ್ ಜತೆಗೆ ನಿಕಟ ಸಂಪರ್ಕ ಹೊಂದಿರುವ ಅವರು



ಈ ಹಿಂದೆ 19 ರಾಜ್ಯಗಳ ಉಸ್ತುವಾರಿಯಾಗಿ ಕೆಲಸ ಮಾಡಿದ್ದಾರೆ. ಪ್ರಸ್ತುತ ಹರಿಯಾಣದ ಉಸ್ತುವಾರಿಯಾಗಿದ್ದಾರೆ.


ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಪ್ರಬಲ ಆಕಾಂಕ್ಷಿಯಾಗಿದ್ದರು. ಅವರು ಅಧ್ಯಕ್ಷ ಗಾದಿಯ ಜತೆಗೆ ಸಚಿವ ಸ್ಥಾನಕ್ಕೂ ಪಟ್ಟು ಹಿಡಿದಿದ್ದರು. ಇದಕ್ಕೆ ಹೈಕಮಾಂಡ್ ಸಮ್ಮತಿ ಸೂಚಿಸಿರಲಿಲ್ಲ. ಆನಂತರ, ಹರಿಪ್ರಸಾದ್ ಹೆಸರು ಮುನ್ನೆಲೆಗೆ ಬಂದಿತ್ತು.

ಪ್ರಬಲ ಒಕ್ಕಲಿಗ ಸಮುದಾಯದ ಡಿ.ಕೆ.ಶಿವಕುಮಾರ್ ಈಗ ಮುಖ್ಯಮಂತ್ರಿ. ಜಾತಿ ಸಮೀಕರಣದ ಆಧಾರದಲ್ಲಿ ಈಡಿಗ (ಬಿಲ್ಲವ) ಸಮುದಾಯದ ಹರಿಪ್ರಸಾದ್ ಅವರಿಗೆ ಪಕ್ಷವು ರಾಜ್ಯ ಪುಟ 2ಕ್ಕೆ

### ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್ ಘೋಷಣೆ

**ಬೆಂಗಳೂರು:** ರಾಜ್ಯದ ಎಲ್ಲಾ ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ನೂತನ ಸಿಎಂ ಡಿಕೆ ಶಿವಕುಮಾರ್ ಸಿಹಿ ಸುದ್ದಿ ನೀಡಿದ್ದಾರೆ.

ಸಿಎಂ ಆಗಿ ಅಧಿಕಾರ ಸ್ವೀಕರಿಸಿದ ಬಳಿಕ ವಿಧಾನ ಸೌಧದಲ್ಲಿ ಬುಧವಾರ ರಾತ್ರಿ ಮೊದಲ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್ ಘೋಷಣೆ ಮಾಡಿದ್ದಾರೆ.



ಇಷ್ಟು ದಿನ ವಿದ್ಯಾರ್ಥಿನಿಯರಿಗೆ ಮಾತ್ರ ನೀಡುತ್ತಿದ್ದ ಉಚಿತ ಬಸ್ ಪಾಸ್‌ಗಳನ್ನ ಶಾಲಾ ಬಾಲಕರು, ಕಾಲೇಜು ಯುವಕರಿಗೂ ವಿಸ್ತರಣೆ ಮಾಡಲು ನಿರ್ಧರಿಸಿದ್ದೇವೆ. ಆದರೆ ಅವರು ವಿದ್ಯಾರ್ಥಿಗಳು ಎಂದು ತಿಳಿಯಲು ಅರ್ಜಿ ಸಲ್ಲಿಕೆ ಮಾಡಬೇಕಾಗುತ್ತದೆ ಎಂದು ಹೇಳಿದರು.

ಎಷ್ಟು ಸಾವಿರ ಕೋಟಿಯಾದರೂ ಸರಿ ನಾವು ಇದನ್ನೂ ಮಾಡುತ್ತೇವೆ. ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್ ಕೊಡಬೇಕು ಅಂತ ತೀರ್ಮಾನಿಸಿರುವುದಾಗಿ ಸಿಎಂ ಡಿಕೆ ಶಿವಕುಮಾರ್ ತಿಳಿಸಿದರು. ಪುಟ 2ಕ್ಕೆ

### ಹೈಕಮಾಂಡ್ ನನ್ನ ಕಡೆಗಣಿಸಿಲ್ಲ, ಜವಾಬ್ದಾರಿ ನೀಡಿದೆ: ಪರಮೇಶ್ವರ್

**ಬೆಂಗಳೂರು:** ಹೈಕಮಾಂಡ್ ನಿಂದ ನನಗೆ ಯಾವುದೇ ಅನ್ಯಾಯವಾಗಿಲ್ಲ. ಉಪ ಮುಖ್ಯಮಂತ್ರಿಯಾಗಿ ನೇಮಕಗೊಂಡಿರುವುದಕ್ಕೆ ಸಂಪೂರ್ಣ ತೃಪ್ತರಾಗಿರುವುದಾಗಿ ಜಿ.ಪರಮೇಶ್ವರ್ ಬುಧವಾರ ಹೇಳಿದರು.

ಮುಖ್ಯಮಂತ್ರಿ ಹುದ್ದೆಗೆ ತಮ್ಮನ್ನು ಕಡೆಗಣಿಸಲಾಗಿದೆ ಎಂಬ ಹೇಳಿಕೆಗಳನ್ನು ಅವರು ತಳ್ಳಿಹಾಕಿದರು. ಪಕ್ಷದ ನಾಯಕತ್ವ ನನಗೆ ಒಂದು ಪ್ರಮುಖ ಜವಾಬ್ದಾರಿಯನ್ನು ನೀಡಿದೆ. ನಾನು ಕಾಂಗ್ರೆಸ್ ಹೈಕಮಾಂಡ್‌ನ ನಿರ್ಧಾರವನ್ನು ಒಪ್ಪಿಕೊಂಡಿದ್ದೇನೆ ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಅನುಭವವನ್ನು ಕಡೆಗಣಿಸಲಾಗಿದೆ ಎನ್ನುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪಕ್ಷದ ನಿರ್ಧಾರಕ್ಕೆ ಬದ್ಧರಾಗಿರುವುದಾಗಿ ಮತ್ತು ಉಪಮುಖ್ಯಮಂತ್ರಿ ಹುದ್ದೆಯನ್ನು ಜನರಿಗೆ ಸೇವೆ ಸಲ್ಲಿಸುವ ಅವಕಾಶ ಎಂದು ಪರಿಗಣಿಸಿರುವುದಾಗಿ ಹೇಳಿದರು.



ನನಗೂ ಮುಖ್ಯಮಂತ್ರಿಯಾಗುವ ಆಸೆ ಇತ್ತು. ಆದರೆ ಹೈಕಮಾಂಡ್ ಯಾವುದೇ ನಿರ್ಧಾರ ತೆಗೆದುಕೊಂಡರೂ, ಪಕ್ಷದ ಶಿಸ್ತಿನ ಸೈನಿಕರಾಗಿ ನಾವು ಅದನ್ನು ಸ್ವೀಕರಿಸಬೇಕು. ಪಕ್ಷದ ನಾಯಕತ್ವಕ್ಕೆ ಧನ್ಯವಾದಗಳು. ತಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಏಕೆಂದರೆ, ಸದ್ಯದ ಪರಿಸ್ಥಿತಿಯಲ್ಲಿ, ನನ್ನನ್ನು ಉಪಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಗಿದೆ. ನನ್ನ ಮೇಲೆ ಇಟ್ಟಿರುವ ನಂಬಿಕೆ ಮತ್ತು ವಿಶ್ವಾಸಕ್ಕೆ ನಾನು ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಲು ಬಯಸುತ್ತೇನೆ. ಕಾಂಗ್ರೆಸ್ ಪುಟ 2ಕ್ಕೆ

# ಸಾಮಾಜಿಕ ಪ್ರಜ್ಞೆ ಮೂಡಿಸಿದ ಶ್ರೀ ಮಹದೇಶ್ವರರು



ಮೈಸೂರು: ಶ್ರೀ ಮಹದೇಶ್ವರರು ಸಾಮಾಜಿಕ ಪ್ರಜ್ಞೆ ಮೂಡಿಸಿ, ಜನಮಾನಸದಲ್ಲಿ ಉಳಿದಿರುವ ಸಂತರು ಎಂದು ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ. ಎಸ್.ಶಿವರಾಜಪ್ಪ ಬಣ್ಣಿಸಿದರು.

ಜಿಲ್ಲಾ ಮತ್ತು ತಾಲೂಕು ಶರಣ ಸಾಹಿತ್ಯ ಪರಿಷತ್ತು, ಬಸವ ಅಧ್ಯಯನ ಕೇಂದ್ರ ವತಿಯಿಂದ ನಗರದ ಹೆಬ್ಬಾಳು ವರ್ತುಲ ರಸ್ತೆಯ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಗೌಡರ ಸಿದ್ದಪ್ಪ ಮತ್ತು ಶರಣೆ ಮರಮ್ಮ ದತ್ತಿ ಉಪನ್ಯಾಸದಲ್ಲಿ 'ಶ್ರೀ ಮಲೆ ಮಹದೇಶ್ವರರ ಸಾಮಾಜಿಕ ಪ್ರಜ್ಞೆ' ಕುರಿತು ಮಾತನಾಡಿದ ಅವರು, ಗಿರಿಜನರು ಮತ್ತು ಬೇಡಗಂಪಣರು ಸೇರಿದಂತೆ ಶೋಷಿತರ ಕಣ್ಣೀರು ಒರೆಸಿದ ಮಹಾಸಂತರಾದ ಮಹದೇಶ್ವರರು ಸಮಾಜಮುಖಿ ಹಾಗೂ ಜನಮುಖಿಯಾಗಿ ಇದ್ದು, ದೊಡ್ಡ ಕ್ರಾಂತಿ ಮಾಡಿದರು ಎಂದರು.

ಎಲ್ಲರಿಗೂ ಬುದ್ಧ ಪ್ರೇರಕ ಶಕ್ತಿ. ಶಂಕರಾಚಾರ್ಯ, ಬಸವಣ್ಣ ಮೊದಲಾದವರು ಆಧ್ಯಾತ್ಮದ ಮಹಾಮೇರು, ಮಹದೇಶ್ವರರು ಜಾನಪದದ ಮಹಾಸಿರಿ. ಇದರಿಂದಾಗಿಯೇ ಇಡೀ ವಿಶ್ವದಲ್ಲಿಯೇ ಫಿನ್‌ಲೆಂಡ್ ನಂತರ ಮಲೈ ಮಹದೇಶ್ವರ ಜಾನಪದಕ್ಕೆ ಹೆಚ್ಚಿನ ಮಹತ್ವ ಇದೆ. ರಾಚಪ್ಪಾಜಿ, ಸಿದ್ದಪ್ಪಾಜಿ, ಮಂಟೇಸ್ವಾಮಿ ಕಾವ್ಯಗಳಿಗೆ ಮಹದೇಶ್ವರ ಜಾನಪದವೇ ಶಕ್ತಿ. ಪ್ರಸ್ತುತ ದಿನಮಾನಗಳಲ್ಲಿ ಎಲ್ಲಾ ಮಹನೀಯರನ್ನು ಆಯಾ ಜಾತಿಗೆ ಸೀಮಿತಿಗೊಳಿಸುತ್ತಿರುವುದು ದುರಂತ ಎಂದು ವಿಷಾದಿಸಿದರು.

ಅಧ್ಯಕ್ಷತೆ ವಹಿಸಿದ್ದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ವೂಡೇ ಪಿ.ಕೃಷ್ಣ ಮಾತನಾಡಿ, ಮಕ್ಕಳಿಗೆ ಹಿರಿಯ ಆದರ್ಶ ವ್ಯಕ್ತಿಗಳನ್ನು ಪರಚಯಿಸುವ ದೃಷ್ಟಿಯಿಂದ ಬಸವಮಾರ್ಗಿ ಶತಾಯುಷಿಗಳನ್ನು ಕರೆಸಿ, ಗೌರವಿಸಲಾಗುತ್ತಿದೆ. ವಿದ್ಯಾರ್ಥಿಗಳು ಇಂಥವರ ಆದರ್ಶ ಪಾಲಿಸಬೇಕು ಎಂದರು. ಜಾನಪದ ಅಕಾಡೆಮಿಯ ಸದಸ್ಯ, ಗಾಯಕ ದೇವಾನಂದ ವರಪ್ರಸಾದ್ ಜಾನಪದ ಗಾಯನದ ಮೂಲಕ ಮಲೈ ಮಹದೇಶ್ವರರ ಜೀವನ ವೃತ್ತಾಂತವನ್ನು ಪರಿಚಯಿಸಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಹೆಳವರಹುಂಡಿ ಸಿದಪ್ಪ ಮಾತನಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಂ. ಚಂದ್ರಶೇಖರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಶೇಷಾದ್ರಿಪುರಂ ಆಡಳಿತ ಮಂಡಳಿಯ ಬಿ.ಎಂ. ಅನಂತರಾಮ್, ಪದವಿ ಕಾಲೇಜಿನ ಪ್ರಾಂಶುಪಾಲೆ ಡಾ.ಸೌಮ್ಯಾ ಈರಪ್ಪ ಇದ್ದರು. ಇದೇ ಸಂದರ್ಭದಲ್ಲಿ ಶತಾಯುಷಿ ಬಸವ ಮಾರ್ಗಿಗಳಾದ ಮೈಸೂರಿನ ಶಿಕ್ಷಣ ಕ್ಷೇತ್ರದ ಪ್ರೊ.ಬಿ.ಎಸ್. ಬಸವರಾಜಯ್ಯ, ಸ್ವಾತಂತ್ರ್ಯ ಹೋರಾಟಗಾರ, ಕೆ.ಆರ್. ನಗರ ವೈ.ಎಸ್. ರೇವಣ್ಣ, , ಮೈಸೂರಿನ ಸಮಾಜ ಸೇವಕ ಮಾಡ್ರಹಳ್ಳಿ ಬಸವಣ್ಣ, , ಶರಣತತ್ವ ಪ್ರಚಾರಕರಾದ ಮೈಸೂರಿನ ಎಂ.ಬಿ. ವೀರಭದ್ರಪ್ಪ ಅವರನ್ನು ಗೌರವಿಸಲಾಯಿತು. ಚಿತ್ರದುರ್ಗದ ಕೂನಬೇವು ಗ್ರಾಮದ ಸಹಜ ಕೃಷಿಕ ಜೆ. ತಿಪ್ಪರುದ್ರಯ್ಯ, ಟಿ. ನರಸೀಪುರದ ಆದರ್ಶ ಗೃಹಿಣಿ ಗೌರಮ್ಮ ಪುಟ್ಟಮಾದಪ್ಪ ಅವರನ್ನು ಅವರ ನಿವಾಸಕ್ಕೆ ತೆರಳಿ ಅಭಿನಂದಿಸಲಾಯಿತು.

# ಡಿಕೆಶಿ ಅಭಿಮಾನಿಗಳ ಸಂಭ್ರಮಾಚರಣೆ



ಚಾಮರಾಜನಗರ, ರಾಜ್ಯದ 25ನೇ ನೂತನ ಮುಖ್ಯಮಂತ್ರಿ ಆಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಸ್ವೀಕರಿಸಿದ ಹಿನ್ನೆಲೆಯಲ್ಲಿ ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದ ವತಿಯಿಂದ ನಗರದಲ್ಲಿ ಸಂಭ್ರಮಾಚರಣೆ ಮಾಡಲಾಯಿತು.

ಬೆಂಗಳೂರಿನ ವಿಧಾನಸೌಧದಲ್ಲಿ ನೂತನ ಮುಖ್ಯಮಂತ್ರಿ ಆಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಸ್ವೀಕರಿಸುತ್ತಿದ್ದಂತೆ ನಗರದ ಭುವನೇಶ್ವರಿ ವೃತ್ತದಲ್ಲಿ ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ದಿಲೀಪ್ ಕುದರ್, ತಾಲೂಕು ಅಧ್ಯಕ್ಷ ಸಿದ್ದರಾಜು ದೊಡ್ಡರಾಯಪೇಟೆ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಅಭಿಮಾನಿಗಳು ಡಿ.ಕೆ.ಶಿವಕುಮಾರ್ ಭಾವಚಿತ್ರ ಹಿಡಿದು ಪಟಾಕಿ ಸಿಡಿಸಿ, ಸಿಹಿಹಂಚಿ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರ ಜೈಕಾರ ಕೂಗಿ ಸಂಭ್ರಮಿಸಿದರು. ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಅಖಿಲ ಕರ್ನಾಟಕ ಡಿ.ಕೆ.ಶಿವಕುಮಾರ್ ಅಭಿಮಾನಿಗಳ ಸಂಘ ಜಿಲ್ಲಾಧ್ಯಕ್ಷ ದಿಲೀಪ್ ಕುದರ್, ತಾಲೂಕು ಅಧ್ಯಕ್ಷ ಸಿದ್ದರಾಜು ಮಾತನಾಡಿ, ರಾಜ್ಯದ 25ನೇ ಮುಖ್ಯಮಂತ್ರಿ ಆಗಿ ಡಿ.ಕೆ.ಶಿವಕುಮಾರ್ ಪದಗ್ರಹಣ ಸ್ವೀಕರಿಸಿದ ಹಿನ್ನಲೆಯಲ್ಲಿ ಅವರ ಅಭಿಮಾನಿಗಳಾದ ನಾವೆಲ್ಲರೂ ಪಟಾಕಿ ಸಿಡಿಸಿ, ಸಿಹಿ ಸಂಭ್ರಮಾಚರಣೆ ಮಾಡಲಾಗಿದೆ. ಅವರ ಅಧಿಕಾರ ಅವಧಿ ಯಶಸ್ವಿಯಾಗಲಿ ರಾಜ್ಯದಲ್ಲಿ ಉತ್ತಮ ಆಡಳಿತ ನಡೆಸಿ ಜನಪರ ಕಾರ್ಯಕ್ರಮಗಳನ್ನು ಜಾರಿಗೆ ತಂದು ದೇಶಕ್ಕೆ ಮಾದರಿ ಮುಖ್ಯಮಂತ್ರಿ ಆಗಲಿ ಎಂದು ಆಶಿಸಿದರು. ಮುಂದಿನ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಹೆಚ್ಚಿನ ಸ್ಥಾನಗಳೊಂದಿಗೆ ಅಧಿಕಾರ ಬರಲಿ, ಎಂದು ಆಶಿಸಿದರು. ಅಭಿಮಾನಿಗಳ ಸಂಘದ ಪ್ರಶಾಂತ್, ಲೋಹಿತ್ ಅಪ್ಪು, ಉಮಾಪತಿ, ನವೀನ್ ಕ್ವಾಲಿಟಿ, ಪುರುಷೋತ್ತಮ, ಶಿವಶಂಕರ್, ನವೀನ್, ಉಮ್ಮತ್ತೂರು ಚಂದ್ರು, ಜಗದೀಶ್ ಉತ್ತುವಳ್ಳಿ, ಗೋವಿಂದ ಗೌಡ, ನಲ್ಲೂರು, ಹರೀಶ್, ಮಹೇಶ್ ಮಂಜು, ಮನೋಜ್, ನಾಗರಾಜು,ರಮೇಶ್ ಆನಂತ್ ಕುಮಾರ್, ಉಮೇಶ್, ಮಂಜು, ಭಾಗವಹಿಸಿದ್ದರು.

**ಮೊದಲ ಪುಟದಿಂದ**

## ನೂತನ ಮುಖ್ಯಮಂತ್ರಿಗೆ ವಿಧಾನಸೌಧಕ್ಕೆ ಅದ್ದೂರಿ ಸ್ವಾಗತ

ಹಿನ್ನೆಲೆಯಲ್ಲಿ ಭರ್ಜರಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಹೊಸ ಸರ್ಕಾರದ ಸ್ವಾಗತಕ್ಕಾಗಿ ವಿಧಾನಸೌಧದ ಪ್ರಮುಖ ದ್ವಾರಗಳನ್ನು ವಿನೂತನವಾಗಿ ಅಲಂಕರಿಸಲಾಗಿತ್ತು. ಬಣ್ಣ ಬಣ್ಣದ ಆಕರ್ಷಕ ಹೂಗಳನ್ನು ಬಳಸಿ ದ್ವಾರಗಳಿಗೆ ತೋರಣ ಹಾಗೂ ವಿಶೇಷ ವಿನ್ಯಾಸದ ಅಲಂಕಾರ ಮಾಡಲಾಗಿತ್ತು. ಪ್ರಮಾಣ ವಚನ ಸ್ವೀಕರಿಸಿದ ತಕ್ಷಣವೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇರವಾಗಿ ವಿಧಾನಸೌಧಕ್ಕೆ ಆಗಮಿಸಿದರು.

## ಸಿಎಂ ಪ್ರಮಾಣಕ್ಕೆ ಮಾಲವ್ಯ ಯೋಗ ಮುಹೂರ್ತ ನಿಗದಿ

ಯಲ್ಲಿದೆ. ದಶಮಭಾವ ಬಲವಾಗಿರುವುದರಿಂದ ಮುಂಬರುವ ದಿನಗಳಲ್ಲಿ ಎಷ್ಟು ದೊಡ್ಡ ಸವಾಲುಗಳು ಎದುರಾದರೂ ಅದನ್ನೆಲ್ಲ ಮೆಟ್ಟಿನಿಂತು ಜನಪರ ಹಾಗೂ ಸುಗಮ ಆಡಳಿತ ನಡೆಸಲು ಈ ಮುಹೂರ್ತ ಹಾದಿ ಸುಗಮ ಮಾಡಿಕೊಡಲಿದೆ ಎಂಬ ಬಲವಾದ ನಂಬಿಕೆ ಇದೆ. ಹೀಗಾಗಿ ಈ ಮುಹೂರ್ತವನ್ನು ನಿಗದಿ ಮಾಡಲಾಗಿದೆ ಎನ್ನಲಾಗಿದೆ.

## ಯಡಿಯೂರಪ್ಪ, ದೇವೇಗೌಡರ ನಿವಾಸಕ್ಕೆ ಡಿಕೆಶಿ ಭೇಟಿ, ಆಹ್ವಾನ

ಪ್ರಮಾಣವಚನ ಕಾರ್ಯಕ್ರಮಕ್ಕೆ ಬರುವಂತೆ ಅತ್ಯಂತ ಗೌರವಪೂರ್ವಕವಾಗಿ ಆಹ್ವಾನಿಸಿದರು. ರಾಜ್ಯದ ಸಮಗ್ರ ಅಭಿವೃದ್ಧಿ ಹಾಗೂ ಸುಗಮ ಆಡಳಿತಕ್ಕಾಗಿ ಹಿರಿಯರ ಮಾರ್ಗದರ್ಶನ ಮತ್ತು ಸಹಕಾರ ಸದಾ ಇರಬೇಕೆಂದು ಕೋರಿದರು. ಇದಕ್ಕೂ ಮುನ್ನ ಡಿ.ಕೆ.ಶಿವಕುಮಾರ್ ಅವರು, ಬಿಜೆಪಿ ಹಿರಿಯ ನಾಯಕ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನಿವಾಸಕ್ಕೆ ಭೇಟಿ ನೀಡಿದರು. ಬೆಂಗಳೂರಿನ ಡಾಲರ್ಸ್ ಕಾಲೋನಿಯ ಯಡಿಯೂರಪ್ಪ ಅವರ ಅಧಿಕೃತ ನಿವಾಸ ಧವಳಗಿರಿಗೆ ಆಗಮಿಸಿದ ಡಿ.ಕೆ.ಶಿವಕುಮಾರ್ ಪ್ರಮಾಣವಚನ ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ನೀಡಿ ಆಹ್ವಾನಿಸಿದರು. ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಲು ರಾಜ್ಯದ ಇಬ್ಬರೂ ಹಿರಿಯ ನಾಯಕರನ್ನು ಖುದ್ದಾಗಿ ಆಹ್ವಾನಿಸುವ ಮೂಲಕ ಡಿಕೆಶಿ ಹೊಸ ರಾಜಕೀಯ ಸಂಪ್ರದಾಯಕ್ಕೆ ನಾಂದಿ ಹಾಡಿದರು.

## ಹೈಕಮಾಂಡ್ ನನ್ನ ಕಡೆಗಣಿಸಿಲ್ಲ, ಜವಾಬ್ದಾರಿ ನೀಡಿದೆ: ಪರಮೇಶ್ವರ್

ಸಿದ್ಧಾಂತ ಮತ್ತು ಪ್ರಣಾಳಿಕೆಗೆ ಅನುಗುಣವಾಗಿ ಕೆಲಸ ಮಾಡಲು ಸಿಕ್ಕ ಮತ್ತೊಂದು ಅವಕಾಶವೆಂದು ಪರಿಗಣಿಸಿದ್ದೇನೆ ಎಂದು ಪರಮೇಶ್ವರ್ ಹೇಳಿದರು. ಸರ್ಕಾರದಲ್ಲಿ ನನಗೆ ಯಾವ ಖಾತೆ ನೀಡಲಾಗುವುದು ಎಂದು ತಿಳಿದಿಲ್ಲ. ಯಾವುದೇ ಖಾತೆ ವಹಿಸಿದರೂ, ನಾನು ಅದರಲ್ಲಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

## ಸಿದ್ದುಗೆ ಸಿಡಬ್ಲ್ಯೂಸಿ ಸದಸ್ಯತ್ವ: ಪರಮೋಚ್ಚ ಸಮಿತಿಗೆ ನೇಮಕ

ಹಿಂದೆ 2018ರಲ್ಲಿ ಆಗಿನ ಪಕ್ಷದ ಮುಖ್ಯಸ್ಥ ರಾಹುಲ್ ಗಾಂಧಿ ಅವರ ಪುನರ್ ರಚನೆಯಲ್ಲಿ, ಸಿದ್ದರಾಮಯ್ಯ ಅವರನ್ನು ಸಿಡಬ್ಲ್ಯೂಸಿಗೆ ಸೇರಿಸಲಾಗಿತ್ತು. ಆದರೆ 2019ರಲ್ಲಿ ಅವರನ್ನು ಕರ್ನಾಟಕ ವಿಧಾನಸಭೆ ವಿರೋಧ ಪಕ್ಷದ ನಾಯಕರನ್ನಾಗಿ ನೇಮಿಸಿದಾಗ ಸಿಡಬ್ಲ್ಯೂಸಿ ಸ್ಥಾನದಿಂದ ಕೈಬಿಡಲಾಗಿತ್ತು.

## ಡಿಕೆಶಿಗೆ ಅಜ್ಜಯ್ಯನ ಕೃಪೆ: ನೊಣವಿನಕೆರೆ ಶ್ರೀ ಆಶೀರ್ವಾದ

ಅವರ ಮೇಲೆ ಮಠದ ಹಾಗೂ ಗುರುಗಳ ಆಶೀ ರ್ವಾದ ಇದೆ. ಸಿಎಂ ಪ್ರಮಾಣ ವಚನದ ಮುಹೂರ್ತ ಕೂಡ ಚೆನ್ನಾಗಿದೆ. ಗುರುನುಡಿದ ಮುಹೂರ್ತ ರಾಜಯೋಗ, ಪರಿಪೂರ್ಣವಾ ಗಿರಲಿದೆ ಎಂದು ಅವರು ತಿಳಿಸಿದ್ದಾರೆ.

## ಪರಮೇಶ್ವರ್ ಏಕೈಕ ಉಪ ಮುಖ್ಯಮಂತ್ರಿ

ಪ್ರದೇಶ ಕಾಂಗ್ರೆಸ್ ಸಮಿತಿಯ (ಕೆಪಿಸಿಸಿ) ಅಧ್ಯಕ್ಷರಾಗಿ ದಾಖಲೆಯ ಎಂಟು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ಡಿ.ಕೆ.ಶಿವಕುಮಾರ್ ಮತ್ತು ಪರಮೇಶ್ವರ್ ಅವರು ಸಿದ್ದರಾಮಯ್ಯ ಅವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಕೃತಜ್ಞತೆ ಸಲ್ಲಿಸಿದರು.

## ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್ ಘೋಷಣೆ

ಬಿ ಖಾತೆಯಿಂದ ಎ ಖಾತೆಗೆ ವರ್ಗಾವಣೆಯನ್ನು ಬೆಂಗಳೂರಿನಿಂದ ಇಡೀ ರಾಜ್ಯಕ್ಕೆ ವಿಸ್ತರಣೆ ಮಾಡಲಾಗುವುದು. 2500 ಚದರ ಅಡಿ ವರೆಗಿನ ಮನೆಗಳಿಗೆ ಒಸಿ, ಸಿಸಿಯಿಂದ ವಿನಾಯಿತಿ ನೀಡಲು ನಿರ್ಧರಿಸಲಾಗಿದೆ ಎಂದು ಡಿಕೆಶಿ ತಿಳಿಸಿದರು.

## ಸ್ಪೀಕರ್ ಸ್ಥಾನಕ್ಕೆ ಖಾದರ್ ರಾಜೀನಾಮೆ

ಎಂದು ಅವರು ತಿಳಿಸಿದರು. ಸ್ಪೀಕರ್ ಆಗಿ ಮೂರು ವರ್ಷಗಳ ಅವಧಿಯಲ್ಲಿ ಸಹಕಾರ ನೀಡಿದ್ದಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಯು.ಟಿ. ಖಾದರ್ ಧನ್ಯವಾದ ತಿಳಿಸಿದರು. ಲೋಕಭವನಕ್ಕೆ ತೆರಳಿ ಗವರ್ನರ್ ಅವರನ್ನು ಭೇಟಿಯಾದ ಅವರು, ರಾಜ್ಯಪಾಲರಿಗೆ ರಾಜೀನಾಮೆ ವಿಷಯ ತಿಳಿಸಿದರು.

## ಹರಿಪ್ರಸಾದ್‌ಗೆ ಕೆಪಿಸಿಸಿ ಸಾರಥ್ಯ

ಘಟಕದ ಚುಕ್ಕಾಣಿ ನೀಡಿದೆ. ಮುಂದಿನ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳ ಚುನಾವಣೆ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳಿಗೆ ಪಕ್ಷವನ್ನು ಸಜ್ಜುಗೊಳಿಸುವ ಸವಾಲು ಅವರ ಮುಂದಿದೆ. ಮುಖ್ಯಮಂತ್ರಿ ಜತೆಗೆ ಸಮನ್ವಯದಿಂದ ಕಾರ್ಯನಿರ್ವಹಿಸಿ ಸಂಘಟನೆಗೆ ಚುರುಕು ಮುಟ್ಟಿಸುವ ಹೊಣೆಯೂ ಅವರ ಎದುರಿಗೆ ಇದೆ.

# ರಾಮನಗರದಲ್ಲಿ ಕಾಂಗ್ರೆಸ್ ಸಂಭ್ರಮ

## ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ : ಡಿಸಿಸಿ ಕಚೇರಿಯಲ್ಲಿ ಹೋಮ, ಪೂಜೆ






ರಾಮನಗರ: ಕನಕಪುರ ಶಾಸಕ ಡಿ.ಕೆ.ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ ಜಿಲ್ಲೆಯಲ್ಲಿ ಸಂಭ್ರಮ ಮನೆ ಮಾಡಿತ್ತು. ಡಿ.ಕೆ.ಶಿವಕುಮಾರ್ ಅವರು ಕರ್ನಾಟಕದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದು, ಜಿಲ್ಲೆಯಿಂದ 5ನೇ ರಾಜಕರಣಿ.

ಕಾಂಗ್ರೆಸ್ ಕಾರ್ಯಕರ್ತರ ಜೊತೆಗೆ ಡಿಕೆಶಿ ಅವರ ಅಭಿಮಾನಿಗಳು ಸಿಹಿ ವಿತರಿಸಿ ಸಂಭ್ರಮಿಸಿದರು. ತಮ್ಮ ನೆಚ್ಚಿನ ನಾಯಕ ರಾಜ್ಯದ ಅಗ್ರ ಹುದ್ದೆಯನ್ನು ಅಲಂಕರಿಸಿದ್ದು ತಮ್ಮೆಲ್ಲರ ಬಹುದಿನಗಳ ಆಶಯ ಈಡೇರಿದೆ ಎಂದು ಸಂತಸ ವ್ಯಕ್ತಪಡಿಸಿದರು.

**ನುರಿತ ರಾಜಕರಣಿ, ಉತ್ತಮ ಆಡಳಿತ – ಪಾರ್ವತಮ್ಮ**

ನಗರಸಭೆ ಮಾಜಿ ಅಧ್ಯಕ್ಷೆ ಬಿ.ಸಿ.ಪಾರ್ವತಮ್ಮ ಮಾತನಾಡಿ, ಡಿ.ಕೆ.ಶಿವಕುಮಾರ್ ನುರಿತ ರಾಜಕಾರಣಿ, 8 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ, ಸಚಿವರಾಗಿ ಹಲವಾರು ಖಾತೆಗಳನ್ನು ನಿಭಾಯಿಸಿದ್ದಾರೆ. ಉಪಮುಖ್ಯಮಂತ್ರಿಗಳಾಗಿ ನಾಡಿನ ಜನರ ನಾಡಿ ಮಿಡಿತವನ್ನು ಅರ್ಥಮಾಡಿಕೊಂಡಿದ್ದಾರೆ. ಡಿಕೆಶಿ ಅವರು ಇದೀಗ ಮುಖ್ಯಮಂತ್ರಿಯಾಗಿದ್ದಾರೆ. ಆಡಳಿತದಲ್ಲಿ ಅನುಭವವ ಇರುವ ಡಿಕೆಶಿ ಅವರು ರಾಜ್ಯದ ಜನರಿಗೆ ಉತ್ತಮ ಆಡಳಿತ ಕೊಡುತ್ತಾರೆ ಎಂದರು. ಅವರಿಗೆ ಎಷ್ಟೇ ಸಂಕಷ್ಟ ಬಂದರೂ ಸಹ ಎದೆಗುಂದಲಿಲ್ಲ. ಹಿಡಿದ ಹಠಸಾಧನೆ ಮಾಡಿದ್ದಾರೆ. ಈಗ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿರುವುದು ನಮ್ಮೆಲ್ಲರಿಗೂ ಬಹಳ ಸಂತಸ ತಂದಿದೆ ಎಂದರು.

ಜಿಲ್ಲಾ ಪಂಚಾಯಿಯಿ ಮಾಜಿ ಸದಸ್ಯೆ ಮಂಜುಳಾ ಮರಿದೇವರು, ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮಗುರುವೇಗೌಡ, ಸದಸ್ಯರಾದ ವಿಜಯ ಕುಮಾರಿ, ಸಮದ್ ಮಹಿಳಾ ಮುಖಂಡರಾದ ಲೀಲಾವತಿ, ಗೀತಾ, ಶೀಲಾ ಮತ್ತಿತರರು ಇದ್ದರು.

### ಮಹಿಳಾ ಕಾಂಗ್ರೆಸ್ಸಿಗರ ಸಂಭ್ರಮ

ನಗರದ ಐಜೂರು ವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಪಕ್ಷದ ಮಹಿಳಾ ಘಟಕದ ಪದಾಧಿಕಾರಿಗಳು ನಾಗರೀಕರಿಗೆ ಸಿಹಿ ವಿತರಿಸಿ, ಪಟಾಕಿ ಸಿಡಿಸಿ ತಮ್ಮ ಸಂತಸ ವ್ಯಕ್ತಪಡಿಸಿದರು. ಡಿಕೆಶಿ ಪರ ಘೋಷಣೆಗಳನ್ನು ಕೂಗಿ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ, ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಉಪಾಧ್ಯಕ್ಷೆ ಮಂಗಳಮ್ಮ ಶಂಭೂಗೌಡ, ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿ ಆಗಬೇಕು ಎಂದು ತಾವೆಲ್ಲ ಕೆಂಗಲ್‌ನಲ್ಲಿರುವ ಶ್ರೀ ಆಂಜನೇಯ ಸ್ವಾಮಿ, ಶ್ರೀ ಶನೈಶ್ಚರಸ್ವಾಮಿ, ಶ್ರೀ ಮಂಠೇದ ಲಿಂಗಯ್ಯ ದೇವರುಗಳಲ್ಲಿ ಪ್ರಾರ್ಥಿಸಿದ್ದಾಗಿ ತಿಳಿಸಿದರು. ತಮ್ಮೆಲ್ಲರ ಪ್ರಾರ್ಥನೆಗೆ ದೇವರು ಫಲ ಕೊಟ್ಟಿದ್ದಾರೆ ಎಂದು ಸಂತಸ ವ್ಯಕ್ತಪಡಿ ಸಿದರು. ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಸದೃಡವಾಗಿ ಸಂಘಟನೆ ಆಗಿರುವುದು ಅವರ ಸ್ಫೂರ್ತಿಯಿಂದ, ಅವರ ಮಾರ್ಗದರ್ಶನದಲ್ಲಿ ಮಹಿಳಾ ಕಾರ್ಯಕರ್ತರುಗಳಾದ ನಾವುಗಳು ಸೂಕ್ತ ಸ್ಥಾನಮಾನ ಪಡೆಯಲು ಸಾಧ್ಯವಾಗಿದೆ. ನಾನು ನಗರಸಭೆ ಸದಸ್ಯಳಾಗಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು ಅವರುಗಳ ಸಹಕಾರದಿಂದ ಎಂದು ಡಿಕೆಶಿ ಅವರ ಬಗ್ಗೆ ಮೆಚ್ಚುಗೆಯ ಮಾತನಾಡಿದರು.

### ಡಿಸಿಸಿ ಕಚೇರಿಯಲ್ಲಿ ವಿಶೇಷ ಪೂಜೆ, ಹೋಮ

ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿದ್ದ ಹಿನ್ನೆಲೆಯಲ್ಲಿ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ನೇತೃತ್ವದಲ್ಲಿ ಬುಧವಾರ ಬೆಳಗ್ಗೆ ನಗರದಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ವಿಶೇಷ ಪೂಜೆ ಮತ್ತು ಹೋಮ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಅಧಿಕಾರ ಸ್ವೀಕಾರ ಸಮಾರಂಭವೂ ಯಾವುದೇ ವಿಘ್ನವಿಲ್ಲದೆ ನಡೆಯಲಿ ಎಂದು ಕಾಂಗ್ರೆಸ್ ಕಾರ್ಯಕರ್ತರು ಪ್ರಾರ್ಥಿಸಿದರು. ಇದಲ್ಲದೆ, ನಗರದ ಗಣಪತಿ ದೇವಾಲಯ, ಚಾಮುಂಡೇಶ್ವರಿ ಅಮ್ಮನವರ ದೇವಾಲಯ ಸೇರಿದಂತೆ ವಿವಿಧ ದೇವಾಲಯಗಳು, ದರ್ಗಾಗಳಲ್ಲಿ ಕಾರ್ಯಕರ್ತರು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

### ಜನಪರ ಕಾರ್ಯಕ್ರಮಗಳು ಮುಂದುವರೆಯಲಿವೆ

**ಎ.ಬಿ.ಚೇತನ್ ಕುಮಾರ್**

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಅಧಿಕಾರ ಅವಧಿಯಲ್ಲಿ ಈಗಿನ ಗ್ಯಾರಂಟಿ ಯೋಜನೆಗಳನ್ನು ಮುನ್ನಡೆಸುವ ಜೊತೆಗೆ ರಾಜ್ಯದ ಜನರಿಗೆ ಹೊಸ ಹೊಸ ಜನಪರ ಕಾರ್ಯಕ್ರಮಗಳನ್ನು ನೀಡುವ ಮೂಲಕ ಸರ್ಕಾರ ವನ್ನು ಸಮರ್ಥವಾಗಿ ಮುನ್ನಡೆಸಿ ಕೊಂಡು ಹೋಗಲಿ ಹಾಗೂ ರಾಜ್ಯವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲಿ ಎಂದು ನಗರದ ಶಕ್ತಿ ದೇವತೆ ಶ್ರೀ ಚಾಮುಂಡೇಶ್ವರಿ ಮಾತೆಯಲ್ಲಿ ಪ್ರಾರ್ಥಿಸಿರುವುದಾಗಿ ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ತಿಳಿಸಿದರು.

# ನಾಳೆ ಕಿಷ್ಕಿಂದ ಕಲಹ ನಾಟಕ

ಮೈಸೂರು: ವಿಜಯನಗರ ನಾಲ್ಕನೇ ಹಂತದಲ್ಲಿನ ಸಾತ್ವಿಕಿ ಫೌಂಡೇಷನ್ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ರಂಗ ತರಬೇತಿ ಶಿಬಿರದಲ್ಲಿ ಪಾಲ್ಗೊಂಡಿದ್ದವರು ಅಭಿನಯಿಸುವ ಕಿಷ್ಕಿಂದ ಕಲಹ ನಾಟಕ ಪ್ರದರ್ಶನ ಜೂ. 5 ರ ಸಂಜೆ 7ಕ್ಕೆ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ನಡೆಯಲಿದೆ ಎಂದು ಅಧ್ಯಕ್ಷರಾದ ಸರಸ್ವತಿ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದು ಸುಮಾರು ಒಂದು ಗಂಟೆ ಅವಧಿಯ ನಾಟಕವಾಗಿದೆ. ಪ್ರೋತ್ಸಾಹ ಧನ 120 ರೂ.ಗಳಾಗಿವೆ ಎಂದು ವಿವರಿಸಿದರು. ನಿರ್ದೇಶಕ ಅಂಕಿತ್ ರಾಜ್ ಮಾತನಾಡಿ, ಕುವೆಂಪು ಅವರ ರಾಮಾಯಣ ದರ್ಶನಂ, ವಾಲ್ಮೀಕಿ ರಾಮಾಯಣಗಳನ್ನು ಆಧರಿಸಿ ಈ ನಾಟಕ ರಚಿಸಲಾಗಿದೆ. ಕಥೆ ವಾಲ್ಮೀಕಿ ರಾಮಾಯಣದ್ದಾದರೂ ಕುವೆಂಪು ಅವರ ತಾತ್ವಿಕ ಚಿಂತನೆ ಒಳಗೊಂಡಿದೆ. ಮಧ್ಯದಲ್ಲಿ ಗೊಂಬೆಗಳನ್ನೂ ಪ್ರದರ್ಶನಕ್ಕೆ ಬಳಸಿಕೊಂಡಿರುವುದು ವಿಶೇಷ ಎಂದರು. ಯೋಗರಾಜು, ಲತಾ ಶಂಕರಿ ಇದ್ದರು.



# ಜಯಪುರ ಹೋಬಳಿ ಸಮಸ್ಯೆಗಳದ್ದೇ ಸದ್ದು



ಮೈಸೂರು: ಹೋಬಳಿಯಲ್ಲಿ ಅಕ್ರಮ ಮದ್ಯ ಮಾರಾಟ ತಡೆಯಿರಿ, ಚಿರತೆ ಕಾಟ ತಪ್ಪಿಸಿ, ರಸಗೊಬ್ಬರಕ್ಕೆ ರೈತರ ಅಲೆದಾಟ ತಪ್ಪಿಸಿ ಹೀಗೆ ಬಹುತೇಕ ಜಯಪುರ ಹೋಬಳಿಗೆ ಸಂಬಂಧಿಸಿದ ಸಮಸ್ಯೆಗಳು ತಾಲ್ಲೂಕು ರೈತರ ಸಾಮಾನ್ಯ ಸಭೆಯಲ್ಲಿ ಸದ್ದು ಮಾಡಿದವು.

ತಹಶೀಲ್ದಾರ್ ಕೆ.ಎಂ.ಮಹೇಶ್ ಕುಮಾರ್ ಅಧ್ಯಕ್ಷತೆಯಲ್ಲಿ ಜಗನ್ ಜೀವನ್ ರಾಮ್ ಭವನದಲ್ಲಿ ಆಯೋಜಿಸಿದ್ದ ಸಾಮಾನ್ಯ ಕುಂದು ಕೊರತೆ ಸಭೆಯಲ್ಲಿ ಅನೇಕ ಸಮಸ್ಯೆಗಳು ಕೇಳಿಬಂದವು. ಜಯಪುರ ಹೋಬಳಿ ಗ್ರಾಮಗಳಲ್ಲಿ ತುಂಬಾ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವುದಾಗಿ ರೈತರು ದೂರಿದರು. ಜತೆಗೆ ಜಯಪುರ ಹೋಬಳಿಯ ಗ್ರಾಮವೊಂದರ ಬಾಳೆ ಬೆಳೆ ಮಧ್ಯೆ ಚಿರತೆ ಕಾಣಿಸಿಕೊಂಡಿದೆ. ಅರಣ್ಯ ಇಲಾಖೆ ಬೋನು ಇರಿಸಿದ್ದು, ಚಿರತೆ ಸಿಗದೇ ಬಾಳೆ ಕಟಾವು ಮಾಡಲು ಆಗದೇ ನಷ್ಟ ಅನುಭವಿಸುವಂತಾಗಿದೆ ಎಂದು ಅವಲತ್ತುಕೊಂಡರು. ಇನ್ನು ಮರ ಕಟಾವು ಸಂಬಂಧ ಮಧ್ಯವರ್ತಿಗಳಿಗೆ ಅವಕಾಶ ನೀಡದೇ ಬೆಳೆದಿರುವ ರೈತರೇ ಕಟಾವು ಮಾಡಲು ಅವಕಾಶ ನೀಡಬೇಕೆಂದು ಹೇಳಿದರು.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ ವರುಣ ಹೋಬಳಿಯ ವ್ಯಾಪ್ತಿಯಲ್ಲಿ ಕೆರೆ ಒತ್ತುವರಿ ತೆರವುಗೊಳಿಸುವಂತೆ ಕೆಲವರು ಆಗ್ರಹಿಸಿದರು. ಅಂತೆಯೇ ಕೆಲವು ಪಡಿತರದಾರರ ಬಯೋಮೆಟ್ರಿಕ್ ತೆಗೆದುಕೊಳ್ಳುತ್ತಿಲ್ಲ. ಕೆಲವರು ಬಯೋ ಮೆಟ್ರಿಕ್ ನೀಡಿದರೂ ಪಡಿತರ ನೀಡಲು ನಾಳೆ ಬನ್ನಿ ಎಂದು ಅಲೆಸುತ್ತಿರುವ ಬಗ್ಗೆ ದೂರಿದರು. ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಯುದ್ಧ ಸನ್ನಿವೇಶದ ನಡುವೆಯೂ ಅಗತ್ಯ ರಸಗೊಬ್ಬರ ಪೂರೈಕೆ ಮಾಡುವಂತೆ ಒತ್ತಾಯಿಸಿದರು. ಕಬ್ಬು ಬೆಳಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬರಡನಪುರ ನಾಗರಾಜು ಮಾತನಾಡಿ ತಾಲೂಕಿನ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇದ್ದು ಸರಿಯಾದ ಸಮಯಕ್ಕೆ ರೋಗಿಗಳಿಗೆ ಸ್ಪಂದಿಸುತ್ತಿಲ್ಲ ಈ ವ್ಯವಸ್ಥೆಯನ್ನು ಸರಿಪಡಿಸಿ ಕೊಡಬೇಕೆಂದು ಒತ್ತಾಯಿಸಿದರು. ತಾಲ್ಲೂಕು ಅಧ್ಯಕ್ಷ ಆನಂದೂರು ಪ್ರಭಾಕರ್ ಮಾತನಾಡಿ ತಾಲ್ಲೂಕಿನಲ್ಲಿ ಭೂಕಬಳಿಕೆ ಮಾಡಿ ಪೋರ್ಜರಿ ದಾಖಲಾತಿ ಸೃಷ್ಟಿಸಿ ಕೊಂಡಿರುವ ಭೂ ಕಬಳಿಕೆದಾರರಿಗೆ ನ್ಯಾಯಾಲಯ ದಲ್ಲಿರುವ ಮೊಖದಮ್ಮೆಗಳನ್ನು ತಾಲ್ಲೂಕು ಆಡಳಿತ ಸರಿಯಾದ ಸಮಯಕ್ಕೆ ದಾಖಲೆಗಳನ್ನು ಒದಗಿಸಿ ನ್ಯಾಯಾಲಯಕ್ಕೆ ಕೊಟ್ಟು ಸರ್ಕಾರಿ ಆಸ್ತಿಗಳನ್ನು ಉಳಿಸುವ ಪ್ರಯತ್ನ ಮಾಡಬೇಕು ಎಂದು ಆಗ್ರಹಿಸಿದರು. ಇಒ ಕೃಷ್ಣ, ಕೃಷಿ ತಾಲ್ಲೂಕು ಅಧಿಕಾರಿ ಜಯರಾಮ್, ತಾಲ್ಲೂಕು ಎಸ್‌ಡಿಎ ಲತಾ, ನಾಗನಹಳ್ಳಿ ವಿಜಯೇಂದ್ರ,ಜಗದೀಶ್ ಸೂರ್ಯ, ನಾಗನಹಳ್ಳಿ ಚಂದ್ರಶೇಖರ್, ಅಂಕಪ್ಪ ನಾಗರಾಜು ಶಿವಣ್ಣ ಇದ್ದರು.

**ಸ್ಥಳಕ್ಕೆ ಅಧಿಕಾರಿಗಳು ಬರುವಂತೆ ಒತ್ತಾಯ**


# ರೈತ ಸಂಘದಿಂದ ರಾಷ್ಟ್ರೀಯ ಹೆದ್ದಾರಿ ಸಂಚಾರ ತಡೆ



ಚಾಮರಾಜನಗರ, ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾಮೂಹಿಕ ನಾಯಕತ್ವದಲ್ಲಿ ಕರ್ನಾಟಕ ರಾಜ್ಯ ರೈತ ಬ್ರಿಗೇಡ್ ವತಿಯಿಂದ ನಗರದ ಹೊರವಲಯದ ದೊಡ್ಡರಾಯಪೇಟೆ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಲಾಯಿತು.

ಸಾಮೂಹಿಕ ನಾಯಕತ್ವದ ರೈತ ಸಂಘದ ಹೊನ್ನೂರುಪ್ರಕಾಶ್ ನೇತೃತ್ವದಲ್ಲಿ ಸಮಾವೇಶಗೊಂಡು ರೈತರು ಮಧ್ಯಾಹ್ನ ಉರಿ ಬಿಸಿಲನ್ನು ಲೆಕ್ಕಿಸದೇ ಮಧ್ಯಾಹ್ನ 12 ಗಂಟೆಯಲ್ಲಿ ರಸ್ತೆ ತಡೆಗೆ ಮುಂದಾದರು. ಸುಮಾರು ಅರ್ಧ ಗಂಟೆಯೂ ಹೆಚ್ಚು ಕಾಲ ರಸ್ತೆಯಲ್ಲಿ ಕುಳಿತು ಪ್ರತಿಭಟನೆ ಮಾಡಿದರು. ಸ್ಥಳಕ್ಕಾಗಮಿಸಿದ ಡಿವೈಎಸ್ಪಿ ಸ್ನೇಹಾ ರಾಜ್ ಅವರು ಪ್ರತಿಭಟನಾಕಾರ ರೈತರ ಮನವೊಲಿಸಿ, ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸುವ ಭರವಸೆಯೊಂದಿಗೆ ರಸ್ತೆ ತೆರವು ಮಾಡಿಸಿದರು. ರಸ್ತೆ ಬದಿಯಲ್ಲಿ ಕುಳಿತು ಪ್ರತಿಭಟನೆ ಆರಂಭಿಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಹೊನ್ನೂರು ಪ್ರಕಾಶ್ ಚಾಮುಲ್‌ನಲ್ಲಿ ನಡೆದಿರುವ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಜವಾಬ್ದಾರಿಯುತ ವಿರುದ್ಧ ಕ್ರಮ ಕೈಗೊಂಡು ಸಂಬಂಧಪಟ್ಟ ನಿರ್ದೇಶಕರ ಶಾವುಲ್ ಅಹಮದ್ ಹಾಗೂ ವ್ಯವಸ್ಥಾಪಕ ನಿರ್ದೇಶಕರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು. ಕರ್ನಾಟಕ ಗ್ರಾಮೀಣ ಬ್ಯಾಂಕ್ ಸೇರಿದಂತೆ ಜಿಲ್ಲೆಯ ಬ್ಯಾಂಕ್‌ಗಳಲ್ಲಿ ರೈತರಿಗೆ ಸಮರ್ಪಕ ಸಾಲ ಸೌಲಭ್ಯ ದೊರೆಯುತ್ತಿಲ್ಲ. ಸರ್ಕಾರದಿಂದ ರೈತರಿಗೆ ದೊರೆಯುವ ಸವಲತ್ತುಗಳನ್ನು ಸಾಲ ಖಾತೆಗಳಿಗೆ ಜಮಾ ಮಾಡುವ ಕ್ರಮವನ್ನು ನಿಲ್ಲಿಸಬೇಕು. ಬ್ಯಾಂಕ್‌ಗಳಲ್ಲಿ ಚಾಮರಾಜನಗರ ಹಾಲು ಓಟಿಎಸ್ (ಒನ್ ಟೈಮ್ ಸೆಟಲ್‌ಮೆಂಟ್) ಯೋಜನೆಯನ್ನು ಜಾರಿಗೆ ತರಬೇಕು ಎಂದು ಒಕ್ಕೂಟದ (ಚಾಮುಲ್) ಕೆಲವು ಮನವಿ ಮಾಡಿದರು.ಚಿನ್ನದ ಸಾಲಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಸಾಲ ತೀರಿಸಿದ ಬಿಎಂಸಿ ಕೇಂದ್ರಗಳಲ್ಲಿ ಬಳಿಕವೇ ಹೊಸ ಸಾಲ ನೀಡುವ ನಿಯಮವನ್ನು ಕೈಬಿಡಬೇಕು. ಹಿಂದಿನಂತೆ ಬಡ್ಡಿ ಪಾವತಿಸಿ ನಡೆಯುತ್ತಿರುವ ಅವ್ಯವಹಾರಗಳ ಸಾಲ ನವೀಕರಣಕ್ಕೆ ಅವಕಾಶ ಕಲ್ಪಿಸಬೇಕು. ಬ್ಯಾಂಕ್‌ಗಳ ಎಲ್ಲಾ ಶಾಖೆಗಳಲ್ಲಿ ಹಣಕಾಸು ಸೇವೆಗಳ ವಿವರಗಳನ್ನು ಕನ್ನಡದಲ್ಲಿ ಪ್ರದರ್ಶಿಸಬೇಕು. ರೈತರಿಗೆ ಸಾಲ ವಿತರಣೆಯಲ್ಲಿ ಸರಳೀಕೃತ ಕ್ರಮಗಳನ್ನು ಅನುಸರಿಸಬೇಕು. ಜಿಲ್ಲೆಯ ಎಲ್ಲ ಕೆರೆ–ಕಟ್ಟೆಗಳನ್ನು ತುಂಬಿಸಿ ನೀರಿನ ಸಮಸ್ಯೆ ಉತ್ಪಾದಕರ ಸಹಕಾರ ಸಂಘದಲ್ಲಿ ನಿವಾರಿಸಬೇಕು ಎಂದರು. ಪ್ರತಿಭಟನಾ ಸ್ಥಳಕ್ಕೆ ಚಾಮುಲ್ ಎಂಡಿ ರಾಜಕುಮಾರ್, ಸಹಕಾರ ಸಂಘಗಳ ಸಹ ನಿಬಂಧಕರಾದ ಜ್ಯೋತಿ ಅರಸು, ಲೀಡ್ ಬ್ಯಾಂಕ್ ಮ್ಯಾನೇಜರ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ಮ್ಯಾನೇಜರ್ ಆಗಮಿಸಿ, ರೈತರ ಅಹವಾಲು ಸ್ವೀಕರಿಸಿ, ಸಮಸ್ಯೆ ಬಗೆಹರಿಸುವ ಭರಸವೆ ನೀಡಿದರು. ಪ್ರತಿಭಟನೆಯಲ್ಲಿ ರೈತ ಮುಖಂಡರು ಭಾಗವಹಿಸಿದ್ದರು.



## ಕೃಷ್ಣ ವಂದನ

ಸ್ನೇಹಾ ಆನಂದ್



ಹೇ ಕೃಷ್ಣಾ!
ಹರನಾಮವೇ ಹರಿಗೋಲು
ಅದ ತಿಳಿದರೆ ಪುಣ್ಯದ ಪಾಲು!

ನಾರಾಯಣ,
ನಾರಾಯಣನೆಂದರೆ
ನಾಲಿಗೆ ನಲಿವುದು, ಕಲ್ಲು
ಸಕ್ಕರೆಯ ಸವಿಯುವುದು!
ಕೃಷ್ಣಾ ಕೃಷ್ಣಾ ಕೃಷ್ಣಾ ಎಂದರೆ
ಕ್ಲೇಶ ಕಳೆಯುವುದು, ದ್ವೇಷವು
ಮರೆಯುವುದು!

ಮುಕ್ಕುಂದ,ಮುಕ್ಕುಂದ ಎಂದರೆ
ಮನಸೊಳು ಪಾಯಸ
ಮುಂಡಿಗೆಯಂತಹ ಮಂಡಿಗೆ
ದೊರಕುವುದು

ಗೋವಿಂದ ಗೋವಿಂದ ಎಂದರೆ
ಗೋವುಗಳ ಕ್ಷೀರ,
ಪಂಚಾಮೃತವೆಂಬ ಅಮೃತ
ಹೇಮಗಿರೀಶನ ಸನಿಹವು
ದೊರಕುವುದು

ವರ್ತಮಾನ
ಜಾಹಿರಾತಿಗೆ
ಉತ್ತಮ
ಮಾಧ್ಯಮ

# ಡಿಕೆಶಿ ಸಿಎಂ: ಪೀರನ್ ಷಾ ವಲಿ ದರ್ಗಾದಲ್ಲಿ ಪ್ರಾರ್ಥನೆ



ರಾಮನಗರ: ಡಿ.ಕೆ.ಶಿವಕುಮಾರ್ ಅವರು ನೂತನ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ನಗರದಲ್ಲಿರುವ ಪೀರನ್ ಷಾ ವಲಿ ದರ್ಗಾದಲ್ಲಿ ಮುಸ್ಲಿಂ ಸಮುದಾಯದ ಡಿಕೆಶಿ ಅಭಿಮಾನಿಗಳು ಮತ್ತು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ನಗರಸಭೆ ಸದಸ್ಯ ಅಬ್ದುಲ್ ಸಮದ್, ಯುವ ಮುಖಂಡ ಮೊಹಮ್ಮದ್ ಆಲಿಂ ನೇತೃತ್ವದಲ್ಲಿ ಕಾರ್ಯಕರ್ತರು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ. ಕೆ. ಶಿವಕುಮಾರ್ ರವರು ಸುಸೂತ್ರವಾಗಿ ಮತ್ತು ಜನಪರ ಆಡಳಿತ ನೀಡಲೆಂದು ಪ್ರಾರ್ಥಿಸಿದರು. ಡಿ. ಕೆ. ಶಿವಕುಮಾರ್ ಅಧಿಕಾರ ಸ್ವೀಕಾರಕ್ಕೂ ಮುನ್ನ ದರ್ಗಾದಲ್ಲಿ ಸೇರಿದ ಅಲ್ಪಸಂಖ್ಯಾತರು ಪಕ್ಷಬೇಧ ಮರೆತು ಡಿ. ಕೆ. ಶಿವಕುಮಾರ್ ರವರ ಭಾವಚಿತ್ರ ಹಿಡಿದು ವಿಶೇ? ಪ್ರಾರ್ಥನೆ ಸಲ್ಲಿಸಿ ಪು?ಾರ್ಚನೆ ಮಾಡಿದರಲ್ಲದೆ ಸಿಹಿ ವಿತರಿಸಿ ಸಂಭ್ರಮಿಸಿದರು.

ನಗರಸಭೆ ಸದಸ್ಯರಾದ ಅಬ್ದುಲ್ ಸಮದ್ ಮಾತನಾಡಿ, ನಿಜವಾದ ಮಣ್ಣಿನ ಮಗ ಡಿ. ಕೆ.ಶಿವಕುಮಾರ್ ನಾಡಿನ ಮುಖ್ಯಮಂತ್ರಿ ಆಗಿರುವುದು ಸಂತಸ ತಂದಿದೆ. ಅವರ ಆಡಳಿತ ಅವಧಿಯಲ್ಲಿ ಯಾವುದೇ ವಿಘ್ನಗಳು ಎದುರಾಗದಂತೆ ಪ್ರಾರ್ಥಿಸಿ ದರ್ಗಾದಲ್ಲಿ ವಿಶೇ? ಪ್ರಾರ್ಥನೆ ನೆರವೇರಿಸಲಾಗಿದೆ ಎಂದು ಹೇಳಿದರು.

ಡಿಕೆಶಿರವರು ರಾಜ್ಯದ ಅಭಿವೃದ್ಧಿಯತ್ತ ಗಮನ ಹರಿಸಬೇಕು. ಆ ಮೂಲಕ ತಮ್ಮ ಆಡಳಿತದ ಅವಧಿಯಲ್ಲಿ ಹೊಸ ದಾಖಲೆ ಬರೆಯಬೇಕು. ಜೊತೆಗೆ ಬೆಂಗಳೂರು ದಕ್ಷಿಣ ಜಿಲ್ಲೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ವಿಶೇ? ಒತ್ತು ನೀಡುತ್ತಾರೆಂಬ ವಿಶ್ವಾಸವಿದೆ ಎಂದು ತಿಳಿಸಿದರು.

ಯುವ ಕಾಂಗ್ರೆಸ್ ಮುಖಂಡ ಮಹಮ್ಮದ್ ಅಲಿಂ ಮಾತನಾಡಿ, ಶುಭ ದಿನದಂದು ಡಿಕೆಶಿರವರು ಮುಖ್ಯಮಂತ್ರಿ ಆಗಿ ಅಧಿಕಾರ ಸ್ವೀಕಾರ ಮಾಡುತ್ತಿದ್ದಾರೆ. ಅವರು ನಿರ್ವಿಘ್ನವಾಗಿ ಒಳ್ಳೆಯ ಆಡಳಿತ ನೀಡಲೆಂದು ಹಾಗೂ ಮುಂದೆಯೂ ಅವರೇ ಸಿಎಂ ಆಗಲೆಂದು ಪ್ರಾರ್ಥನೆ ಸಲ್ಲಿಸಿರುವುದಾಗಿ ಹೇಳಿದರು.

ಪಕ್ಷದ ನಿ?ಾವಂತ ಕಾರ್ಯಕರ್ತರಾಗಿ ಡಿಕೆಶಿ ಶ್ರಮಿಸಿದರು. ಅವರ ನಿ?ೆಗೆ ಪಕ್ಷದ ವರಿ?ರು ಮುಖ್ಯಮಂತ್ರಿ ಹುದ್ದೆಯನ್ನು ಉಡುಗೊರೆಯಾಗಿ ನೀಡಿದ್ದಾರೆ. ಕೆಂಗಲ್ ಹನುಮಂತಯ್ಯ ಮತ್ತು ಎಸ್. ಎಂ. ಕೃ? ಅವರಂತೆ ಜನಪರ ಆಡಳಿತ ನೀಡಿ ರಾಜ್ಯವನ್ನು ಮತ್ತ?ು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ದರ್ಗಾ ಹಜರತ್ ಪೀರನ್ ?ಾ ವಲಿ ಕಮಿಟಿ ಕಾರ್ಯದರ್ಶಿ ಸ?ಯದ್ ಲಿಯಾಕತ್ ಮಾತನಾಡಿ, ಡಿಕೆಶಿ ನಾಡಿದ ನಾಯಕರಾಗಿ ಪ್ರಮಾಣ ವಚನ ಸ್ವೀಕಾರ ಮಾಡುತ್ತಿರುವುದು ಸಂತಸದ ಸಂಗತಿ. ಡಿಕೆಶಿರವರು ಅನೇಕ ಬಾರಿ ದರ್ಗಾಕ್ಕೆ ಭೇಟಿ ನೀಡಿದ್ದಾರೆ. ಪೀರನ್ ?ಾ ವಲಿರವರ ಆಶೀರ್ವಾದ ಡಿಕೆಶಿ ಮೇಲೆ ಸದಾ ಇರಲಿದೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡರಾದ ಅಬ್ದುಲ್ ಜಬಿ, ಜಲೀಲ್, ಉಸ್ಮಾನ್, ವಸೀಂ, ಅಸ್ಲಾಂ, ಶಫಿಕ್, ಸಾದಿಕ್, ದರ್ಗಾ ಹಜರತ್ ಪೀರನ್ ?ಾ ವಲಿ ಕಮಿಟಿ ಅಧ್ಯಕ್ಷ ಅಜ್ಮತುಲ್ಲಾ ಖಾನ್, ಉಪಾಧ್ಯಕ್ಷ ಮುಸ್ತಾಕ್ ಅಹಮದ್, ಜಫ್ರುಲ್ಲಾ ಖಾನ್, ಅಯಾಜ್ ಖಾನ್, ಹುರ್ಮತ್ ಬೇಗ್, ಶಹಬಾಜ್ ಖಾನ್ ಮತ್ತಿತರರು ಹಾಜರಿದ್ದರು.

# ತೆಂಡೇಕೆರೆ ಸೇರಿದಂತೆ ವಿವಿಧೆಡೆ ಶಾಲಾ ಪ್ರಾರಂಭೋತ್ಸವ



ಕೆ.ಆರ್.ಪೇಟೆ: 2026–27ನೇ ಸಾಲಿನ ಶೈಕ್ಷಣಿಕ ವರ್ಷದ ಆರಂಭದ ಅಂಗವಾಗಿ ತಾಲೂಕಿನಾದ್ಯಂತ ಶಾಲಾ ಪ್ರಾರಂಭೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಶಿಕ್ಷಕರು ಶಾಲೆಗಳಿಗೆ ತಳಿರು–ತೋರಣಗಳನ್ನು ಕಟ್ಟಿ ಹಬ್ಬದ ವಾತಾವರಣ ಸೃಷ್ಟಿಸಿ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು.

ತಾಲೂಕಿನ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳು ಸೇರಿದಂತೆ ಒಟ್ಟು 376 ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ನಿಗದಿತ ಸಮಯಕ್ಕೆ ಆರಂಭಗೊಂಡವು. ಶಾಲಾ ಪ್ರವೇಶ ದ್ವಾರದಲ್ಲಿ ಶಿಕ್ಷಕರು ಮಕ್ಕಳಿಗೆ ಗುಲಾಬಿ ಹೂ ನೀಡಿ ಬರಮಾಡಿಕೊಂಡರು.ಪಟ್ಟಣದ ಕೆ.ಪಿ.ಎಸ್. ಶಾಲೆ ಹಾಗೂ ಬೂಕನಕೆರೆ ಕೆ.ಪಿ.ಎಸ್. ಶಾಲೆಯಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಶಾಸಕ ಹೆಚ್.ಟಿ. ಮಂಜು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಕೆ. ತಿಮ್ಮೇಗೌಡ ಭಾಗವಹಿಸಿ ವಿದ್ಯಾರ್ಥಿಗಳಿಗೆ ಗುಲಾಬಿ ನೀಡಿ ಸ್ವಾಗತಿಸಿದರು. ಅಲ್ಲದೆ, ಸರ್ಕಾರದ ವತಿಯಿಂದ ನೀಡಲಾಗುತ್ತಿರುವ ಸಮವಸ್ತ್ರ, ಪಠ್ಯಪುಸ್ತಕ ಹಾಗೂ ಇತರ ಶೈಕ್ಷಣಿಕ ಪರಿಕರಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಹೆಚ್.ಟಿ. ಮಂಜು, ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಸಮಾಜದ ಪ್ರತಿಯೊಬ್ಬರ ಮೇಲಿದೆ ಎಂದರು. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳು ಖಾಸಗೀಕರಣದ ಹಿಡಿತದಿಂದ ಹೊರಬರಬೇಕಿದ್ದು, ಸರ್ಕಾರಿ ಶಾಲೆಗಳು ಬಲಿಷ್ಠವಾಗದಿದ್ದರೆ ಬಡವರು, ರೈತರು ಹಾಗೂ ಮಧ್ಯಮ ವರ್ಗದ ಮಕ್ಕಳಿಗೆ ಶಿಕ್ಷಣ ದುಬಾರಿಯಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪಟ್ಟಣದ ಕೆ.ಪಿ.ಎಸ್. ಶಾಲೆಯ ಆವರಣದಲ್ಲಿರುವ 108 ವರ್ಷಗಳ ಇತಿಹಾಸ ಹೊಂದಿರುವ ಸರ್ಕಾರಿ ಪ್ರಾಥಮಿಕ ಶಾಲೆ ಇಂದು ಪೋಷಕರು ತಮ್ಮ ಮಕ್ಕಳನ್ನು ಸೇರಿಸಲು ಸರತಿ ಸಾಲಿನಲ್ಲಿ ನಿಲ್ಲುವ ಮಟ್ಟಕ್ಕೆ ಬೆಳೆದಿದೆ. ಕೆ.ಪಿ.ಎಸ್. ಶಾಲೆಯಲ್ಲಿ 2,500ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿರುವುದು ಸಂತಸದ ಸಂಗತಿ ಎಂದರು.

### ಎತ್ತಿನಗಾಡಿಯಲ್ಲಿ ಮಕ್ಕಳ ಮೆರವಣಿಗೆ

ತಾಲೂಕಿನ ತೆಂಡೇಕೆರೆ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ರಾಜು ಅವರ ನೇತೃತ್ವದಲ್ಲಿ ಶಾಲಾ ಪ್ರಾರಂಭೋತ್ಸವವನ್ನು ವಿಶಿಷ್ಟವಾಗಿ ಆಚರಿಸಲಾಯಿತು. ವಿದ್ಯಾರ್ಥಿಗಳನ್ನು ಎತ್ತಿನಗಾಡಿಯಲ್ಲಿ ಕೂರಿಸಿ ಪುಷ್ಪವೃಷ್ಟಿಯೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಶಾಲೆಗೆ ಸ್ವಾಗತಿಸಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡ ಕ್ಷೇತ್ರ ಶಿಕ್ಷಣಾಧಿಕಾರಿ ವೈ.ಕೆ. ತಿಮ್ಮೇಗೌಡ ಅವರು ಮಕ್ಕಳೊಂದಿಗೆ ಎತ್ತಿನಗಾಡಿಯಲ್ಲಿ ಸಂಚರಿಸಿ, ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸುವಂತೆ ಮನವಿ ಮಾಡಿದರು. ಮುಖ್ಯ ಶಿಕ್ಷಕ ರಾಜು, ಶಿಕ್ಷಕರಾದ ಎಸ್.ಕೆ. ಚಂದ್ರಶೇಖರ್, ಜಿ.ವಿ. ರಾಮಚಂದ್ರ, ಜಿ.ಎಂ. ಮಮತಾ ಸೇರಿದಂತೆ ನೂರಾರು ಪೋಷಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಬೂಕನಕೆರೆಯಲ್ಲಿ ಗ್ರಾಮಸ್ಥರು ಗೋಗಾಲಮ್ಮ ದೇವಾಲಯದಿಂದ ಶಾಸಕ ಹೆಚ್.ಟಿ. ಮಂಜು ಹಾಗೂ ವಿದ್ಯಾರ್ಥಿಗಳನ್ನು ಎತ್ತಿನಗಾಡಿಯಲ್ಲಿ ಮೆರವಣಿಗೆಯ ಮೂಲಕ ಶಾಲೆಗೆ ಕರೆತಂದರು. ಮಕ್ಕಳಿಂದಲೇ ಟೇಪ್ ಕತ್ತರಿಸುವ ಮೂಲಕ ಶಾಲಾ ಪ್ರವೇಶೋತ್ಸವಕ್ಕೆ ಚಾಲನೆ ನೀಡಲಾಯಿತು. ಅಗ್ರಹಾರಬಾಚಹಳ್ಳಿ, ಚಿಲ್ಲದಹಳ್ಳಿ, ಶೀಳನೆರೆ ಸೇರಿದಂತೆ ತಾಲೂಕಿನ ಹಲವು ಗ್ರಾಮಗಳಲ್ಲಿಯೂ ಶಿಕ್ಷಕರು ಹಾಗೂ ಎಸ್ಡಿಎಂಸಿ ಸದಸ್ಯರು ಮಕ್ಕಳನ್ನು ಎತ್ತಿನಗಾಡಿಯಲ್ಲಿ ಮೆರವಣಿಗೆ ನಡೆಸಿ ಶಾಲೆಗಳಿಗೆ ಕರೆತಂದು ಸಂಭ್ರಮಿಸಿದರು.

# ಚಾ.ನಗರದಲ್ಲಿ ತಂಪೆರೆದ ಮಳೆ



ಚಾಮರಾಜನಗರ, ನಗರದಲ್ಲಿ ಸಂಜೆ ಒಂದು ಗಂಟೆಗೆ ಹೆಚ್ಚು ಕಾಲ ತಂಪೆರದ ಮಳೆ ಉಂಟಾಯಿತು, ಬಿಸಿಲಿನ ದಗೆಗೆ ಬಸವಳಿದ ಜನರಿಗೆ ಜೋರು ಮಳೆಯು ತಣ್ಣನೆಯ ವಾತಾವರಣ ಕಲ್ಪಿಸಿತು. ಇದರೊಟ್ಟಿಗೆ ಮಳೆಯಿಂದ ಜೋಡಿ ರಸ್ತೆ, ಅಂಗಡಿ ಬೀದಿ ಗಳಲ್ಲಿ ಚರಂಡಿ ನೀರು ರಸ್ತೆಗೆ ಹರಿದು ದುರ್ನಾಥ ಬಿರುತ್ತಿತ್ತು,

ಜೋಡಿ ರಸ್ತೆ ಅಗಲೀಕರಣಗೊಂಡಿದ್ದರೂ ಕೂಡ ಕೆಲವರು ರಸ್ತೆಗೆ ಜಾಗ ಬಿಡದೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವ ಪರಿಣಾಮ ಅಲ್ಲಲ್ಲಿ ಚರಂಡಿ ತುಂಬಿ ರಸ್ತೆಯಲ್ಲಿ ಅರಿಯತೊಡಗಿತು, ವಾಹನ ಸವಾರರು ಚರಂಡಿ ನೀರಿನಲ್ಲಿ ಸಂಚರಿಸುವ ಮೂಲಕ ನಗರ ಸಭೆಯ ಆಡಳಿತಕ್ಕೆ ಇಡೀ ಶಾಪ ಹಾಕಿದರು.

ಜಿಲ್ಲಾಡಳಿತ ಭವನದ ಸಮೀಪದಲ್ಲಿ ಈ ಜೋಡಿ ರಸ್ತೆ ಹಾದು ಹೋಗಿದ್ದು ನಗರಸಭೆ ಅಧಿಕಾರಿಗಳು ಶಾಶ್ವತ ಪರಿಹಾರ ಕಂಡುಕೊಳ್ಳದೆ ಇರುವ ಪರಿಣಾಮ ಚರಂಡಿಯಲ್ಲಿ ಹರಿಯುವ ನೀರು ರಸ್ತೆಯಲ್ಲಿ ಹರಿಯುವಂತಾಗಿದೆ, ಇನ್ನು ದೊಡ್ಡ ಅಂಗಡಿ ಬೀದಿಯಲ್ಲೂ ಇದೇ ರೀತಿ ವಾತಾವರಣ ಕಂಡು ಬರುತ್ತಿದ್ದು, ಇತ್ತೀಚಿಗೆ ಸುರಿದ ಭಾರಿ ಮಳೆಯಿಂದ ಗುಂಡ್ಲುಪೇಟೆ ವೃತ್ತದ ವೃತ್ತದಿಂದ ಎಸ್ ಬಿ ಐ ಬ್ಯಾಂಕ್ ನವರಿಗೆ ಚರಂಡಿ ನೀರು ಹಾಗೂ ಬದಿ ತುಂಬಿ ಸಾರ್ವಜನಿಕರಿಗೆ ನರಕ ಯಾತನೆ ಉಂಟಾಗಿತ್ತು, ಚಾಮರಾಜನಗರ ಜಿಲ್ಲಾ ಕೇಂದ್ರವಾಗಿ 2 ದಶಕಗಳು ಉರುಳಿದ್ದರು, ಜನರಿಗೆ ಮೂಲಭೂತ ಸೌಕರ್ಯವಾಗಲಿ, ಉತ್ತಮ ಕುಡಿಯುವ ನೀರಿನ ವ್ಯವಸ್ಥೆಯಾಗಲಿ, ಹಾಗೂ ಒಳಚರಂಡಿ ವ್ಯವಸ್ಥೆ ಯಾಗಲಿ ಸಮರ್ಪಕವಾಗಿ ಇಲ್ಲದಿರುವುದು ಜಿಲ್ಲೆಯ ಅಭಿವೃದ್ಧಿಗೆ ಹಿನ್ನಡೆಯಾಗಿದೆ, ಜಿಲ್ಲಾ ಆಡಳಿತ ಈ ಎಲ್ಲಾ ಸಮಸ್ಯೆಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

# ವಕೀಲರ ಸಂಘಕ್ಕೆ ಸತ್ಯ ಚೆಟ್ಟಿ ನೇಮಕ

ಮೈಸೂರು: ಸತ್ಯ ಚೆಟ್ಟಿ ಭಾರತೀಯ ವಕೀಲರ ಸಂಘದ ಮೈಸೂರು ಘಟಕದ ಅಧ್ಯಕ್ಷರಾಗಿ ನೇಮಕಗೊಂಡಿರು.



ಅಟಾರ್ನಿ ಅಟ್ ಲಾ ಹಾಗೂ ಸಾಲಿಸಿಟರ್ ಆಗಿದ್ದು, ಕಾನೂನು, ವ್ಯವಹಾರ ನಿರ್ವಹಣೆ, ಕಾರ್ಪೊರೇಟ್ ಮತ್ತು ಹಣಕಾಸು ಕಾನೂನು, ಫರೆನ್ಸಿಕ್ ಸೈನ್ಸ್, ಕ್ರಿಮಿನಲ್ ಲಾ ಹಾಗೂ ಬೌದ್ಧಿಕ ಆಸ್ತಿ ಹಕ್ಕುಗಳ ಕ್ಷೇತ್ರಗಳಲ್ಲಿ ಬಹುಶಾಖಾ ಶೈಕ್ಷಣಿಕ ಅರ್ಹತೆಗಳನ್ನು ಹೊಂದಿದ್ದಾರೆ. ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜು (ಸ್ವಾಯತ್ತ) ಯಿಂದ ಬಿ.ಬಿ.ಎ., ಎಲ್.ಎಲ್.ಬಿ. ಪದವಿಯನ್ನು ಪಡೆದಿದ್ದು, ಪುದುಚೇರಿ ವಿಶ್ವವಿದ್ಯಾಲಯ ದಿಂದ ಎಂ.ಬಿ.ಎ. (ಸಾಮಾನ್ಯ) ಹಾಗೂ ಓ.ಪಿ. ಜಿಂದಾಲ್ ಗ್ಲೋಬಲ್ ವಿಶ್ವವಿದ್ಯಾಲಯದಿಂದ ಕಾರ್ಪೊರೇಟ್ ಮತ್ತು ಹಣಕಾಸು ಕಾನೂನಿನಲ್ಲಿ ಎಲ್.ಎಲ್.ಎಂ. ಪದವಿಯನ್ನು ಪಡೆದಿದ್ದಾರೆ. ಹೈದರಾಬಾದ್‌ನ ನಾಲ್ಸಾರ್ ಕಾನೂನು ವಿಶ್ವವಿದ್ಯಾಲ ಯದಿಂದ ಫರೆನ್ಸಿಕ್ ಸೈನ್ಸ್ ಮತ್ತು ಕ್ರಿಮಿನಲ್ ಲಾ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಹಾಗೂ ಗುಜರಾತ್ ನ್ಯಾಷನಲ್ ಲಾ ಯೂನಿವರ್ಸಿಟಿ ಯಿಂದ ಬೌದ್ಧಿಕ ಆಸ್ತಿ ಹಕ್ಕುಗಳು ? ಕಾನೂನು ಮತ್ತು ನಿರ್ವಹಣೆ ವಿಷಯದಲ್ಲಿ ಡಿಪ್ಲೊಮಾವನ್ನು ಪೂರ್ಣಗೊಳಿಸಿದ್ದಾರೆ. ಪ್ರಸ್ತುತ ಅವರು ಕಾನೂನು ವಿಷಯದಲ್ಲಿ ಡಾಕ್ಟರ್ ಆಫ್ ಫಿಲಾಸಫಿ (ಪ್ಹ.ಡಿ.) ಸಂಶೋಧನೆಯನ್ನು ಮುಂದುವರಿ ಸುತ್ತಿದ್ದಾರೆ. ಭಾರತವನ್ನು ಪ್ರತಿನಿಧಿಸಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ನಡೆದ ಪ್ರತಿಷ್ಠಿತ "ಯುನೈಟೆಡ್ ಸ್ಟೇಟ್ಸ್ ಲೀಗಲ್ ಎಕ್ಸ್‌ಪಿಡಿಷನ್ ಪ್ರೋಗ್ರಾಂ"ನಲ್ಲಿ ಭಾಗವಹಿಸಿದ ಅವರು, ಅಮೆರಿಕ ಸುಪ್ರೀಂ ಕೋರ್ಟ್, ಪ್ರಮುಮೆರಿಕನ್ ಕಾನೂನು ಸಂಸ್ಥೆಗಳು, ಕಾನೂನು ಶಿಕ್ಷಣ ಸಂಸ್ಥೆಗಳು ಹಾಗೂ ವಿವಿಧ ಕಾನೂನು ಘಟಕಗಳಿಗೆ ಭೇಟಿ ನೀಡಿ ಅಂತರರಾಷ್ಟ್ರೀಯ ಕಾನೂನು ವ್ಯವಸ್ಥೆಗಳ ಕುರಿತು ಅಮೂಲ್ಯ ಅನುಭವವನ್ನು ಪಡೆದಿದ್ದಾರೆ. ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮೈಸೂರು ವಿಮಾನ ನಿಲ್ದಾಣದಲ್ಲಿ ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿರನ್ನು ಸ್ವಾಗತಿಸುವ ಅವಕಾಶವನ್ನು ಪಡೆದಿದ್ದರು.

# ಡಿಕೆಶಿ ಸಿಎಂ: ಕಾರ್ಯಕರ್ತರ ಸಂಭ್ರಮ



ಗುಂಡ್ಲುಪೇಟೆ :– ಪಟ್ಟಣದಲ್ಲಿ ರಾಜ್ಯದ 25 ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ ಕೆ ಶಿವಕುಮಾರ್. ರವರ ನೇತೃತ್ವದ ರಾಜ್ಯ ಸರ್ಕಾರ ಮತ್ತಷ್ಟು ಅಭಿವೃದ್ಧಿಯತ್ತ ಸಾಗಲಿ ಎಂಬ ಆಶಯದೊಂದಿಗೆ ಗುಂಡ್ಲುಪೇಟೆ ಪಟ್ಟಣದ ವಿಜಯನಗರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ನಂತರ ಕಾಂಗ್ರೆಸ್ ಕಚೇರಿಯ ವಿಭಾಗ ಪಟಾಕಿ ಸಿಡಿಸಿ ಸಿಹಿ ಹಂಚುವ ಮೂಲಕ ಸಂಭ್ರಮಾಚರಣೆ ಮಾಡಲಾಯಿತು

ನಂತರ ಮಾತನಾಡಿದ ಚಾಮುಲ್ ನಿರ್ದೇಶಕ ಎಚ್ ಎಸ್ ನಂಜುಂಡ ಪ್ರಸಾದ್ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರವರು ಜನಪರ ಆಡಳಿತ ಸಮಗ್ರ ಅಭಿವೃದ್ಧಿ ಹಾಗೂ ಕರ್ನಾಟಕ ರಾಜ್ಯವನ್ನು ಮತ್ತಷ್ಟು ಪ್ರಗತಿಯತ್ತ ಕೂಂಡೂಯ್ಯಲಿ ಎಂದು ಶುಭ ಹಾರೈಸಿದರು ಈ ಸಂದರ್ಭದಲ್ಲಿ ಕಾಡ ಮಾಜಿ ಅಧ್ಯಕ್ಷ ಹಂಗಳ ನಂಜಪ್ಪ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ ಬಿ ರಾಜಶೇಖರ್. ಅಲತ್ತೂರು ಜಯರಾಮ್. ಪುರಸಭೆ ಮಾಜಿ ಉಪಾಧ್ಯಕ್ಷ ಅಣ್ಣಯ್ಯ ಸ್ವಾಮಿ ಎಪಿಎಂಸಿ ಅಧ್ಯಕ್ಷ ನಾಗರಾಜ್. ಅದರ್ಶ. ಲೋಕೇಶ್ ಗೋಪಾಲಪುರ. ಮುಖಂಡರು. ಯುವ ಕಾಂಗ್ರೆಸ್ ಪದಾಧಿಕಾರಿಗಳು. ಹಾಗೂ ಅಭಿಮಾನಿಗಳು ಭಾಗವಹಿಸಿದರು

# ಹರದನಹಳ್ಳಿ ಡೈರಿಗೆ ಅಧ್ಯಕ್ಷರ ಆಯ್ಕೆ



ಚಾಮರಾಜನಗರ, ತಾಲೂಕಿನ ಹರದನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ರಾಚನಾಯಕ, ಉಪಾಧ್ಯಕ್ಷರಾಗಿ ವೆಂಕಟೇಶ್ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ಬುಧವಾರ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ರಾಚನಾಯಕ, ಉಪಾಧ್ಯಕ್ಷ ಸ್ಥಾನಕ್ಕೆ ವೆಂಕಟೇಶ್ ನಾಮಪತ್ರ ಸಲ್ಲಿಸಿದರು. ಈ ಸ್ಥಾನಗಳಿಗೆ ಬೇರೆ ಯಾರು ನಾಮಪತ್ರ ಸಲ್ಲಿಸದ ಹಿನ್ನಲೆಯಲ್ಲಿ ಚುನಾವಣಾಕಾರಿಯಾಗಿದ್ದ ಎಸ್. ನಾಗೇಶ್ ನೂತನ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಘೋಷಿಸಿದರು. ಸಭೆಯಲ್ಲಿ ನಿರ್ದೇಶಕರಾದ ಡಿ.ರಂಗಸ್ವಾಮಿ ನಾಯಕ, ಕೃಷ್ಣನಾಯಕ, ನಂಜುಂಡನಾಯಕ, ಹನುಮನಾಯಕ, ತೋರಂಗನಾಯಕ, ಜಯಮ್ಮ, ರಾಜಣ್ಣ, ರಂಗಸ್ವಾಮಿನಾಯಕ, ಸಹಾಯಕ ಚುನಾ ವಣಾಧಿಕಾರಿ ಕೀರ್ತಿ, ಮುಖ್ಯ ಕಾರ್ಯನಿರ್ವಾಹಣಾ ಧಿಕಾರಿ ಜಯಕುಮಾರ್, ಸಹಾಯಕ ನಾಗೇಂದ್ರ ಭಾಗವಹಿಸಿದ್ದರು.

### ಸನ್ಮಾನ

ನೂತನ ಅಧ್ಯಕ್ಷ ಉಪಾಧ್ಯಕ್ಷರನ್ನು ನಿರ್ದೇಶಕರು, ಗ್ರಾಮದ ಎಲ್ಲ ಕೋಮಿನ ಯಜಮಾನರು, ಮುಖಂಡರು ಸನ್ಮಾನಿಸಿದರು.

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ನಾಲಾ ವಿಭಾಗ, ಎಡಿಯೂರು–572 142
ಫೋನ್ ನಂ: 7338590199
ಇ–ಮೇಲ್: eeyediyur1@gmail.com

ಅಲ್ಪಾವಧಿ ಪ್ರಕಟಣೆ ಸಂಖ್ಯೆ: 06/2026–27
ದಿನಾಂಕ : 29.05.2026

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಮೈಸೂರು/ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಒಟ್ಟು 20 ಕಾಮಗಾರಿಗಾಗಿ ಐಟಂವಾರು ಟೆಂಡರ್ ಅನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಹ್ವಾನಿಸಲಾಗಿದೆ.
ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ. 16.82 ಲಕ್ಷ ರೂಪಾಯಿಗಳು & ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.3.62 ಲಕ್ಷ ರೂಪಾಯಿಗಳು.
ಕೆಲಸ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ 02 ತಿಂಗಳು ಇ.ಎಂ.ಡಿ ಹಣ ಹಾಗೂ ಪ್ರೊಸಸಿಂಗ್ ಶುಲ್ಕವನ್ನು ಇ–ಪೇಮೆಂಟ್ ಮೂಲಕ ಸಂದಾಯ ಮಾಡುವುದು, ಟೆಂಡರ್ ಕ್ವಾರಿಸ್/ಕ್ಲ್ಯಾರಿಫಿಕೇಷನ್ ಕೊನೆಯ ದಿನಾಂಕ: 05.06.2026 ಮಧ್ಯಾಹ್ನ 4.00 ಗಂಟೆಯವರೆಗೆ ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 15.06.2026 ಮಧ್ಯಾಹ್ನ 4:00 ಗಂಟೆಯವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16.06.2026 ಬೆಳಿಗ್ಗೆ 10.01 ಗಂಟೆಗೆ ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ,
ಎಡೆಯೂರು

ವಾಸಾಸಂಇ/ಹಿಸನಿ–ಮಂ/ಕೆಎಸ್‌ಎಂಸಿ&ಎ/169/2026–27

# ಸರ್ಕಾರಿ ಶಾಲೆ ಜಾಗ ಬಳಕೆ ಮನವಿ

ಮೈಸೂರು: ಇಲವಾಲ ಹೋಬಳಿ ದಡದ ಕಲ್ಲಹಳ್ಳಿ ಗ್ರಾಮದ ಈಗಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಟ್ಟಡ ತೀರಾ ಕಿರಿದಾಗಿರುವ ಕಾರಣ ಗ್ರಾಮಸ್ಥರೆಲ್ಲ ಮಾಡಿಕೊಂಡ ಮನವಿ ಮೇರೆಗೆ ಗ್ರಾಮದಲ್ಲಿ 1.20 ಎಕರೆ ಜಾಗವನ್ನು ಜಿಲ್ಲಾಧಿಕಾರಿಗಳು ಶಿಕ್ಷಣ ಇಲಾಖೆಗೆ ಮಂಜೂರು ಮಾಡಿದ್ದಾರೆ. ಹೀಗಾಗಿ ಡಿಸಿಪಿಐ ಮತ್ತು ಬಿಇಓ ಅದನ್ನು ಸಂರಕ್ಷಿಸಿಕೊಂಡು ಶಾಲೆ ಅಭಿವೃದ್ಧಿಗೊಳಿಸಬೇಕೆಂದು ಯಾಚೇನಹಳ್ಳಿಯ ಸಾಮಾಜಿಕ ಹೋರಾಟಗಾರ ರವಿಕುಮಾರ್ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈಗಿರುವ ಶಾಲೆಗೆ ಆಟದ ಮೈದಾನ ಸಹಾ ಇಲ್ಲ. ಹೀಗಾಗಿ ಹೊಸ ಕಟ್ಟಡ ನಿರ್ಮಾಣ ಮಾಡಿ ವಿದ್ಯಾರ್ಥಿಗಳಿಗೆ ಸೌಕರ್ಯ ಒದಗಿಸಲು ವಿಸ್ತಾರವಾದ ಜಾಗ ಬೇಕೆಂದು ಕೋರಲಾಗಿತ್ತು. ಅದರಂತೆ ಜಾಗ ಮಂಜೂರು ಮಾಡಿರುವುದಕ್ಕೆ ಕೃತಜ್ಞತೆ ಸಲ್ಲಿಸಿ, ಗ್ರಾಮಸ್ಥರ ಸಹಕಾರದಿಂದ ಶಾಲೆ ಅಭಿವೃದ್ಧಿಗೊಳಿಸಬೇಕೆಂದು ಕೋರಿದರು. ಈ ಕಾರ್ಯಕ್ಕೆ ಮೈಸೂರು ತಹಸೀಲ್ದಾರ್, ಉಪ ವಿಭಾಗಾಧಿಕಾರಿ, ಗ್ರಾಮದ ಪುಟ್ಟಸ್ವಾಮಿ, ಯೋಗಮೂರ್ತಿ, ವೀರಭದ್ರಸ್ವಮಿ, ದಿಲೀಪ್ ಹಾಗೂ ಇನ್ನಿತರರು ಸಹಕರಿಸಿದರೆಂದರು. ವೀರಭದ್ರಸ್ವಾಮಿ, ರಾಘವೇಂದ್ರ ಇದ್ದರು.



## ವಿಶ್ವ ತಂಬಾಕು ರಹಿತ ದಿನಾಚರಣೆ

# ತಂಬಾಕಿನಿಂದ ಜೀವನ ಹಾಳು ಮಾಡಿಕೊಳ್ಳುತ್ತಿರುವ ಯುವಕರು

ಮಡಿಕೇರಿ:–ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆ, ಜಿಲ್ಲಾ ತಂಬಾಕು ನಿಯಂತ್ರಣ ಘಟಕ ಮತ್ತು ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ವತಿಯಿಂದ "ವಿಶ್ವ ತಂಬಾಕು ರಹಿತ ದಿನಾಚರಣೆ 2026"ಯು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಾಲೇಜು ಸಭಾಂಗಣದಲ್ಲಿ ಬುಧವಾರ ನಡೆಯಿತು.



ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶುಭ ಅವರು ಉದ್ಘಾಟಿಸಿ ಯುವ ಸಮೂಹವು ಇತ್ತೀಚಿನ ದಿನಗಳಲ್ಲಿ ತಂಬಾಕು ಉತ್ಪನ್ನಗಳ ಬಳಕೆಗೆ ಒಳಗಾಗಿ ತಮ್ಮ ಅಮೂಲ್ಯವಾದ ಜೀವನ ಹಾಳು ಮಾಡಿಕೊಳ್ಳುತ್ತಿದ್ದು, ಅಂತಹ ಯುವ ಸಮೂಹಕ್ಕೆ ಹೆಚ್ಚು ಜಾಗೃತಿ ಮೂಡಿಸಿ ಇಂತಹ ದುಶ್ಚಟಗಳಿಂದ ಹೊರತರಬೇಕಾಗಿದೆ ಎಂದು ನುಡಿದರು.

ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಯ ಡೀನ್ ಮತ್ತು ನಿರ್ದೇಶಕರಾದ ಡಾ.ಲೋಕೇಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ತಂಬಾಕು ವ್ಯಸನದಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿರುವುದರಿಂದ ಸಾರ್ವಜನಿಕರಿಗೆ ಇದರ ಬಗ್ಗೆ ಅರಿವು ಮೂಡಿಸಿ ಆರೋಗ್ಯಯುತ ಸಮಾಜ ನಿರ್ಮಾಣ ಮಾಡಬೇಕಾಗಿದೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಡಾ.ಕೆ.ಎಂ.ಸತೀಶ್‌ಕುಮಾರ್ ಅವರು ತಂಬಾಕು ಉತ್ಪನ್ನಗಳಿಂದಾಗವ ದುಷ್ಪರಿಣಾಮಗಳು ಹಾಗೂ ಕೋಟ್ಪಾ ಕಾಯಿದೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಶ್ರೀನಿವಾಸ್ ಬಿ.ಎಲ್. ಅವರು "ವಿಶ್ವ ತಂಬಾಕು ರಹಿತ ದಿನಾಚರಣೆಯ" ಮಹತ್ವದ ಕುರಿತು ವಿವರಿಸಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ವಿಮಲ ಹಾಗೂ ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿ ಬಿ.ಕೆ. ರವೀಂದ್ರ ರೈ ತಮ್ಮ ಅತಿಥಿ ಭಾಷಣವನ್ನು ನೆರವೇರಿಸಿದರು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಯ ಸಮುದಾಯ ವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ.ರಾಮಚಂದ್ರ ಕಾಮತ್ ಅವರು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಾಲೇಜು ವಿದ್ಯಾರ್ಥಿಗಳಿಗೆ "ವಿಶ್ವ ತಂಬಾಕು ರಹಿತ ದಿನಾಚರಣೆ 2026" ಕುರಿತು ಉಪನ್ಯಾಸ ನೀಡಿದರು. "ವಿಶ್ವ ತಂಬಾಕು ರಹಿತ ದಿನಾಚರಣೆ 2026"ಯ ಪ್ರತಿಜ್ಞಾ ವಿಧಿ ಭೋಧನೆ ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆಯ ಸಮುದಾಯ ವೈದ್ಯಕೀಯ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ಮಹೇಶ್, ಅವರು ನೆರವೇರಿಸಿದರು. ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಾಂತಿ ಅವರು ನಿರೂಪಿಸಿದರು.

ಕಾರ್ಯಕ್ರಮದಲ್ಲಿ ರಂಗೋಲಿ ಸ್ಪರ್ಧೆ, ಚಿತ್ರಕಲೆ ಸ್ಪರ್ಧೆ, ಕ್ವಿಜ್ ಮತ್ತು ಪಿಕ್ ಎಂಡ್ ಸ್ಪೀಚ್ ಸ್ಪರ್ಧೆ ಹಮ್ಮಿಕೊಂಡು ವಿಜೇತರಿಗೆ ಗಣ್ಯರಿಂದ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಕೊಡಗು ವೈದ್ಯಕೀಯ ವಿಜ್ಞಾನಗಳ ಬೋಧಕ ಆಸ್ಪತ್ರೆಯ ಉಪನ್ಯಾಸಕರು, ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು, ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಸಿಬ್ಬಂದಿಗಳು, ಆರೋಗ್ಯ ಇಲಾಖೆ ಸಿಬ್ಬಂದಿಗಳು ಭಾಗವಹಿಸಿದ್ದರು.

# ನಾಲ್ವಡಿಯನ್ನು ಯುವ ಪೀಳಿಗೆಗೆ ಪರಿಚಯಿಸೋಣ




ಮೈಸೂರು: ರಾಜ್ಯ ಸರ್ಕಾರ ನಾಲ್ವಡಿ ಕೃಷ್ಣರಾಜ ಒಡೆಯರಂತಹ ಮಹನೀಯರ ಜಯಂತಿ ಕಾರ್ಯಕ್ರಮವನ್ನು ಈಗಿನ ಯುವ ಪೀಳಿಗೆಗೆ ಪರಿಚಯಿಸುವ ಕೆಲಸ ಮಾಡಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ತಿಳಿಸಿದರು.

ಕರ್ನಾಟಕ ಸೇನಾ ಪಡೆಯಿಂದ ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಎದುರು ಆಯೋಜಿಸಿದ್ದ ನಾಲ್ವಡಿಯವರ ಜಯಂತಿ ಕಾರ್ಯಕ್ರಮದಲ್ಲಿ ನಾಲ್ವಡಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಈ ದೇಶ ಕಂಡ ಮಹಾನ್ ಮಹಾರಾಜ. ಪ್ರಾತಃ ಸ್ಮರಣೀಯರು. ಅಭಿವೃದ್ಧಿಯ ಹರಿಕಾರ. ಕನ್ನಂಬಾಡಿ ಕಟ್ಟೆ, ಮೈಸೂರು ವಿಶ್ವವಿದ್ಯಾಲಯ ಹಾಗೂ ಶಿವನ ಸಮುದ್ರ ಜುಲೈ ವಿದ್ಯುತ್ ಗಾರ ಸೇರಿದಂತೆ ಹಲವಾರು ಹೊಸ ನೂತನ ಯೋಜನೆಗಳನ್ನು ಜಾರಿಗೆ ತಂದರು. ಜತೆಗೆ ಪ್ರಜೆಗಳ ಹಿತರಕ್ಷಣೆಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ಇವರು ರಾಜ್ಯವನ್ನು ವಿಸ್ತರಿಸದೆ, ಅಭಿವೃದ್ಧಿ ಕೆಲಸಗಳನ್ನು ಮಾಡಿ ಶಾಶ್ವತವಾಗಿ ಪ್ರಜೆಗಳ ಮನದಲಿ ಉಳಿದವರು ಎಂದು ಸ್ಮರಿಸಿದರು.

ಕರ್ನಾಟಕ ಸೇನಾ ಪಡೆಯ ಅಧ್ಯಕ್ಷ ತೇಜೇಶ್ ಲೋಕೇಶ್ ಗೌಡ ಮಾತನಾಡಿ ರಾಜ್ಯ ಸರ್ಕಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನ ಚರಿತ್ರೆಯನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಬೇಕು ಹಾಗೂ ಕೇಂದ್ರ ಸರ್ಕಾರ ನಾಲ್ವಡಿರವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿಯನ್ನು ನೀಡಬೇಕೆಂದು ಒತ್ತಾಯಿಸಿದರು. ಪ್ರವಾಸಿಗರಿಗೆ ಎಪಿಎನ್ ಪ್ರಾಪರ್ಟೀಸ್ ನ ಅಧ್ಯಕ್ಷ ಎ.ಪಿ.ನಾಗೇಶ್ ಮೈಸೂರು ಪಾಕ್ ಅನ್ನು ವಿತರಿಸಿದರು. ಹಿರಿಯ ಸಮಾಜ ಸೇವಕ ಡಾ.ರಘುರಾಂ.ಕೆ.ವಾಜಪೇಯಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್, ಜೆಡಿಎಸ್ ನಗರಾಧ್ಯಕ್ಷ ಎಸ್ ಬಿಎಂ ಮಂಜು, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಸಮಾಜ ಸೇವಕ ಎಂ.ಎನ್.ದೊರೆಸ್ವಾಮಿ, ಮಹಾತ್ಮ ಗಾಂಧಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಟಿ.ಜಿ.ಆದಿಶೇಷಗೌಡ, ಗೋಲ್ಡನ್ ಸುರೇಶ್, ನಾಗೇಗೌಡ, ಕುಮಾರ್ ಗೌಡ, ಕೃಷ್ಣಪ್ಪ, ಪ್ರಭುಶಂಕರ, ಎಳನೀರು ರಾಮಣ್ಣ, ಸಿಂದುವಳ್ಳಿ ಶಿವಕುಮಾರ್, ನೇಹಾ, ಶೋಭಾರಾಣಿ ಗೌಡ, ಸುಜಾತಾ, ಸೌಮ್ಯ, ಇಂದಿರಾ, ಪದ್ಮಾ, ಪ್ರಭಾಕರ್, ಶಿವರಾಂ, ವಿಜಯೇಂದ್ರ, ರಾಧಾಕೃಷ್ಣ, ದರ್ಶನ್ ಗೌಡ, ಪ್ರದೀಪ್, ಗಣೇಶ್ ಪ್ರಸಾದ್, ವಿಷ್ಣು, ರವೀಶ್, ರವಿನಾಯಕ್ ಸೇರಿ ಇನ್ನಿತರರು ಉಪಸ್ಥಿತರಿದ್ದರು

# ವೆಂಕಟಾಚಲಧಾಮದ 15ನೇ ಸಂವತ್ಸರೋತ್ಸವ



ಮೈಸೂರು: ನಗರದ ಚಾಮರಾಜ ಜೋಡಿ ರಸ್ತೆಯಲ್ಲಿರುವ ಶ್ರೀ ವೆಂಕಟಾಚಲಧಾಮದ 15ನೇ ಸಂವತ್ಸರೋತ್ಸವ ( ವಾರ್ಷಿಕೋತ್ಸವ) ಜೂನ್ 5 ರಂದು ನೆರವೇರಲಿದೆ. ಈ ಸಂದರ್ಭ ಉಡುಪಿ ಭಂಡಾರಕೇರಿ ಮಠದ ಪೀಠಾಧಿಪತಿ ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಲಾಗಿದೆ.

ಬೆಳಗ್ಗೆ 7ಕ್ಕೆ ಪಂಚಾಶತ್ ಕಲಶಾರಾಧನೆ, ಬೆಳಗ್ಗೆ 10ಕ್ಕೆ ವೆಂಕಟೇಶ ದೇವರ ಮೂಲ ಮೂರ್ತಿಗೆ ಶ್ರೀ ವಿದ್ಯೇಶತೀರ್ಥ ಸ್ವಾಮೀಜಿಯವರಿಂದ ಬ್ರಹ್ಮ ಕಲಶಾಭಿಷೇಕ, ಪಂಚಾಮೃತ ಅಭಿಷೇಕ, ರಾಯರ ವೃಂದಾವನಕ್ಕೆ ವಿಶೇಷ ಅಲಂಕಾರ, ವೆಂಕಟೇಶದೇವರಿಗೆ ಚಿನ್ನದ ಕಿರೀಟ ಸಹಿತ ಅಲಂಕಾರ, ಸಂಸ್ಥಾನ ಪೂಜೆ, ಮಹಾ ಮಂಗಳಾರತಿ ನೆರವೇರಲಿದೆ. ಸಂಜೆ 7ಕ್ಕೆ ರಂಗಪೂಜೆ ಮತ್ತು ರಥೋತ್ಸವ ಸಂಪನ್ನಗೊಳ್ಳಲಿದೆ. ಪದ್ಮ ಪುರಾಣೋಕ್ತವಾಗಿ ಕೆತ್ತನೆಗೊಂಡ ಕಲ್ಯಾಣಕಾರಕ ಶ್ರೀ ವೆಂಕಟೇಶನ ಸನ್ನಿಧಾನ, ಕಲಿಯುಗದ ಕಾಮಧೇನುವಾದ ಶ್ರೀ ಗುರು ರಾಘವೇಂದ್ರರ ವೃಂದಾವನ ಕ್ಷೇತ್ರಗಳ ಸಂಗಮ ಶ್ರೀ ವೆಂಕಟಾಚಲಧಾಮದಲ್ಲಿದೆ. ದೇವ–ಗುರು ವೃಂದಾವನ ಸನ್ನಿಧಿಯು ಭಾಗವತ ಆಶ್ರಮವೆಂದೇ ಖ್ಯಾತವಾಗಿದೆ. ವಾರ್ಷಿಕೋತ್ಸವದಲ್ಲಿ ಭಕ್ತರು ಭಾಗವಹಿಸಲು ಶ್ರೀಮಠ ವಿನಂತಿಸಿದೆ.

ಶ್ರೀ ಭಂಡಾರಕೇರಿ ಮಠವು ಭಾರತೀಯ ಪರಂಪರೆ, ಸಂಸ್ಕೃತಿ ಮತ್ತು ಮೌಲ್ಯ ರಕ್ಷಣೆಗೆ ಪೂರಕ ಚಟುವಟಿಕೆಗಳನ್ನು ಮಾಡುತ್ತಿದೆ. ಪ್ರತಿ ವರ್ಷವೂ ಶ್ರೀ ವಿದ್ಯಾಮಾನ್ಯತೀರ್ಥರ ಆರಾಧನೆ ಸಂದರ್ಭ ರಾಷ್ಟ್ರೀಯ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತದೆ. ವೇದ ವಿದ್ಯೆ ಪೋಷಣೆ ಮಾಡುವ ದೇಶದ ಒಂದು ಸಂಸ್ಥೆಗೆ ಮತ್ತು ನಾಲ್ವರು ಶಾಸ್ತ್ರಾಧ್ಯಯನ ವಿದ್ವಾಂಸರಿಗೆ 1 ಲಕ್ಷ ರೂ. ನಗದು ಪುರಸ್ಕಾರ ಸಹಿತ ವಿದ್ವತ್ ಸನ್ಮಾನ ಮಾಡಲಾಗುತ್ತಿದೆ. ಪ್ರತಿ ವರ್ಷವೂ ಕನ್ನಡದಲ್ಲಿ ಗ್ರಂಥ ಪ್ರಕಟಣೆಗೆ ಆದ್ಯತೆ ನೀಡಲಾಗಿದೆ. ಪಾಠ– ಪ್ರವಚನ ಇತ್ಯಾದಿ ಜ್ಞಾನ ಯಜ್ಞವನ್ನು ನಿರಂತರವಾಗಿ ಮಾಡುತ್ತಿದೆ ಎಂದು ಶ್ರೀ ವಿದ್ಯೇಶ ತೀರ್ಥ ಸ್ವಾಮೀಜಿ ತಿಳಿಸಿದ್ದಾರೆ.

## ಜೂ7ಕ್ಕೆ ಆರೋಗ್ಯ ಕುರಿತು ಉಪನ್ಯಾಸ




ಮೈಸೂರು: ಮೈಸೂರು ಯೋಗ ಒಕ್ಕೂಟದ ರಜತ ಮಹೋತ್ಸವ ಪ್ರಯುಕ್ತ ಜೂ 7 ರಂದು ಬೆಳಗ್ಗೆ 9.30 ರಿಂದ ಸಂಜೆ 4.30 ರವರೆಗೆ ರಾಮಕೃಷ್ಣ ನಗರದ ಸುಯೋಗ್ ಆಸ್ಪತ್ರೆ ಪಕ್ಕದ ರಾಮಕೃಷ್ಣ ವಿದ್ಯಾ ಕೇಂದ್ರದ ಶಾರದಾ ಸಭಾಂಗಣದಲ್ಲಿ ಆರೋಗ್ಯ ಕುರಿತ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಗೌರವಾಧ್ಯಕ್ಷ ಟಿ. ಜಲೇಂದ್ರಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೆಳಗ್ಗೆ 9.30ಕ್ಕೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸುವರು, ಡಾ.ಎ.ಎಸ್. ಚಂದ್ರಶೇಖರ್ ಅಧ್ಯಕ್ಷತೆ ವಹಿಸುವರು, ಶ್ರೀಹರಿ ದ್ವಾರಕಾನಾಥ್, ಎನ್. ಪಾಪೇಗೌಡ, ಕೆ.ರಘುರಾಂ ವಾಜಪೇಯಿ, ಎಂ.ಪಿ.ನಾಗೇಶ್ ವೇದಿಕೆಯಲ್ಲಿರುವರು. ಬೆಳಗ್ಗೆ 10.30ಕ್ಕೆ ಡಾ.ರಾಜಪುರ ಪರಶುರಾಂ ಶರೀರಶಾಸ್ತ್ರ ಕುರಿತು ಉಪನ್ಯಾಸ ನೀಡುವರು. 11.30ಕ್ಕೆ ಡಾ. ಜಯಶ್ರೀ ಬಂಗೇರಿ ಅವರು ಚಿಕಿತ್ಸಾ ಯೋಗ ಕುರಿತು, ಮಧ್ಯಾಹ್ನ 2ಕ್ಕೆ ಡಾ.ಶ್ರೀವತ್ಸ ಅವರು ಸ್ವರ ಯೋಗ ಕುರಿತು ಮಾತನಾಡಲಿದ್ದಾರೆಂದರು. ಶಿವಪ್ರಕಾಶ್, ಬಿ.ಪಿ. ಮೂರ್ತಿ, ಕೆ.ಜಿ. ದೇವರಾಜ್, ಶಾಂತಾರಾಂ, ನರಸಿಂಹ ಇದ್ದರು.

## ರಂಗತರಬೇತಿ ಶಿಬಿರ ಸದುಪಯೋಗಕ್ಕೆ ಕೀರ್ತಿರಾಜ್ ಕರೆ




ಮೈಸೂರು: ರಂಗಾಂತರಂಗ ಮೈಸೂರು ಮಕ್ಕಳ ಅಭಿನಯ ರಂಗಶಾಲೆ ವತಿಯಿಂದ ನಾರಾಯಣ ಶಾಸ್ತ್ರಿ ರಸ್ತೆಯ ಮಹಿಳಾ ಸದನದಲ್ಲಿ ವಾರಾಂತ್ಯದ ಮಕ್ಕಳ ರಂಗ ಅಭಿನಯ ತರಬೇತಿ ಆಯೋಜಿಸುತ್ತಿದ್ದು, ಆಸಕ್ತ ಮಕ್ಕಳು ಪ್ರಯೋಜನ ಪಡೆಯಬಹುದಾಗಿದೆ ಎಂದು ಸಂಸ್ಥಾಪಕ ಕೆ.ಎಂ. ಕೀರ್ತಿರಾಜ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಪ್ರತಿ ಶನಿವಾರ ಮಧ್ಯಾಹ್ನ 3.30 ರಿಂದ ಸಂಜೆ 6.30 ಮತ್ತು ಭಾನುವಾರ ಬೆಳಗ್ಗೆ 9.30 ರಿಂದ ಮಧ್ಯಾಹ್ನ 1.30 ರವರೆಗೆ ಈ ತರಬೇತಿ ನಡೆಯಲಿದೆ. ಇದು ಉಚಿತ ಕಾರ್ಯಕ್ರಮವಾದರೂ ಪೋಷಕರು ಸ್ವತಃ ತಾವೇ ಪ್ರೋತ್ಸಾಹ ಧನ ನೀಡಬಹುದಾಗಿದೆ. ಇದರಲ್ಲಿ ರಂಗಭೂಮಿ ಪರಿಚಯ, ನವರಸ, ಧ್ವನಿ ಮತ್ತು ಮಾತು, ರಂಗಾಟಗಳು, ಮಕ್ಕಳಿತಂದ ಕಾವ್ಯಾತ್ಮಕ ವಾದ ನಾಟಕ ಪ್ರದರ್ಶನ ಇರಲಿವೆ. ಹೆಚ್ಚಿನ ಮಾಹಿತಿಗೆ ದೂ. 97399 19004 ನ್ನು ಸಂಪರ್ಕಿಸಬಹುದಾಗಿದೆ ಎಂದರು.

ಹಿರಿಯ ರಂಗಕಮಿ ಮೈಮ್ ರಮೇಶ್ ಮಾತನಾಡಿ, ಇಂದು ಹಿಂಸೆ ಎಲ್ಲೆಡೆ ಕಾಣಬರುತ್ತಿದ್ದು, ಮಾನವೀಯತೆ ಮಾಯವಾಗುತ್ತಿದೆ. ಇವುಗಳೊಡನೆ ಬೆಳೆಯುವ ಮಕ್ಕಳಿಗೆ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಸಿಗುತ್ತಿಲ್ಲ. ಟಿವಿ ವಾಹಿನಿಗಳು ಸಹಾ ಕೇವಲ ನಗಿಸುವುದಕ್ಕೇ ಸೀಮಿತವಾದ ಕಾರ್ಯಕ್ರಮ ಪ್ರಸಾರ ಮಾಡುತ್ತಿವೆ. ಇಂತಹ ಹೊತ್ತಿನಲ್ಲಿ ಮಕ್ಕಳಲ್ಲಿ ಸಂಸ್ಕೃತಿ, ಸಂಸ್ಕಾರ ಬೆಳೆಸುವ ಉದ್ದೇಶ ಈ ಶಿಬಿರದ್ದಾಗಿದೆ ಎಂದರು. ಹಿರಿಯ ಸಾಹಿತಿ ನಾ.ದಿವಾಕರ ಮಾತನಾಡಿ, ಸುಂದರ ಸಮಾಜವೂ ಇದೆ ಎಂಬುದರ ಅರಿವು ಮೂಡಿಸುವ ಕೆಲಸ ಈ ಶಿಬಿರದ್ದಾಗಿದೆ. ಸಂವೇದನೆ, ಮಹಿಳೆಯರ ಬಗ್ಗೆ ಗೌರವ ಮೂಡಿಸುವ ಉದ್ದೇಶವಿದೆ. ರಂಗಭೂಮಿ ಜೀವನದ ಪಾಠಶಾಲೆಯಾಗಿರುವ ಕಾರಣ ಉತ್ತಮ ಸಂಸ್ಕೃತಿ ಬೆಳೆಸುವ ಕೆಲಸ ಮಾಡಲಾಗುವುದೆಂದರು.

ಸಿಂಧು ನಟರಾಜ್, ಗೌರಿಶಂಕರ್ ಇದ್ದರು.

# 21ರಂದು ಅಂತಾರಾಷ್ಟ್ರೀಯ ಯೋಗ ದಿನ

## ಅಗತ್ಯ ಸಿದ್ಧತೆಗೆ ಜಿಲ್ಲಾಧಿಕಾರಿ ಸೋಮಶೇಖರ್ ಸೂಚನೆ



ಮಡಿಕೇರಿ: ಇದೇ ಜೂನ್ 21ರಂದು ನಡೆಯಲಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಹಾಗೂ ಯಶಸ್ವಿಯಾಗಿ ಆಯೋಜಿಸುವಂತೆ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರು ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಬುಧವಾರ ನಡೆದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಮಹತ್ವವನ್ನು ಅರಿತು ಸಂಬಂಧಪಟ್ಟ ವಿವಿಧ ಇಲಾಖೆಗಳು ಕಾರ್ಯಕ್ರಮದ ಯಶಸ್ಸಿಗೆ ಅಗತ್ಯ ಸಹಕಾರ ನೀಡಬೇಕು. ಶಾಲೆ, ಕಾಲೇಜು ಹಾಗೂ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳನ್ನು ಕಾರ್ಯಕ್ರಮಕ್ಕೆ ಕರೆತರುವ ಹಾಗೂ ವಾಪಸ್ ಕಳುಹಿಸುವ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿ ಅವರು ನಿರ್ದೇಶನ ನೀಡಿದರು.

ಸದಾ ಒತ್ತಡದ ನಡುವೆ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಆಯುಷ್ ಇಲಾಖೆಯಿಂದ ಯೋಗಾಭ್ಯಾಸವನ್ನು ನಡೆಸಿಕೊಡಬೇಕು. ಜೊತೆಗೆ ಆಯುಷ್ ಇಲಾಖೆಯಲ್ಲಿ ಲಭ್ಯವಿರುವ ಆರೋಗ್ಯ ಸೌಲಭ್ಯಗಳ ಕುರಿತು ಮಾಹಿತಿ ನೀಡಿ ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಯೋಗ ಮತ್ತು ಪ್ರವಾಸೋದ್ಯಮದ ಸಹಯೋಗದಿಂದ ಜಿಲ್ಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಸಾಧ್ಯವಿದೆ. ಇದರಿಂದ ಆರೋಗ್ಯ ಪ್ರವಾಸೋದ್ಯಮಕ್ಕೂ ಉತ್ತೇಜನ ದೊರೆಯಲಿದೆ. ಈ ನಿಟ್ಟಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಆಯುಷ್ ಇಲಾಖೆ ಹೆಚ್ಚಿನ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ. ಶೈಲಜಾ ಜಿ. ಅವರು ಮಾತನಾಡಿ, ಆಯುಷ್ ಇಲಾಖೆಯ ಮಾರ್ಗಸೂಚಿಗಳ ಅನುಸಾರ ಅಂತರರಾಷ್ಟ್ರೀಯ ಯೋಗ ದಿನಾಚರಣೆಗೆ ಸ್ಥಳ ನಿಗದಿ, ಯೋಗಾಭ್ಯಾಸಗಾರರನ್ನು ಸಜ್ಜುಗೊಳಿಸುವುದು, ಯೋಗ ಪ್ರೋಟೋಕಾಲ್‌ನ ಅನುಸಾರ ಯೋಗಾಸನಗಳ ಪೂರ್ವಾಭ್ಯಾಸ ನಡೆಸುವುದು ಸೇರಿದಂತೆ ವಿವಿಧ ಸಿದ್ಧತೆಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶೇಖರ್, ಪೊಲೀಸ್ ಉಪಾಧೀಕ್ಷಕ ಪಿ.ಎ. ಸೂರಜ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಪ್ರಸನ್ನ ಕುಮಾರ್, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕಿ ವಿ.ಟಿ. ವಿಸ್ಮಯಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ರೇಖಾ ಗಣಪತಿ, ನೀಮಾ ಕೊಡಗು ಅಧ್ಯಕ್ಷ ಡಾ. ರಾಜಾರಾಂ, ಯೋಗ ಶಿಕ್ಷಕ ಮಹೇಶ್ ಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಜೂನ್ 16ರಂದು ಯೋಗ ಜಾಥಾ

ಆಯುಷ್ ವೈದ್ಯಾಧಿಕಾರಿ (ಪ್ರಕೃತಿ ಚಿಕಿತ್ಸೆ ಮತ್ತು ಯೋಗ) ಡಾ. ಅರುಣ್ ಅವರು ಮಾತನಾಡಿ, ಸಾರ್ವಜನಿಕರಲ್ಲಿ ಯೋಗದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಜೂನ್ 16ರಂದು ಬೆಳಿಗ್ಗೆ 8.30 ಗಂಟೆಗೆ ಯೋಗ ಜಾಥಾವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಯೋಗ ಶಿಕ್ಷಕರ ಮೂಲಕ ಸಾರ್ವಜನಿಕರಿಗೆ, ಗ್ರಾಮೀಣ ಪ್ರದೇಶಗಳಲ್ಲಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ನಿರಂತರ ಯೋಗಾಭ್ಯಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೆ ಸಾರ್ವಜನಿಕರು ಮತ್ತು ಅಧಿಕಾರಿಗಳಿಗಾಗಿ 365 ದಿನಗಳ ಗೂಗಲ್ ಲಿಂಕ್ ಮೂಲಕ ಯೋಗಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಕುರಿತು ಆಯುಷ್ ಇಲಾಖೆ ಹಾಗೂ ಯೋಗ ಶಿಕ್ಷಕರ ಮೂಲಕ ವ್ಯಾಪಕ ಜಾಗೃತಿ ಮೂಡಿಸುವ ಕಾರ್ಯ ನಡೆಯುತ್ತಿದೆ ಎಂದು ಹೇಳಿದರು. ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳ ಯೋಗ ತರಬೇತಿದಾರರಿಂದ ಯೋಗ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಡಾ. ಅರುಣ್ ಮಾಹಿತಿ ನೀಡಿದರು. ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವವರು ಬಿಳಿ ಸಮವಸ್ತ್ರ ಧರಿಸಿ ಪಾಲ್ಗೊಳ್ಳುವಂತೆ ಕೋರಲಾಗಿದೆ. ಅಲ್ಲದೆ ಎಲ್ಲಾ ಅಧಿಕಾರಿಗಳು ಮತ್ತು ಸಾರ್ವಜನಿಕರಿಗಾಗಿ ಯೋಗ ಲಿಂಕ್ ಬಳಸಿಕೊಂಡು 14 ದಿನಗಳ “ಯೋಗ ಸವಾಲು” ಕಾರ್ಯಕ್ರಮವನ್ನು ಸಹ ಆಯೋಜಿಸಲಾಗಿದೆ ಎಂದು ತಿಳಿಸಿದರು. ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ಹಾಗೂ ಆಯುಷ್ ಆಸ್ಪತ್ರೆಗಳಲ್ಲಿ ಆಯುಷ್ ಪದ್ಧತಿಯ ಅರಿವು ಮತ್ತು ಯೋಗ ಪ್ರಾತ್ಯಕ್ಷಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಸೋಮಶೇಖರ್ ಅವರು, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸುವ ನಿರೀಕ್ಷೆಯಿರುವುದರಿಂದ ಅವರ ಸುರಕ್ಷತೆಗೆ ವಿಶೇಷ ಗಮನ ಹರಿಸಬೇಕು. ಸಾರ್ವಜನಿಕರ ಸಂಚಾರಕ್ಕೆ ಯಾವುದೇ ರೀತಿಯ ಟ್ರಾಫಿಕ್ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಅಗತ್ಯ ಕ್ರಮ ಕೈಗೊಂಡು ಯೋಗ ಜಾಥಾವನ್ನು ವ್ಯವಸ್ಥಿತವಾಗಿ ನಡೆಸಿಕೊಡಬೇಕು ಎಂದು ಸೂಚಿಸಿದರು.

ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಬಸವರಾಜು ಅವರು ಮಾತನಾಡಿ, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳು, ಪ್ರೌಢಶಾಲಾ ವಿದ್ಯಾರ್ಥಿಗಳು, ಎನ್‌ಸಿಸಿ, ಎನ್‌ಎಸ್‌ಎಸ್, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

## ಲಂಚ ಸ್ವೀಕರಿಸುತ್ತಿದ್ದ ನಗರಸಭೆ ಅಧಿಕಾರಿಗಳು ಲೋಕಾಯುಕ್ತ ಬಲೆಗೆ

### ಆರ್‌ಐ ಶಕೀಲ್ ಅಹಮದ್, ಆರ್‌ಓ ಹೇಮಕುಮಾರ್ ಹಣದ ಸಮೇತ ಟ್ರ್ಯಾಪ್

ಚಾಮರಾಜನಗರ, ಚಾಮರಾಜನಗರ ನಗರಸಭೆಯ ಕಚೇರಿಯಲ್ಲಿ 25 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದ ಇಬ್ಬರು ನಗರಸಭೆ ಅಧಿಕಾರಿಗಳು ಹಾಗೂ ಒಬ್ಬ ಮಧ್ಯವರ್ತಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ

ಚಾ.ನಗರ ನಗರಸಭೆಯ ಕಂದಾಯ ನಿರೀಕ್ಷಕ ಶಕೀಲ್ ಅಹಮದ್, ಕಂದಾಯ ಅಧಿಕಾರಿ ಹೇಮಕುಮಾರ್ ಹಾಗೂ ಮಧ್ಯವರ್ತಿ ಹಬೀಬ್ ಲೋಕಾಯುಕ್ತ ಬಲೆಗೆ ಬಿದ್ದವರು. ನಿವೇಶನವನ್ನು ಇ ಖಾತೆ ಮಾಡಿಕೊಡಲು 25 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಇದನ್ನು ಪಡೆದುಕೊಳ್ಳುವಾಗ ನೇರವಾಗಿ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾರೆ. ಲೋಕಾಯುಕ್ತ ಡಿವೈಎಸ್ಪಿ ಗಜೇಂದ್ರ ಪ್ರಸಾದ್ ನೇತೃತ್ವದಲ್ಲಿ ಇನ್ಸ್ಪೆಕ್ಟರ್ ಲೋಹಿತ್ ಹಾಗು ಸಿಬ್ಬಂದಿ ವರ್ಗದವರು ದಾಳಿ ಮಾಡಿದ್ದರು. ದೂರದಾರ ಮೀಸೆ ನಾಗರಾಜು ಅವರಿಂದ ದೂರು ಪಡೆದು ಲೋಕಾಯುಕ್ತ ಪೊಲೀಸರು ಈ ಇಬ್ಬರು ಅಧಿಕಾರಿಗಳು ಮಧ್ಯವರ್ತಿ ಹಬೀಬ್ ಮೂಲಕ 25 ಸಾವಿರ ರೂ. ಲಂಚ ಪಡೆಯುತ್ತಿದ್ದಾಗ ಲೋಕಾಯುಕ್ತ ಪೊಲೀಸರು ಕಚೇರಿಗೆ ದಾಳಿ ಮಾಡಿ, ಹಣ ವಶಪಡಿಸಿಕೊಂಡು ಪ್ರಕರಣ ದಾಖಲು ಮಾಡಿ ತನಿಖೆ ಕೈಗೊಂಡಿದ್ದಾರೆ.

## ಎಂಆರ್‌ಎಫ್ ಶೆಡ್ ನಿರ್ಮಾಣ ಕಾಮಗಾರಿ ಪರಿಶೀಲನೆ



ಗುಂಡ್ಲುಪೇಟೆ: ಪಟ್ಟಣದ ಕಸ ವಿಲೇವಾರಿ ಆವರಣದಲ್ಲಿ ಪ್ರಗತಿಯಲ್ಲಿರುವ ಎಂ.ಆರ್.ಎಫ್ ಶೆಡ್ ನಿರ್ಮಾಣ ಕಾಮಗಾರಿಯ ಸ್ಥಳಕ್ಕೆ ಗುಂಡ್ಲುಪೇಟೆ ಪುರಸಭೆಯ ಮುಖ್ಯಾಧಿಕಾರಿಯಾದ ಎಸ್. ಶರವಣ ಅವರು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಜಂಟಿ ಪರಿಶೀಲನೆ ನಡೆಸಿದರು.

ಕಾಮಗಾರಿಯ ಪ್ರತಿಯೊಂದು ಹಂತವನ್ನು ಕೂಲಂಕಷವಾಗಿ ವೀಕ್ಷಿಸಿದ ಮುಖ್ಯಾಧಿಕಾರಿಗಳು, ಯಾವುದೇ ಕಾರಣಕ್ಕೂ ನಿರ್ಮಾಣ ಕಾರ್ಯದ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳಬಾರದು ಎಂದು ಗುತ್ತಿಗೆದಾರರಿಗೆ ಸ್ಥಳದಲ್ಲೇ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಾಧಿಕಾರಿ ಎಸ್. ಶರವಣ ಅವರು ಈ ಎಂ.ಆರ್.ಎಫ್ ಶೆಡ್ ಪ್ರಮುಖವಾಗಿ ಒಣ ಕಸವನ್ನು ವೈಜ್ಞಾನಿಕವಾಗಿ ಸಂಸ್ಕರಿಸುವ ಘಟಕವಾಗಿ ಕಾರ್ಯನಿರ್ವಹಿಸಲಿದೆ. ಇದರಿಂದಾಗಿ ಗುಂಡ್ಲುಪೇಟೆ ಪಟ್ಟಣದ ತ್ಯಾಜ್ಯ ಮುಕ್ತ ಮತ್ತು ಸ್ವಚ್ಛತೆಯ ಪರಿಸರ ನಿರ್ಮಾಣಕ್ಕೆ ದೊಡ್ಡ ಬಲ ಸಿಗಲಿದೆ ಎಂದರು.

ಒಣ ಕಸ ಸಂಸ್ಕರಣಾ ಘಟಕದ ಪ್ರಮುಖ ಪ್ರಯೋಜನೆಯು ಒಣ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಸುಡುವುದನ್ನು ಮತ್ತು ಹರಡುವುದನ್ನು ತಡೆಗಟ್ಟಿ ಪರಿಸರ ಮಾಲಿನ್ಯವನ್ನು ನಿಯಂತ್ರಿಸಬಹುದು. ಪ್ಲಾಸ್ಟಿಕ್, ಕಾಗದ, ಗಾಜು ಮತ್ತು ಲೋಹದಂತಹ ಒಣ ಕಸವನ್ನು ವೈಜ್ಞಾನಿಕವಾಗಿ ಪ್ರತ್ಯೇಕಿಸಿ ಮರುಬಳಕೆಗೆ ಒಳಪಡಿಸಲು ಸಹಕಾರಿಯಾಗುತ್ತದೆ. ತ್ಯಾಜ್ಯ ವಿಂಗಡಣೆ ಮತ್ತು ಸಂಸ್ಕರಣಾ ಪ್ರಕ್ರಿಯೆಯಿಂದಾಗಿ ಸ್ಥಳೀಯವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಹಾಗೂ ವ್ಯವಸ್ಥಿತ ಕಸ ವಿಲೇವಾರಿಯಿಂದಾಗಿ ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ತಡೆಗಟ್ಟಬಹುದು ಎಂದಿದ್ದಾರೆ.

ಕಾಮಗಾರಿಯು ಅತ್ಯಂತ ಪಾರದರ್ಶಕವಾಗಿ ಮತ್ತು ವ್ಯವಸ್ಥಿತವಾಗಿ ನಡೆಯಬೇಕಿರುವುದರಿಂದ, ನಿರ್ಮಾಣದ ವಿವಿಧ 3 ಪ್ರಮುಖ ಹಂತಗಳಲ್ಲಿ ಕಡ್ಡಾಯವಾಗಿ ಸ್ಥಳ ಪರಿಶೀಲನೆ ನಡೆಸಿ ಪ್ರಗತಿ ವರದಿ ಸಲ್ಲಿಸುವಂತೆ ಪುರಸಭೆಯ ಕಿರಿಯ ಇಂಜಿನಿಯರ್ ಆದ ಮಂಜುನಾಥ್ ಅವರಿಗೆ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಪುರಸಭೆಯ ಪರಿಸರ ಇಂಜಿನಿಯರ್ ಮಹೇಶ್, ಜೆಸಿಬಿ ಚಾಲಕ ಕುಮಾರ್, ಮೇಸ್ತ್ರಿಗಳಾದ ಸಿದ್ದರಾಜು ಮತ್ತು ಮೂರ್ತಿ ಉಪಸ್ಥಿತರಿದ್ದರು.

# ಸರ್ಕಾರಿ ಶಾಲೆಯಿಂದ ಉತ್ತಮ ಭವಿಷ್ಯ



ಚಾಮರಾಜನಗರ, ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದವರು ಉತ್ತಮ ಭವಿಷ್ಯವನ್ನು ರೂಪಿಸಿಕೊಂಡು ದೊಡ್ಡ ಹುದ್ದೆಗಳಲ್ಲಿದ್ದಾರೆ. ಹೀಗಾಗಿ ಸರ್ಕಾರಿ ಸವಲತ್ತುಗಳನ್ನು ಪಡೆದುಕೊಂಡು ವಿದ್ಯಾರ್ಥಿಗಳು ಹಾಗು ಪೋಷಕರು ಮುಂದಾಗಬೇಕು ಎಂದು ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ ತಿಳಿಸಿದರು.

ತಾಲೂಕಿನ ನಂಜೇದೇವನಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲೆಯ ಪ್ರಾರಂಭೋತವು ಹಾಗೂ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕ ಮತ್ತು ಸಮವಸ್ತ್ರಗಳನ್ನು ವಿತರಿಸಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಖಾಸಗಿ ಶಾಲೆಗಳಿಗೆ ನಮ್ಮ ಮಕ್ಕಳನ್ನು ಸೇರಿಸಬೇಕೆಂಬ ಮೋಹ ಹೆಚ್ಚಾಗುತ್ತಿದೆ. ಹೀಗಾಗಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ. ಸರ್ಕಾರಿ ಶಾಲೆಯಲ್ಲಿ ಪ್ರತಿಭಾವಂತ ಶಿಕ್ಷಕರು ಇರುವುದು. ಜೊತೆಗೆ ಉಚಿತವಾಗಿ ಶಿಕ್ಷಣ ನೀಡುವ ಜೊತೆಗೆ ಬಿಸಿಯೂಟ, ಪಠ್ಯ ಪುಸ್ತಕ, ಸಮವಸ್ತ್ರ, ವಿದ್ಯಾರ್ಥಿ ವೇತನ ಸೇರಿದಂತೆ ಅನೇಕ ಸವಲತ್ತುಗಳು ಲಭಿಸುತ್ತಿದೆ ಎಂದರು.

- ಪಿ. ಮರಿಸ್ವಾಮಿ ಅಭಿಮತ
- ನಂಜೇದೇವನಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಶೈಕ್ಷಣಿಕ ವರ್ಷ ಪ್ರಾರಂಭೋತ್ಸವ

ಕಾರ್ಯಕ್ರಮದಲ್ಲಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಎನ್.ಪಿ. ಗಿರೀಶ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಪಿ. ಶೇಖರಪ್ಪ, ಎಸ್‌ಡಿಎಂಸಿ ಸದಸ್ಯರಾದ ಕವಿತೆ, ಮುಖ್ಯ ಶಿಕ್ಷಕ ಬಿ.ಮಹದೇವಸ್ವಾಮಿ ಎನ್‌ಜಿಓ ಸದಸ್ಯ ದೈಹಿಕ ಶಿಕ್ಷಕರು ಆದ ಮಹದೇವಸ್ವಾಮಿ, ಜಿಲ್ಲಾ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಸಹ ಕಾರ್ಯದರ್ಶಿ ಮಲ್ಲೇಶ್, ಶಿಕ್ಷಕರಾದ ರಾಜೇಂದ್ರ, ಬಸವಗೌಡ, ಕುಸುಮ, ಪ್ರತಿಭಾರಾಣಿ , ಪ್ರಭುಸ್ವಾಮಿ, ಸಿಬ್ಬಂದಿ ವರ್ಗದವರಾದ ಶಿವ ದೇವಪ್ರಸಾದ್, ಲಕ್ಷ್ಮಮ್ಮ, ಅಡುಗೆ ಸಿಬ್ಬಂದಿಗಳು ಹಾಗೂ ಗ್ರಾಮಸ್ಥರುಗಳು ಪೊ?ಷಕರುಗಳು ಹಾಜರಿದ್ದರು.

### ನಾಯಕ ಸಮಾಜದ ಮುಖಂಡರ ಆಗ್ರಹ

# ಎಆರ್‌ಕೆ, ಬಸವರಾಜುಗೆ ಉನ್ನತ ಸ್ಥಾನ ನೀಡಿ




ಚಾಮರಾಜನಗರ: ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ, ಜಿ.ಪಂ.ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು ಅವರಿಗೆ ವಿಧಾನ ಪರಿಷತ್ ಸ್ಥಾನ ನೀಡುವಂತೆ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ನಾಯಕ ಸಮಾಜದ ಮುಖಂಡರು ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ತಾ.ಪಂ. ಮಾಜಿ ಅಧ್ಯಕ್ಷ ಎಲ್.ರಾಮಚಂದ್ರ ಮಾತನಾಡಿ, ಮಾಜಿ ರಾಜ್ಯಪಾಲರಾದ ಬಿ.ರಾಚಯ್ಯ ಅವರ ಸುಪುತ್ರ ಕೊಳ್ಳೇಗಾಲ ಕ್ಷೇತ್ರದ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಅವರು 3 ಬಾರಿ ಶಾಸಕರಾಗಿದ್ದು, ಜಿಲ್ಲೆಯ ನಾಡಿಮಿಡಿತ ಅರಿತಿದ್ದು, ಸಾಕಷ್ಟು ಅನುಭವ ಹೊಂದಿರುವ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ, ಎಸ್.ಸಿ.ಬಸವರಾಜು ಅವರಿಗೆ ವಿಧಾನ ಪರಿಷತ್ ಸ್ಥಾನ ನೀಡುವಂತೆ

ಕಾಂಗ್ರೆಸ್ ಕೇಂದ್ರ, ರಾಜ್ಯ ವರಿಷ್ಠರನ್ನು ಒತ್ತಾಯಿಸಿದರು.

ಬಿ.ರಾಚಯ್ಯ ಅವರು ಹಲವು ಇಲಾಖೆಯ ಸಚಿವರಾಗಿ ಜಿಲ್ಲೆಯಲ್ಲಿ ನೀರಾವರಿ, ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಕೊಡುಗೆ ನೀಡಿದ್ದಾರೆ. ಆಗಾಗಿ ಅವರ ಪುತ್ರ ಎ.ಆರ್.ಕೃಷ್ಣಮೂರ್ತಿ ಅವರನ್ನು ಸಚಿವರಾಗಿ ಮಾಡಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಎಂಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಜಯರಾಂ, ಟೌನ್ ಪಂಚಾಯತಿ ಮಾಜಿ ಅಧ್ಯಕ್ಷ ರವಿ, ಕೆಂಪನಪುರ ಗ್ರಾ.ಪಂ.ಮಾಜಿ ಅಧ್ಯಕ್ಷ ಆರ್.ಮಾದೇಶ್, ಮಸಣಾಪುರ ಗ್ರಾ.ಪಂ ಮಾಜಿ ಪ್ರಭಾರ ಅಧ್ಯಕ್ಷ ವಿ. ಮಹದೇಶ್ , ಗುಂಬಳ್ಳಿ ಗ್ರಾ.ಪಂ.ಮಾಜಿ ಅಧ್ಯಕ್ಷ ರಾಜಣ್ಣ, ಆರೋಗ್ಯ ಸಮಿತಿ ಸದಸ್ಯ ಈರಣ್ಣ, , ಚಂಗಚಹಳ್ಳಿ ಮಹದೇವಸ್ವಾಮಿ, ಅಂಬಳೆ ಗ್ರಾ.ಪಂ. ಮಾಜಿ ಅಧ್ಯಕ್ಷ ಸಿದ್ದನಾಯಕ ಹಾಜರಿದ್ದರು.

## ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್ ಪಾಸ್: ಅರ್ಜಿ ಆಹ್ವಾನ

**ಬೆಂಗಳೂರು:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ದಿನಪತ್ರಿಕೆಗಳು/ಮಾಧ್ಯಮ ಸಂಸ್ಥೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರಿಗೆ ತಿದ್ದುಪಡಿ ಮಾಡಲಾದ ಹೊಸ ಮಾರ್ಗಸೂಚಿಯನ್ವಯ ಉಚಿತ ಬಸ್ ಪಾಸ್ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಪತ್ರಕರ್ತರು ಕಾರ್ಯನಿರ್ವಹಿಸುತ್ತಿರುವ ಸಂಸ್ಥೆಗಳಲ್ಲಿ ಪೂರ್ಣಾವಧಿ/ಅರೆಕಾಲಿಕ ವರದಿಗಾರರಾಗಿ ನೇಮಕವಾಗಿದ್ದಲ್ಲಿ ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ/ ಸ್ಥಾನಿಕ ಸಂಪಾದಕರ/ ಮುಖ್ಯಸ್ಥರ ಶಿಫಾರಸ್ಸು ಪತ್ರ ಮತ್ತು ಸೇವಾ ಪ್ರಮಾಣ ಪತ್ರವನ್ನು ಲಗತ್ತಿಸಿ "ಸೇವಾಸಿಂಧು" ಪೋರ್ಟಲ್ https://sevasindhu.karnataka.gov.in ಮೂಲಕ ಆನ್ ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದು.

2025ರ ಸೆಪ್ಟೆಂಬರ್ 12ರ ನಂತರ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಮತ್ತೊಮ್ಮೆ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಈ ಹಿಂದೆ ಇದ್ದ ಮಾರ್ಗಸೂಚಿಯಲ್ಲಿ 11 ತಿಂಗಳ ವೇತನ ಪತ್ರ ಸಲ್ಲಿಸಬೇಕು ಎಂಬ ಷರತ್ತನ್ನು ಸಡಿಲಿಸಿ. ಆಯಾ ಮಾಧ್ಯಮ ಸಂಸ್ಥೆಯ ಸಂಪಾದಕರ, ಸ್ಥಾನಿಕ ಸಂಪಾದಕರ/ಮುಖ್ಯಸ್ಥರ ಶಿಫಾರಸ್ಸು ಪತ್ರವನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ.

ಆನ್ ಲೈನ್ ನಲ್ಲಿ ಸಲ್ಲಿಸಲಾದ ಅರ್ಜಿ ಮತ್ತು ಲಗತ್ತಿಸಲಾಗಿರುವ ದಾಖಲೆಗಳ ಒಂದು ಪ್ರತಿಯನ್ನು ಆಯಾ ಜಿಲ್ಲೆಯ ವಾರ್ತಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು. ಸ್ವೀಕೃತ ಅರ್ಜಿಗಳನ್ನು ಆಯ್ಕೆ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ ಬಸ್ ಪಾಸ್ ಮಂಜೂರು ಮಾಡಲಾಗುತ್ತದೆ. ತಾಲ್ಲೂಕು ಮಟ್ಟದ ಪತ್ರಕರ್ತರಿಗೆ ಸುದ್ದಿ ಸಂಗ್ರಹಿಸಲು ಅನುಕೂಲ ಕಲ್ಪಿಸಲು ಸರ್ಕಾರವು ವಾರ್ತಾ ಇಲಾಖೆಯ ಮೂಲಕ ಉಚಿತ ಬಸ್ ಪಾಸ್ ಗಳನ್ನು ನೀಡುತ್ತಿದೆ.

ರಾಜ್ಯದ ಎಲ್ಲಾ ತಾಲ್ಲೂಕುಗಳ ಅರ್ಹ ಪತ್ರಕರ್ತರು ಕೂಡಲೇ "ಸೇವಾಸಿಂಧು" ಪೋರ್ಟಲ್ ಮೂಲಕ 2026 ರ ಜೂನ್ 20 ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ನಿಂಬಾಳ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



## ರಾಗಿ ಲಕ್ಷ್ಮಣಯ್ಯರ ಆದರ್ಶ, ಸಂಶೋಧನೆ– ರೈತಪರ ಚಿಂತನೆ ಇಂದಿನ ಪೀಳಿಗೆಗೆ ಸ್ಫೂರ್ತಿ: ಡಾ. ಕೆ.ಸಿ. ನಾರಾಯಣಸ್ವಾಮಿ

**ಮಂಡ್ಯ:** ಬಡವರ ಧಾನ್ಯವೆಂದೇ ಖ್ಯಾತಿ ಪಡೆದಿರುವ ರಾಗಿ ಬೆಳೆಯ ಅಭಿವೃದ್ಧಿಗೆ ತಮ್ಮ ಜೀವನವನ್ನೇ ಸಮರ್ಪಿಸಿದ ಮಹಾನ್ ಕೃಷಿ ವಿಜ್ಞಾನಿ ರಾಗಿ ಲಕ್ಷ್ಮಣಯ್ಯ ಅವರ ಸಂಶೋಧನೆ, ಸರಳ ವ್ಯಕ್ತಿತ್ವ, ಮಾನವೀಯತೆ ಹಾಗೂ ರೈತರ ಮೇಲಿನ ಅಪಾರ ಕಾಳಜಿ ಇಂದಿನ ಕೃಷಿ ವಿಜ್ಞಾನಿಗಳು, ವಿದ್ಯಾರ್ಥಿಗಳು ಮತ್ತು ರೈತರಿಗೆ ಶಾಶ್ವತ ಮಾರ್ಗದರ್ಶಿಯಾಗಿವೆ ಎಂದು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯ ಕುಲಪತಿ ಡಾ. ಕೆ.ಸಿ. ನಾರಾಯಣಸ್ವಾಮಿ ಅವರು ಹೇಳಿದರು.

ಮಂಡ್ಯದ ವಿ.ಸಿ. ಫಾರಂನ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ರಾಗಿ ಲಕ್ಷ್ಮಣಯ್ಯ ಸ್ಮಾರಕ ಸಮಿತಿ ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯ ಇವರ ಸಹಯೋಗದಲ್ಲಿ ಆಯೋಜಿಸಿದ್ದ 29 ಮತ್ತು 30ನೇ ವರ್ಷದ ರಾಗಿ ಲಕ್ಷ್ಮಣಯ್ಯ ಸ್ಮಾರಕ ಉಪನ್ಯಾಸ ಹಾಗೂ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಗಿ ಲಕ್ಷ್ಮಣಯ್ಯ ಅವರು ಸಾಮಾನ್ಯ ರೈತ ಕುಟುಂಬದಲ್ಲಿ ಜನಿಸಿ ತಮ್ಮ ಪರಿಶ್ರಮ, ಬದ್ಧತೆ ಮತ್ತು ವೈಜ್ಞಾನಿಕ ದೃಷ್ಟಿಕೋನದ ಮೂಲಕ ಕೃಷಿ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ್ದಾರೆ. ರಾಗಿ ಬೆಳೆಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅವರು ಅಭಿವೃದ್ಧಿಪಡಿಸಿದ ಇಂಡಾಫ್ (ಖಓಆಂಈ) ಸರಣಿಯ ತಳಿಗಳು ರಾಗಿ ಸಂಶೋಧನೆಯಲ್ಲಿ ಹೊಸ ಅಧ್ಯಾಯವನ್ನು ಬರೆದಿವೆ. ಹಿಂದೆ ಪ್ರತಿ ಎಕರೆಗೆ ಕೇವಲ 2 ರಿಂದ 3 ಕ್ವಿಂಟಾಲ್ ಉತ್ಪಾದನೆಯಷ್ಟೇ ದೊರೆಯುತ್ತಿದ್ದ ರಾಗಿ ಬೆಳೆಯನ್ನು 8 ರಿಂದ 12 ಕ್ವಿಂಟಾಲ್ ಉತ್ಪಾದನೆಯ ಮಟ್ಟಕ್ಕೆ ಏರಿಸುವಲ್ಲಿ ಅವರ ಸಂಶೋಧನೆ ಮಹತ್ತರ ಪಾತ್ರ ವಹಿಸಿದೆ ಎಂದು ತಿಳಿಸಿದರು.

ಭಾರತ ಮತ್ತು ಆಫ್ರಿಕಾದ ರಾಗಿ ತಳಿಗಳ ಸಂಯೋಜನೆಯಿಂದ ಅಭಿವೃದ್ಧಿಪಡಿಸಿದ ಇಂಡಾಫ್ ಸರಣಿಯ ತಳಿಗಳು ಕರ್ನಾಟಕ ಸೇರಿದಂತೆ ದೇಶದ ವಿವಿಧ ಭಾಗಗಳ ರೈತರಿಗೆ ಅಪಾರ ಪ್ರಯೋಜನ ತಂದಿದ್ದು, ರಾಗಿ ಬೆಳೆಯ ಅಭಿವೃದ್ಧಿಯಲ್ಲಿ ಕ್ರಾಂತಿಕಾರಕ ಬದಲಾವಣೆ ತಂದಿವೆ ಎಂದು ಹೇಳಿದರು. ವಿಶೇಷವಾಗಿ ಅವರ ಬಹುತೇಕ ಸಂಶೋಧನಾ ಕಾರ್ಯಗಳು ಮಂಡ್ಯದ ವಿ.ಸಿ. ಫಾರಂನಲ್ಲಿ ನಡೆದಿರುವುದು ವಿಶ್ವವಿದ್ಯಾಲಯಕ್ಕೆ ಹೆಮ್ಮೆಯ ಸಂಗತಿಯಾಗಿದೆ ಎಂದರು.



ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯದ ಬೆಳವಣಿಗೆ ಮತ್ತು ಕೃಷಿ ಕ್ಷೇತ್ರದ ಅಭಿವೃದ್ಧಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್, ಲೆಸ್ಲಿ ಕೋಲ್ಮನ್ ಹಾಗೂ ರಾಗಿ ಲಕ್ಷ್ಮಣಯ್ಯ ಅವರ ಕೊಡುಗೆ ಅತ್ಯಂತ ಮಹತ್ವದ್ದಾಗಿದೆ. ಈ ಮೂವರು ಮಹನೀಯರ ದೂರದೃಷ್ಟಿ, ತ್ಯಾಗ ಮತ್ತು ಕಾರ್ಯಚಟುವಟಿಕೆಗಳು ವಿಶ್ವವಿದ್ಯಾಲಯದ ಬೆಳವಣಿಗೆಗೆ ಬಲವಾದ ಅಡಿಪಾಯ ಹಾಕಿವೆ ಎಂದು ಅವರು ಸ್ಮರಿಸಿದರು.

ಕರ್ನಾಟಕ ಸರ್ಕಾರವು ರಾಗಿ ಲಕ್ಷ್ಮಣಯ್ಯ ಅವರ ಜೀವನ ಮತ್ತು ಸಾಧನೆಗಳನ್ನು ಆಧರಿಸಿ ಸಾಕ್ಷ್ಯಚಿತ್ರ ನಿರ್ಮಿಸಿರುವುದು ಅವರ ಅಸಾಧಾರಣ ಕೊಡುಗೆಗಳಿಗೆ ದೊರೆತ ಗೌರವವಾಗಿದೆ. ಅವರು ಕೇವಲ ಶ್ರೇಷ್ಠ ವಿಜ್ಞಾನಿಯಷ್ಟೇ ಅಲ್ಲದೆ, ಸಮಾಜದ ಬಗ್ಗೆ ಅಪಾರ ಕಾಳಜಿ ಹೊಂದಿದ್ದ, ಶಿಸ್ತು, ಸರಳತೆ ಮತ್ತು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡ ಮಹಾನ್ ವ್ಯಕ್ತಿಯಾಗಿದ್ದರು ಎಂದು ಕುಲಪತಿಗಳು ಹೇಳಿದರು.

ಇಂದಿನ ವಿದ್ಯಾರ್ಥಿಗಳು ಮತ್ತು ಯುವ ಕೃಷಿ ವಿಜ್ಞಾನಿಗಳು ರಾಗಿ ಲಕ್ಷ್ಮಣಯ್ಯ ಅವರ ತತ್ವ, ಸಿದ್ಧಾಂತಗಳು ಹಾಗೂ ಸೇವಾ ಮನೋಭಾವವನ್ನು ಅಳವಡಿಸಿಕೊಳ್ಳಬೇಕು. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಮಂಡ್ಯದ ಮೇಲೆ ಸರ್ಕಾರ ಮತ್ತು ರೈತ ಸಮುದಾಯ ಅಪಾರ ನಿರೀಕ್ಷೆ ಇಟ್ಟಿದ್ದು, ವಿಶ್ವವಿದ್ಯಾಲಯವು ರೈತರ, ವಿದ್ಯಾರ್ಥಿಗಳ ಹಾಗೂ ಗ್ರಾಮೀಣ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದೆ. ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವ ಸುಸ್ಥಿರ ಕೃಷಿ ತಂತ್ರಜ್ಞಾನಗಳ ಅಭಿವೃದ್ಧಿ ಹಾಗೂ ರೈತರ ಆದಾಯ ಹೆಚ್ಚಳಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಸ್ಮಾರಕ ಉಪನ್ಯಾಸ ನೀಡಿದ ಖ್ಯಾತ ಸಸ್ಯತಳಿ ಕೃಷಿ ವಿಜ್ಞಾನಿ ಡಾ. ಶರಣ ಬಸವೇಶ್ವರ ಅಂಗಡಿ ಅವರು ?ಬೆಳೆ ಸುಧಾರಣೆ ಮತ್ತು ರೈತ ಸಮೃದ್ಧಿ? ವಿಷಯದ ಕುರಿತು ಉಪನ್ಯಾಸ ನೀಡಿ, ಸುಧಾರಿತ ತಳಿಗಳು, ವೈಜ್ಞಾನಿಕ ಕೃಷಿ ಪದ್ಧತಿಗಳು ಹಾಗೂ ಹವಾಮಾನ ಸ್ನೇಹಿ ತಂತ್ರಜ್ಞಾನಗಳ ಅಳವಡಿಕೆಯಿಂದ ರೈತರ ಆದಾಯ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಬಹುದೆಂದು ಅಭಿಪ್ರಾಯಪಟ್ಟರು.


ಸಾಹಿತಿ ಪ್ರೊ. ಎಂ. ನಾರಾಯಣಸ್ವಾಮಿ ಅವರು ಮಾತನಾಡಿ, ರಾಗಿ ಲಕ್ಷ್ಮಣಯ್ಯ ಅವರ ವ್ಯಕ್ತಿತ್ವ, ಸರಳತೆ ಹಾಗೂ ಕೃಷಿ ಕ್ಷೇತ್ರಕ್ಕೆ ನೀಡಿದ ಅಪಾರ ಕೊಡುಗೆಗಳನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಪರ್ಣ ಟಿ.ಎಂ. ಹಾಗೂ ಕು. ಸ್ಫೂರ್ತಿ ಆರ್. ಪ್ರಶಸ್ತಿ ಪ್ರಧಾನ ಮಾಡಲಾಯಿತು. ರಾಗಿ ಬೆಳೆ, ಭತ್ತ ಬೆಳೆ, ಹೈನುಗಾರಿಕೆ ಮತ್ತು ಹಾಲು ಉತ್ಪಾದನೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಶ್ರೀ ಚಲುವಯ್ಯ, ಶ್ರೀಮತಿ ತನುಜಾ, ಶ್ರೀ ಎಂ. ಪುಟ್ಟಮಲ್ಲೇಗೌಡ, ಶ್ರೀ ಕೆ.ಎ. ಮಂಜೇಗೌಡ ಹಾಗೂ ಶ್ರೀ ಸಂತೋಷ್ ಕುಮಾರ್ ಆರ್. ಅವರಿಗೆ ರೈತ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ರಾಗಿ ಲಕ್ಷ್ಮಣಯ್ಯ ಸ್ಮಾರಕ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಬೋರಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಡೀನ್ (ಕೃಷಿ) ಡಾ. ಪಿ.ಎಸ್. ಫಾತಿಮಾ, ಸಹ ಸಂಶೋಧನಾ ನಿರ್ದೇಶಕ ಡಾ. ಬಿ.ಎಸ್. ಬಸವರಾಜು, ಸುನಂದ ಜಯರಾಮ್, ರೈತ ಮುಖಂಡರು, ಎಚ್ ಎಲ್ ವಸಂತ ಕುಮಾರ್ ನಿವೃತ್ತ ಸಹ ಪ್ರಾಧ್ಯಾಪಕರು, ಕೆ ಆರ್ ಜೈ ರಾಮು, ಎಸ್ ಯೋಗಾನಂದ, ಮುರುಳಿಧರ್ ಎಸ್ ಬೆಳ್ಳೂರು, ಹಾಗೂ ಸೈಯದ್ ಗನಿ ಖಾನ್ ಸೇರಿದಂತೆ ಸ್ಮಾರಕ ಸಮಿತಿಯ ಪದಾಧಿಕಾರಿಗಳು, ವಿಜ್ಞಾನಿಗಳು, ರೈತ ಮುಖಂಡರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ರಾಗಿ ಲಕ್ಷ್ಮಣಯ್ಯ ಅವರು ದೈಹಿಕವಾಗಿ ನಮ್ಮೊಂದಿಗಿಲ್ಲದಿದ್ದರೂ, ಅವರ ಸಂಶೋಧನಾ ಸಾಧನೆಗಳು, ರೈತರ ಮೇಲಿನ ಕಾಳಜಿ, ಕೃಷಿ ಅಭಿವೃದ್ಧಿಯ ಬದ್ಧತೆ ಮತ್ತು ಮಾನವೀಯ ಮೌಲ್ಯಗಳು ಇಂದಿಗೂ ಜೀವಂತವಾಗಿದ್ದು, ಮುಂದಿನ ಪೀಳಿಗೆಗಳಿಗೆ ಸ್ಫೂರ್ತಿಯ ಚಿಲುಮೆಯಾಗಿವೆ ಎಂದು ಕಾರ್ಯಕ್ರಮದಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

## ಮರೆಯೋದುಂಟೆ ಮೈಸೂರು ದೊರೆಯ, ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯ



ಒಂದು ದೇಶ ಅಥವಾ ರಾಜ್ಯದ ಯಶಸ್ಸನ್ನು ಕೇವಲ ಅದರ ಭೌಗೋಳಿಕ ವಿಸ್ತೀರ್ಣದಿಂದ ಅಳೆಯಲಾಗುವುದಿಲ್ಲ; ಬದಲಿಗೆ ಅದು ತನ್ನ ಪ್ರಜೆಗಳಿಗೆ ನೀಡುವ ಜೀವನದ ಗುಣಮಟ್ಟ ಮತ್ತು ದೂರದೃಷ್ಟಿಯ ಯೋಜನೆಗಳ ಮೇಲೆ ನಿರ್ಧಾರವಾಗುತ್ತದೆ. ಇಂತಹದೊಂದು ಉದಾತ್ತ ಚಿಂತನೆಗೆ ಸಾಕಾರ ರೂಪವಾಗಿ ನಿಲ್ಲುವ ಹೆಸರು ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್. ಇಂದಿನ ಸಮೃದ್ಧ ಕರ್ನಾಟಕಕ್ಕೆ ಅಂದೇ ಭದ್ರಬುನಾದಿ ಹಾಕಿದ ಈ ರಾಜರ್ಷಿಯ ಆಡಳಿತ ವೈಖರಿ, ಕೇವಲ ಇತಿಹಾಸದ ಪುಟಗಳಲ್ಲಷ್ಟೇ ಅಲ್ಲ, ಇಂದಿನ ಆಧುನಿಕ ಆಡಳಿತಕ್ಕೂ ದಿಕ್ಸೂಚಿಯಾಗಿದೆ. ಇಂದು ಅವರ ಜನ್ಮ ದಿನ . ಇಂದು ಅವರ ಸಾಧನೆಗಳ ಮೂಲಕ ಅವರನ್ನು ನೆನೆಯೋಣ.

**ಬಾಲ್ಯ ಮತ್ತು ಆರಂಭಿಕ ದಿನಗಳು:** ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜೂನ್ 4, 1884 ರಂದು ಮೈಸೂರು ಅರಮನೆಯಲ್ಲಿ ಜನಿಸಿದರು. ಕೇವಲ ಹನ್ನೊಂದು ವರ್ಷದ ಬಾಲಕನಾಗಿದ್ದಾಗಲೇ ತಂದೆ ಚಾಮರಾಜ ಒಡೆಯರ್ ಅವರನ್ನು ಕಳೆದುಕೊಂಡ ಹಿನ್ನೆಲೆಯಲ್ಲಿ, ಇವರ ಪರವಾಗಿ ತಾಯಿ ಮಹಾರಾಣಿ ಕೆಂಪನಂಜಮ್ಮಣ್ಣಿ (ವಾಣಿ ವಿಲಾಸ ಸನ್ನಿಧಾನ) ಅವರು ರಾಜಪ್ರತಿನಿಧಿಯಾಗಿ ಸಮರ್ಥ ಆಡಳಿತ ನಡೆಸಿದರು.

ಬಾಲ್ಯದಲ್ಲಿಯೇ ನಾಲ್ವಡಿಯವರಿಗೆ ಅತ್ಯುತ್ತಮ ಶಿಕ್ಷಣ ಮತ್ತು ಆಡಳಿತ ತರಬೇತಿಯನ್ನು ನೀಡಲಾಯಿತು. ಬ್ರಿಟಿಷ್ ಅಧಿಕಾರಿ ಸ್ಟುವರ್ಟ್ ಫ್ರೇಸರ್ ಅವರ ಮಾರ್ಗದರ್ಶನದಲ್ಲಿ ನ್ಯಾಯಶಾಸ್ತ್ರ, ಅರ್ಥಶಾಸ್ತ್ರ ಮತ್ತು ಆಡಳಿತ ನಿರ್ವಹಣೆಯ ಪ್ರಾಯೋಗಿಕ ಜ್ಞಾನವನ್ನು ಅವರು ಪಡೆದರು. ಕೇವಲ ಕಾವ್ಯ–ಶಾಸ್ತ್ರಗಳಲ್ಲದೆ, ರಾಜ್ಯದಾದ್ಯಂತ ಪ್ರವಾಸ ಕೈಗೊಂಡು ಪ್ರಜೆಗಳ ಕಷ್ಟ–ಸುಖಗಳನ್ನು ಕಣ್ಣಾರೆ ಕಂಡುಕೊಂಡದ್ದು ಅವರ ಮುಂದಿನ ಆಡಳಿತ ವೈಖರಿಗೆ ದಾರಿದೀಪವಾಯಿತು. 1902 ರಲ್ಲಿ ಅವರು ಮೈಸೂರು ರಾಜ್ಯದ ಪೂರ್ಣ ಅಧಿಕಾರವನ್ನು ವಹಿಸಿಕೊಂಡಾಗ, ಇವರ ಎದುರಿದ್ದದ್ದು ಕೇವಲ ಸಿಂಹಾಸನವಲ್ಲ, ಬದಲಿಗೆ ಪ್ರಜಾಕಲ್ಯಾಣದ ಮಹತ್ತರ ಜವಾಬ್ದಾರಿ.

**ಭಾರತದ ಅತ್ಯಂತ ಶ್ರೀಮಂತ ಮತ್ತು ಮಾದರಿ ಸಂಸ್ಥಾನ**

ನಾಲ್ವಡಿಯವರ ಆಡಳಿತಾವಧಿಯಲ್ಲಿ ಮೈಸೂರು ಕೇವಲ ಸಾಂಸ್ಕೃತಿಕವಾಗಿ ಮಾತ್ರವಲ್ಲದೆ, ಆರ್ಥಿಕವಾಗಿಯೂ ಭಾರತದ ಅತ್ಯಂತ ಶ್ರೀಮಂತ ಮತ್ತು ಪ್ರಗತಿಪರ ರಾಜ್ಯಗಳಲ್ಲಿ ಒಂದಾಗಿತ್ತು. ಇತಿಹಾಸದ ದಾಖಲೆಗಳ ಪ್ರಕಾರ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಜಗತ್ತಿನ ಅತ್ಯಂತ ಶ್ರೀಮಂತ ವ್ಯಕ್ತಿಗಳ ಪಟ್ಟಿಯಲ್ಲಿದ್ದರು. ಆದರೆ, ಅವರ ಶ್ರೀಮಂತಿಕೆ ಕೇವಲ ಅರಮನೆಯ ಖಜಾನೆಗೆ ಸೀಮಿತವಾಗಿರಲಿಲ್ಲ. ರಾಜ್ಯದ ಆರ್ಥಿಕ ಶಕ್ತಿಯನ್ನು ಅವರು ಪ್ರಜೆಗಳ ತಲಾ ಆದಾಯ ಹೆಚ್ಚಿಸಲು ಮತ್ತು ಕೈಗಾರಿಕೀಕರಣಕ್ಕೆ ಬಳಸಿದರು. ಚಿನ್ನದ ಗಣಿಗಳು, ವ್ಯವಸ್ಥಿತ ತೆರಿಗೆ ಪದ್ಧತಿ ಮತ್ತು ಅತ್ಯುತ್ತಮ ವ್ಯಾಪಾರ ನೀತಿಗಳಿಂದಾಗಿ ಮೈಸೂರು ಸಂಸ್ಥಾನವು ಬ್ರಿಟಿಷ್ ಇಂಡಿಯಾದ ಇತರ ಪ್ರಾಂತಗಳಿಗಿಂತ ಆರ್ಥಿಕವಾಗಿ ಸ್ವಾವಲಂಬಿಯಾಗಿತ್ತು.

**ದೂರದೃಷ್ಟಿಯ ಆಡಳಿತ ಮತ್ತು ವಿವಿಧ ಕ್ಷೇತ್ರಗಳಿಗೆ ಕೊಡುಗೆ**

1. **ಏಷ್ಯಾದಲ್ಲೇ ಮೊದಲು: ವಿದ್ಯುತ್ ಕ್ರಾಂತಿ**
   ಭಾರತ ಹಾಗೂ ಇಡೀ ಏಷ್ಯಾ ಖಂಡದಲ್ಲೇ ಮೊದಲ ಜಲವಿದ್ಯುತ್ ಯೋಜನೆಯನ್ನು ಶಿವನಸಮುದ್ರದಲ್ಲಿ 1902 ರಲ್ಲಿ ಆರಂಭಿಸಿದ ಕೀರ್ತಿ ನಾಲ್ವಡಿಯವರಿಗೆ ಸಲ್ಲುತ್ತದೆ. ಇದರ ಫಲವಾಗಿ ಆಗಸ್ಟ್ 5, 1905 ರಂದು ಬೆಂಗಳೂರು ನಗರಕ್ಕೆ ವಿದ್ಯುತ್ ದೀಪದ ಸೌಕರ್ಯ ಕಲ್ಪಿಸಲಾಯಿತು. ಬೆಂಗಳೂರು ನಗರವು ಏಷ್ಯಾ ಖಂಡದಲ್ಲೇ ಬೀದಿ ದೀಪಗಳನ್ನು ಪಡೆದ ಮೊದಲ ನಗರ ಎಂಬ ಜಾಗತಿಕ ಹೆಗ್ಗಳಿಕೆಗೆ ಪಾತ್ರವಾಯಿತು. ಈ ವಿದ್ಯುತ್ ಶಕ್ತಿಯೇ ಮುಂದೆ ರಾಜ್ಯದ ಕೈಗಾರಿಕಾ ಕ್ರಾಂತಿಗೆ ಇಂಧನವಾಯಿತು.
2. **ಮೈಸೂರು ರೇಷ್ಮೆ (Mysore Silk) ಮತ್ತು ಎಚ್.ಎ.ಎಲ್ (HAL) ಸ್ಥಾಪನೆ**
   ಮೈಸೂರು ರೇಷ್ಮೆಯ ವೈಭವವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ದವರು ನಾಲ್ವಡಿಯವರು. 1912 ರಲ್ಲಿ ಅವರು ದೇಶದ ಮೊದಲ ರೇಷ್ಮೆ ನೇಯ್ಗೆ ಕಾರ್ಖಾನೆಯನ್ನು (ಪ್ರಸ್ತುತ ಕೆ.ಎಸ್.ಐ.ಸಿ) ಸ್ಥಾಪಿಸಿದರು. ಸ್ವಿಸ್ ತಂತ್ರಜ್ಞಾನ ಮತ್ತು ಶುದ್ಧ ಚಿನ್ನ ಹಾಗೂ ಬೆಳ್ಳಿಯ ಜರಿಯನ್ನು ಬಳಸಿ ಸಿದ್ಧಪಡಿಸಲಾದ ?ಮೈಸೂರು ಸಿಲ್ಕ್? ಸೀರೆಗಳು ರಾಜಮನೆತನದ ಆಭರಣಗಳಷ್ಟೇ ಗೌರವ ಪಡೆದವು ಮತ್ತು ಇಂದಿಗೂ ಕರ್ನಾಟಕದ ಹೆಮ್ಮೆಯ ಬ್ರ್ಯಾಂಡ್ ಆಗಿ ಉಳಿದಿವೆ. ಭಾರತದ ರಕ್ಷಣಾ ಮತ್ತು ವೈಮಾನಿಕ ಕ್ಷೇತ್ರದ ಹೆಮ್ಮೆಯ ಸಂಸ್ಥೆಯಾದ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಊಂಐ) ಸ್ಥಾಪನೆಗೂ ನಾಲ್ವಡಿಯವರ ದೂರದೃಷ್ಟಿಯೇ ಕಾರಣ. 1940 ರಲ್ಲಿ ಈ ಸಂಸ್ಥೆಯ (ಅಂದಿನ ಹಿಂದೂಸ್ತಾನ್ ಏರ್‌ಕ್ರಾಫ್ಟ್) ಸ್ಥಾಪನೆಗೆ ಮಹಾರಾಜರು ಬೆಂಗಳೂರಿನಲ್ಲಿ ಅಗತ್ಯವಾದ ಭೂಮಿ ಮತ್ತು ಮೂಲಸೌಕರ್ಯಗಳನ್ನು ಒದಗಿಸಿ ಭದ್ರಬುನಾದಿ ಹಾಕಿದರು.
3. **ಶಿಕ್ಷಣ ಮತ್ತು ಸಂಶೋಧನೆ**
   ದೇಶದಲ್ಲೇ ಮೊದಲ ಬಾರಿಗೆ ಪ್ರಾಥಮಿಕ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯಗೊಳಿಸಿದ ಕೀರ್ತಿ ನಾಲ್ವಡಿಯವರಿಗೆ ಸಲ್ಲುತ್ತದೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ವಿಶೇಷ ಪ್ರೋತ್ಸಾಹ ನೀಡಿದ ಅವರು, ವಿಧವೆಯರಿಗೆ ವಿದ್ಯಾರ್ಥಿವೇತನವನ್ನು ಆರಂಭಿಸಿದರು. 1916 ರಲ್ಲಿ ಸ್ಥಾಪನೆಯಾದ ಮೈಸೂರು ವಿಶ್ವವಿದ್ಯಾಲಯವು ಭಾರತದ ದೇಸಿ ಸಂಸ್ಥಾನವೊಂದರಲ್ಲಿ ಆರಂಭವಾದ ಮೊದಲ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಬೆಂಗಳೂರಿನ ಪ್ರಸಿದ್ಧ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (IISc) ಸ್ಥಾಪನೆಗೆ ಮಹಾರಾಜರು 371 ಎಕರೆ ಭೂಮಿ ಮತ್ತು ಭಾರಿ ಮೊತ್ತದ ಧನಸಹಾಯವನ್ನು ನೀಡಿದ್ದು, ಭಾರತವನ್ನು ಜಾಗತಿಕ ಸಂಶೋಧನಾ ಭೂಪಟದಲ್ಲಿ ಗುರುತಿಸುವಂತೆ ಮಾಡಿತು.
4. **ಆರೋಗ್ಯ ಕ್ಷೇತ್ರ**
   ಪ್ರಜೆಗಳ ಆರೋಗ್ಯವೇ ರಾಜ್ಯದ ಭಾಗ್ಯ ಎಂದು ನಂಬಿದ್ದ ಒಡೆಯರ್, ಬೆಂಗಳೂರಿನ ಮಿಂಟೋ ಕಣ್ಣಿನ ಆಸ್ಪತ್ರೆ (ಏಷ್ಯಾದ ಅತ್ಯಂತ ಹಳೆಯ ಕಣ್ಣಿನ ಆಸ್ಪತ್ರೆಗಳಲ್ಲಿ ಒಂದು), ವಾಣಿ ವಿಲಾಸ ಆಸ್ಪತ್ರೆ ಮತ್ತು ಮೈಸೂರಿನ ಕೆ.ಆರ್. ಆಸ್ಪತ್ರೆಗಳನ್ನು ಸ್ಥಾಪಿಸಿದರು. ಇಂದಿನ ಪ್ರಸಿದ್ಧ ಮಾನಸಿಕ ಆರೋಗ್ಯ ಸಂಸ್ಥೆಯಾದ ನಿಮ್ಹಾನ್ಸ್ (NIMHANS) ಸ್ಥಾಪನೆಗೆ ಅಂದೇ 100 ಎಕರೆಗೂ ಹೆಚ್ಚು ಭೂಮಿಯನ್ನು ದಾನವಾಗಿ ನೀಡಿದರು. ಪ್ಲೇಗ್ ಮತ್ತು ಸಿಡುಬಿನಂತಹ ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ವ್ಯವಸ್ಥಿತ ಲಸಿಕಾ ಅಭಿಯಾನಗಳನ್ನು ಇವರ ಕಾಲದಲ್ಲೇ ಕೈಗೊಳ್ಳಲಾಯಿತು.
5. **ಕೃಷಿ ಮತ್ತು ನೀರಾವರಿ ಕ್ರಾಂತಿ: ಜಲಾಶಯಗಳ ನಿರ್ಮಾಣ**
   ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತಾವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಕೃಷಿ ಮತ್ತು ನೀರಾವರಿ ಕ್ರಾಂತಿಗೆ ಅತ್ಯಂತ ವ್ಯವಸ್ಥಿತವಾದ ಅಡಿಪಾಯ ಹಾಕಲಾಯಿತು. ಇವರ ಕಾಲದಲ್ಲಿ ಪ್ರಮುಖವಾಗಿ ಮೂರು ಬೃಹತ್ ಅಣೆಕಟ್ಟುಗಳನ್ನು ನಿರ್ಮಿಸಲಾಯಿತು.
   ಅದರಲ್ಲಿ ಅತ್ಯಂತ ಪ್ರಸಿದ್ಧವಾದದ್ದು ಕೃಷ್ಣರಾಜ ಸಾಗರ (ಏಖಖ) ಅಣೆಕಟ್ಟು. ಮುಖ್ಯ ಇಂಜಿನಿಯರ್ ಸರ್ ಎಂ. ವಿಶ್ವೇಶ್ವರಯ್ಯ ಅವರ ತಾಂತ್ರಿಕ ಮಾರ್ಗದರ್ಶನದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಈ ಜಲಾಶಯವನ್ನು 1911 ರಿಂದ 1931 ರ ಅವಧಿಯಲ್ಲಿ ನಿರ್ಮಿಸಲಾಯಿತು ಮತ್ತು ಇದು 1932 ರಲ್ಲಿ ಕಾರ್ಯಾರಂಭ ಮಾಡಿತು. ಅಂದಿನ ಕಾಲಕ್ಕೆ ಸುಮಾರು 2.5 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾದ ಈ ಅಣೆಕಟ್ಟಿನ ಉದ್ದ 2,621 ಮೀಟರ್ ಹಾಗೂ ಎತ್ತರ 40 ಮೀಟರ್ ಆಗಿದೆ. 49.45 ಟಿ.ಎಂ.ಸಿ ಗರಿಷ್ಠ ಸಾಮರ್ಥ್ಯ ಹೊಂದಿರುವ ಈ ಜಲಾಶಯವು ಅಂದಿನ ಕಾಲಕ್ಕೆ ಏಷ್ಯಾದಲ್ಲೇ ಅತ್ಯಂತ ದೊಡ್ಡದಾಗಿತ್ತು. ಸಿಮೆಂಟ್ ಲಭ್ಯವಿಲ್ಲದ ಕಾರಣ ?ಸುರ್ಕಿ ಗಾರೆ? ಬಳಸಿ ಇದನ್ನು ಕಟ್ಟಲಾಯಿತು ಮತ್ತು ಇದರಲ್ಲಿ ಭದ್ರಾವತಿಯಲ್ಲಿ ತಯಾರಾದ 177 ಕಬ್ಬಿಣದ ತೂಬುಗಳು ಹಾಗೂ 48 ಸ್ವಯಂಚಾಲಿತ ಗೇಟ್‌ಗಳನ್ನು ಅಳವಡಿಸಲಾಗಿತ್ತು.
   ಈ ಯೋಜನೆಯ ನಿರ್ಮಾಣದ ಸಂದರ್ಭದಲ್ಲಿ ಹಣದ ಕೊರತೆ ಎದುರಾದಾಗ, ಮಹಾರಾಜರು ತಮ್ಮ ಅರಮನೆಯ ಚಿನ್ನಾಭರಣಗಳನ್ನು ಅಡವಿಟ್ಟು ಯೋಜನೆ ಮುಂದುವರಿಸಿದ್ದು ಅವರ ಪ್ರಜಾಪ್ರೇಮಕ್ಕೆ ಸಾಕ್ಷಿ.
   ಇದಕ್ಕೂ ಮುನ್ನ, ಕರ್ನಾಟಕದ ಅತ್ಯಂತ ಹಳೆಯ ಮತ್ತು ಇಂದಿಗೂ ಸತತವಾಗಿ ಕಾರ್ಯನಿರ್ವಹಿಸುತ್ತಿರುವ ಮೊದಲ ಆಧುನಿಕ ಅಣೆಕಟ್ಟಾದ ವಾಣಿ ವಿಲಾಸ ಸಾಗರ ಅಣೆಕಟ್ಟನ್ನು (ಮಾರಿ ಕಣಿವೆ) ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ವೇದಾವತಿ ನದಿಗೆ ಅಡ್ಡಲಾಗಿ ನಿರ್ಮಿಸಲಾಯಿತು. ನಾಲ್ವಡಿಯವರ ತಾಯಿ ಮಹಾರಾಣಿ ಕೆಂಪನಂಜಮ್ಮಣ್ಣಿ ಅವರ ಹೆಸರಿನ ಈ ಜಲಾಶಯದ ನಿರ್ಮಾಣ ಕಾರ್ಯ 1898 ರಲ್ಲಿ ಆರಂಭವಾಗಿ, ನಾಲ್ವಡಿಯವರ ಆಡಳಿತದ ಆರಂಭಿಕ ವರ್ಷಗಳಾದ 1907 ರ ಆಗಸ್ಟ್‌ನಲ್ಲಿ ಪೂರ್ಣಗೊಂಡಿತು. 434 ಮೀಟರ್ ಉದ್ದ ಮತ್ತು 43 ಮೀಟರ್ ಎತ್ತರವಿರುವ ಈ ಅಣೆಕಟ್ಟು ಸುಮಾರು 30 ಟಿ.ಎಂ.ಸಿ ಸಾಮರ್ಥ್ಯ ಹೊಂದಿದ್ದು,ಬರ ಪೀಡಿತ ಬಯಲುಸೀಮೆಯ ಲಕ್ಷಾಂತರ ಎಕರೆ ಒಣಭೂಮಿಗೆ ನೀರು ಉಣಿಸಿತು.
   ಇವುಗಳ ಜೊತೆಗೆ, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ ಶಿಂಷಾ ನದಿಗೆ ಅಡ್ಡಲಾಗಿ ಮರಕೋನಹಳ್ಳಿ ಅಣೆಕಟ್ಟನ್ನು ನಿರ್ಮಿಸಲಾಯಿತು. ಸರ್ ಎಂ. ವಿಶ್ವೇಶ್ವರಯ್ಯನವರ ವಿನ್ಯಾಸದಲ್ಲಿ ಮೂಡಿಬಂದ ಈ ಜಲಾಶಯವು 1930 ರಿಂದ 1938 ರ ಅವಧಿಯಲ್ಲಿ ಪೂರ್ಣಗೊಂಡಿತು. ಸುಮಾರು 2.5 ಟಿ.ಎಂ.ಸಿ ಸಾಮರ್ಥ್ಯದ ಈ ಅಣೆಕಟ್ಟಿನಲ್ಲಿ ಏಷ್ಯಾದಲ್ಲೇ ಮೊದಲ ಬಾರಿಗೆ ಪ್ರವಾಹದ ನೀರನ್ನು ಮಾನವ ಹಸ್ತಕ್ಷೇಪವಿಲ್ಲದೆ ತಾನಾಗಿಯೇ ಹೊರಹಾಕುವ ?ಸ್ವಯಂಚಾಲಿತ ಸೈಫನ್ ವ್ಯವಸ್ಥೆ?ಯನ್ನು ಯಶಸ್ವಿಯಾಗಿ ಅಳವಡಿಸಲಾಯಿತು.
6. **ಮೂಲಸೌಕರ್ಯ ಮತ್ತು ಕೈಗಾರಿಕೆ**
   ಮೈಸೂರು ಸ್ಟೇಟ್ ರೈಲ್ವೆ (MSR) ಜಾಲವನ್ನು ವಿಸ್ತರಿಸುವ ಮೂಲಕ ಸಾರಿಗೆಗೆ ವೇಗ ನೀಡಲಾಯಿತು. ಭದ್ರಾವತಿಯ ಮೈಸೂರು ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ (VISL), ಮೈಸೂರು ಪೇಪರ್ ಮಿಲ್ಸ್, ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆ, ಮೈಸೂರು ಲ್ಯಾಂಪ್ಸ್ ಮತ್ತು ಮೈಸೂರು ಕೆಮಿಕಲ್ಸ್‌ನಂತಹ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಿ ಸ್ವಾವಲಂಬನೆಗೆ ಮುನ್ನುಡಿ ಬರೆದರು.
7. **ಸಂಸ್ಕೃತಿ ಮತ್ತು ಪರಂಪರೆ:** ನಾಲ್ವಡಿಯವರು ಸ್ವತಃ ಎಂಟು ವಿವಿಧ ಸಂಗೀತ ವಾದ್ಯಗಳನ್ನು ನುಡಿಸಬಲ್ಲ ಪ್ರತಿಭಾವಂತರಾಗಿದ್ದರು. ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತಗಾರರಿಗೆ, ಚಿತ್ರಕಲಾವಿದರಿಗೆ ಅರಮನೆಯಲ್ಲಿ ಆಶ್ರಯ ನೀಡಿದರು. ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗಾಗಿ 1915 ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು.

ನಾಲ್ವಡಿಯವರ ಜೀವನದ ಕೆಲವು ಅಪರೂಪದ ಸಂಗತಿಗಳು (Unknown Facts)

ರಾಜಕುಮಾರರಾಗಿದ್ದರೂ ನಾಲ್ವಡಿಯವರು ನೇರವಾಗಿ ಅಧಿಕಾರ ವಹಿಸಿಕೊಳ್ಳಲಿಲ್ಲ. ಅದಕ್ಕೂ ಮುನ್ನ ಅವರು ರಾಜ್ಯದ ತಾಲೂಕು ಮತ್ತು ಜಿಲ್ಲಾ ಮಟ್ಟದ ಕಚೇರಿಗಳಲ್ಲಿ ಸಾಮಾನ್ಯ ಅಧಿಕಾರಿಯಂತೆ ಕುಳಿತು ಆಡಳಿತದ ಪ್ರಾಯೋಗಿಕ ತರಬೇತಿ ಪಡೆದಿದ್ದರು. ಅವರು ಕೇವಲ ಕಲೆಗೆ ಆಶ್ರಯ ನೀಡಲಿಲ್ಲ; ಸ್ವತಃ ವೀಣೆ, ಪಿಟೀಲು, ಸ್ಯಾಕ್ಸೋಫೋನ್, ಪಿಯಾನೋ, ಮೃದಂಗ, ಸಿತಾರ್, ಕೊಳಲು ಮತ್ತು ನಾದಸ್ವರ ಸೇರಿದಂತೆ ಎಂಟು ವಿವಿಧ ಸಂಗೀತ ವಾದ್ಯಗಳನ್ನು ಅತ್ಯಂತ ದಕ್ಷತೆಯಿಂದ ನುಡಿಸಬಲ್ಲ ಅಪರೂಪದ ಸಂಗೀತಗಾರರಾಗಿದ್ದರು. ಅಂದಿನ ಕಾಲದ ಇತರ ರಾಜರಂತೆ ಇವರು ಐಷಾರಾಮಿ ಜೀವನದಲ್ಲಿ ಆಸಕ್ತಿ ಹೊಂದಿರಲಿಲ್ಲ. ತಮಗೆ ಸಿಗುತ್ತಿದ್ದ ಬಿಡುವಿನ ವೇಳೆಯನ್ನು ಅವರು ಕೇವಲ ಪುಸ್ತಕ ಓದುವುದಕ್ಕೆ ಮತ್ತು ಜ್ಞಾನಾರ್ಜನೆಗೆ ಮೀಸಲಿಡುತ್ತಿದ್ದರು. ಅಧಿಕಾರಿಗಳ ನಿರ್ಧಾರಗಳಲ್ಲಿ ದೋಷಗಳಿದ್ದರೆ ಅದನ್ನು ಸ್ಪಷ್ಟವಾಗಿ ತಿರಸ್ಕರಿಸುವಷ್ಟು ಆಡಳಿತದ ಜ್ಞಾನ ಅವರಿಗಿತ್ತು.

**ಪ್ರಜಾಸ್ನೇಹಿ ರಾಜ ಮತ್ತು ನಾಯಕತ್ವದ ಗುಣಗಳು:** ನಾಲ್ವಡಿ ಕೃಷ್ಣರಾಜ ಒಡೆಯರ್ ಕೇವಲ ಅಧಿಕಾರ ಚಲಾಯಿಸುವ ರಾಜನಾಗಿರಲಿಲ್ಲ, ಬದಲಿಗೆ ಪ್ರಜೆಗಳ ಸುಖ–ದುಃಖಗಳಲ್ಲಿ ಭಾಗಿಯಾಗುವ ?ಸೇವಕ?ನಾಗಿದ್ದರು. ಅವರು ಜಾರಿಗೆ ತಂದ ಸಾಮಾಜಿಕ ಸುಧಾರಣೆಗಳು ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಗೂ ಮಾದರಿಯಾಗಿವೆ.

**ಸಾಮಾಜಿಕ ನ್ಯಾಯ:** ಹಿಂದುಳಿದ ವರ್ಗಗಳಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಲು 1918 ರಲ್ಲಿ ಸರ್ ಲೆಸ್ಲಿ ಮಿಲ್ಲರ್ ಸಮಿತಿಯನ್ನು ನೇಮಿಸಿ, ಅದರ ಶಿಫಾರಸುಗಳನ್ನು ಜಾರಿಗೆ ತಂದರು. ಇದು ಇಡೀ ಭಾರತದಲ್ಲೇ ಐತಿಹಾಸಿಕ ಮತ್ತು ಮೊದಲ ಹೆಜ್ಜೆಯಾಗಿತ್ತು.

ಮಹಿಳಾ ಸಬಲೀಕರಣ: ದೇವದಾಸಿ ಪದ್ಧತಿಯ ನಿರ್ಮೂಲನೆ, ಬಾಲ್ಯವಿವಾಹ ನಿಷೇಧ ಮತ್ತು 1923 ರಲ್ಲೇ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿದ ಹೆಗ್ಗಳಿಕೆ ಮೈಸೂರು ಸಂಸ್ಥಾನದ್ದಾಗಿದೆ.


**ಪ್ರಜಾಪ್ರತಿನಿಧಿ ಸಭೆ:** ಶಾಸನ ರಚನೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ ಇರಬೇಕೆಂದು ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ ಅನ್ನು ಬಲಪಡಿಸಿದರು.

**ಮಹಾನ್ ಆಡಳಿತಗಾರರೊಂದಿಗೆ ಸಮನ್ವಯ:** 'ಬ್ರ್ಯಾಂಡ್ ಮೈಸೂರು' ಉದಯ

ನಾಲ್ವಡಿಯವರ ನಾಯಕತ್ವದ ದೊಡ್ಡ ಗುಣವೆಂದರೆ ಅರ್ಹ ವ್ಯಕ್ತಿಗಳನ್ನು ಗುರುತಿಸಿ, ಅವರಿಗೆ ಕೆಲಸ ಮಾಡುವ ಪೂರ್ಣ ಸ್ವಾತಂತ್ರ್ಯ ನೀಡುತ್ತಿದ್ದುದು. ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯ ಮತ್ತು ಸರ್ ಮಿರ್ಜಾ ಇಸ್ಮಾಯಿಲ್ ಅವರಂತಹ ದಕ್ಷ ದಿವಾನರನ್ನು ನೇಮಿಸಿಕೊಂಡ ಮಹಾರಾಜರು, ಅವರ ತಾಂತ್ರಿಕ ಮತ್ತು ಆಡಳಿತಾತ್ಮಕ ದಕ್ಷತೆಗೆ ಸಂಪೂರ್ಣ ಬೆಂಬಲ ನೀಡಿದರು.

"ಕೈಗಾರಿಕೀಕರಣ ಇಲ್ಲವೇ ವಿನಾಶ" ಎಂಬ ವಿಶ್ವೇಶ್ವರಯ್ಯನವರ ತತ್ವಕ್ಕೆ ರಾಜರ ಬೆಂಬಲವಿತ್ತು. ಸರ್ ಮಿರ್ಜಾ ಇಸ್ಮಾಯಿಲ್ ಅವರ ಸೌಂದರ್ಯ ಪ್ರಜ್ಞೆ ಮತ್ತು ನಗರಾಭಿವೃದ್ಧಿ ಯೋಜನೆಗಳು ಮೈಸೂರನ್ನು ಉದ್ಯಾನ ನಗರಿಯನ್ನಾಗಿ ಮಾಡಿದವು. ರಾಜ ಮತ್ತು ದಿವಾನರ ಈ ಜುಗಲಬಂದಿ ಜಗತ್ತಿನಲ್ಲೇ ಅತ್ಯುತ್ತಮ ಗುಣಮಟ್ಟದ ಉತ್ಪನ್ನಗಳನ್ನು ಸೃಷ್ಟಿಸಿತು. ಮೈಸೂರು ಗಂಧದ ಸಾಬೂನು (Mysore Sandal Soap) ಮತ್ತು ಮೈಸೂರು ರೇಷ್ಮೆ (Mysore Silk) ಜಾಗತಿಕ ಮಾರುಕಟ್ಟೆಯಲ್ಲಿ ವಿಶಿಷ್ಟ ಸ್ಥಾನ ಪಡೆದವು.

ಇದರೊಂದಿಗೆ, ನಾಲ್ವಡಿಯವರು ಮೈಸೂರು ದಸರಾ



ಮಹೋತ್ಸವವನ್ನು ಕೇವಲ ಅರಮನೆಯ ಧಾರ್ಮಿಕ ಆಚರಣೆಯಾಗಿ ಉಳಿಸದೆ, ಅದಕ್ಕೆ ಜಾಗತಿಕ ಪ್ರವಾಸೋದ್ಯಮದ ಸ್ವರೂಪ ನೀಡಿದರು. ದಸರಾ ವೈಭವವನ್ನು ಆರಂಭಿಸುವ ಮೂಲಕ ಜಗತ್ತಿನಾದ್ಯಂತ ಪ್ರವಾಸಿಗನ್ನು ಆಕರ್ಷಿಸಿದರು. ದೇಶದ ಶ್ರೇಷ್ಠ ಕಲಾಪ್ರತಿಭೆಗಳಿಗೆ ದಸರಾ ದರ್ಬಾರ್ ಅನ್ನು ವೇದಿಕೆಯಾಗಿಸಿದರು. ಈ ಮೂಲಕ ಕೈಗಾರಿಕಾ ಉತ್ಪನ್ನಗಳು, ನಗರಾಭಿವೃದ್ಧಿ ಮತ್ತು ದಸರಾದ ಸಾಂಸ್ಕೃತಿಕ ಗರಿಮೆಯನ್ನು ಒಟ್ಟುಗೂಡಿಸಿ, ಅಂದೇ ಜಾಗತಿಕ ಮಟ್ಟದಲ್ಲಿ ?ಬ್ರ್ಯಾಂಡ್ ಮೈಸೂರು? (Brand Mysore) ಎಂಬ ಅದ್ವಿತೀಯ ಘನತೆಯನ್ನು ಅವರು ಯಶಸ್ವಿಯಾಗಿ ಸೃಷ್ಟಿಸಿದರು.

**ಜಾಗತಿಕ ಮನ್ನಣೆ ಮತ್ತು ಪ್ರಶಸ್ತಿಗಳು:** ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸುಶಾಸನ ಕೇವಲ ಭಾರತದ ಗಮನ ಸೆಳೆಯಲಿಲ್ಲ, ಬದಲಿಗೆ ಜಗತ್ತಿನಾದ್ಯಂತ ಶ್ಲಾಘನೆಗೆ ಒಳಗಾಯಿತು.


ಮಹಾತ್ಮ ಗಾಂಧೀಜಿಯವರು ನಾಲ್ವಡಿಯವರ ಧರ್ಮನಿಷ್ಠೆ ಮತ್ತು ಪ್ರಜಾಪಾಲನೆಯನ್ನು ಕಂಡು ಅವರನ್ನು ?ರಾಜರ್ಷಿ? (ಸಂತ ರಾಜ) ಎಂದು ಕರೆದು ಗೌರವಿಸಿದರು ಮತ್ತು ಮೈಸೂರು ಸಂಸ್ಥಾನವನ್ನು 'ರಾಮರಾಜ್ಯ'ಕ್ಕೆ ಹೋಲಿಸಿದರು.

ಲಂಡನ್‌ನಲ್ಲಿ ನಡೆದ ಮೊದಲ ದುಂಡುಮೇಜಿನ ಪರಿಷತ್ತಿನಲ್ಲಿ ಬ್ರಿಟಿಷ್ ಮುಖಂಡ ಜಾನ್ ಶಾಂಕಿ, "ಮೈಸೂರು ಜಗತ್ತಿನಲ್ಲೇ ಅತ್ಯುತ್ತಮವಾಗಿ ಆಡಳಿತ ನಡೆಸಲ್ಪಡುತ್ತಿರುವ ರಾಜ್ಯ" ಎಂದು ಮುಕ್ತಕಂಠದಿಂದ ಶ್ಲಾಘಿಸಿದರು.

ಬ್ರಿಟಿಷ್ ಸರ್ಕಾರವು ಅವರಿಗೆ ?ನೈಟ್ ಗ್ರಾಂಡ್ ಕಮಾಂಡರ್? (GCSI) ಮತ್ತು ?ನೈಟ್ ಗ್ರಾಂಡ್ ಕ್ರಾಸ್ ಆಫ್ ದಿ ಆರ್ಡರ್ ಆಫ್ ದಿ ಬ್ರಿಟಿಷ್ ಎಂಪೈರ್? (GBE) ಮುಂತಾದ ಅತ್ಯುನ್ನತ ಬಿರುದುಗಳನ್ನು ನೀಡಿ ಗೌರವಿಸಿತು. ಬನಾರಸ್ ಹಿಂದೂ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ಪದವಿಯನ್ನು ನೀಡಿದ್ದಲ್ಲದೆ, ಅವರು ಆ ವಿಶ್ವವಿದ್ಯಾಲಯದ ಮೊದಲ ಚಾನ್ಸಲರ್ ಆಗಿಯೂ ಸೇವೆ ಸಲ್ಲಿಸಿದರು.

1940 ರ ಆಗಸ್ಟ್ 3 ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ದೈವಾಧೀನರಾದಾಗ, ಇಡೀ ರಾಜ್ಯವೇ ಕಣ್ಣೀರಲ್ಲಿ ಮುಳುಗಿತು. ಅವರು ಬದುಕಿದ್ದು 56 ವರ್ಷಗಳಷ್ಟೇ ಆದರೂ, ಅವರು ಬಿಟ್ಟುಹೋದ ಪರಂಪರೆ, ವಿದ್ಯುತ್ ಕ್ರಾಂತಿ, ಎಚ್.ಎ.ಎಲ್‌ನಂತಹ ಬೃಹತ್ ಸಂಸ್ಥೆಗಳು ಮತ್ತು ಜಲಾಶಯಗಳು ಇಂದಿಗೂ ಕರ್ನಾಟಕದ ಆರ್ಥಿಕ ಹಾಗೂ ಸಾಮಾಜಿಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿವೆ.

ಕೇವಲ ಅರಮನೆಗಳ ಭೋಗಜೀವನಕ್ಕೆ ಮಿತಿಯಾಗದೆ, ಅಧಿಕಾರವನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಯ ಏಳಿಗೆಗಾಗಿ ಬಳಸಿದ ನಾಲ್ವಡಿ ಕೃಷ್ಣರಾಜ ಒಡೆಯರ್, ಇಂದಿನ ರಾಜಕಾರಣಿಗಳಿಗೆ ಮತ್ತು ಆಡಳಿತಗಾರರಿಗೆ ಪ್ರಾಮಾಣಿಕತೆ ಹಾಗೂ ದೂರದೃಷ್ಟಿಯ ಅತ್ಯುತ್ತಮ ಪಾಠವಾಗಿದ್ದಾರೆ. ಇಂದಿನ ಸಮೃದ್ಧ, ಪ್ರಗತಿಪರ ಕರ್ನಾಟಕದ ಅಸ್ತಿತ್ವಕ್ಕೆ ಅಂದೇ ಕಲ್ಪನೆ ಮತ್ತು ಕಾಯಕ ನೀಡಿದ ಈ ಮಹಾಚೇತನಕ್ಕೆ ಕನ್ನಡಿಗರು ಸದಾ ಕೃತಜ್ಞರಾಗಿರುತ್ತಾರೆ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

# "ಬ್ರಹ್ಮಾಂಡದ ಅತಿಥಿಗಳು: ಏಲಿಯನ್‌ಗಳು ಬಂದರೆ ಭೂಮಿಗೆ ವರವೇ ಶಾಪವೇ



| ರೂಪ ಮಂಜುನಾಥ ಹೊಳೆನರಸೀಪುರ

ಭೂಮಿಗೆ ಏಲಿಯನ್‌ಗಳು ಬರಲಿವೆ ಅನ್ನೋ ಸುದ್ದಿ ಯಾವುದೋ ವಿಡಿಯೋಲಿ ವೈರಲ್ ಆಗ್ತಿರೋದು ನೋಡಿ ಕುತೂಹಲ ಮತ್ತು ಆಶ್ಚರ್ಯ ಎರಡೂ ಒಟ್ಟೊಟ್ಟಿಗೆ ಆಯ್ತು. ಬ್ರಹ್ಮಾಂಡದ ವಿಸ್ಮಯಗಳ ಬಗ್ಗೆ ಯೋಚಿಸುವಾಗ ಇಂತಹ ಪ್ರಶ್ನೆಗಳು ಯಾರಿಗಾದರೂ ಮೂಡುವುದು ತುಂಬಾ ಸ್ವಾಭಾವಿಕ ಅಲ್ವಾ ಇದೇ ಭ್ರಮೆಯ ಸುತ್ತ ಸುತ್ತುತ್ತಿರುವಾಗ ಅರಿಝೋನಾದ ವಿಶ್ವವಿದ್ಯಾಲಯದ ನಿವೃತ್ತ ಭೌತಶಾಸ್ತ್ರ ಪ್ರೊ.ಪ್ರಹ್ಲಾದ ರಾವ್ ಅವರ ಪರಿಚಯವಾದದ್ದು ನನ್ನ ಅದೃಷ್ಟವೇ.ಜ್ಞಾನವೃದ್ಧರಾದ ಅವರ ಜೊತೆ ಮಾತಲ್ಲಿ ತೊಡಗಿದಾಗ ನನಗಿದ್ದ ಪ್ರಶ್ನೆಗಳಿಗೆ ಉತ್ತರ ತಿಳಿಯುವ ಪ್ರಯತ್ನ ಮಾಡಿದೆ. ಅವರ ಮಾತುಗಳು ಬಹಳ ಆಸಕ್ತಿಕರವಾಗಿದ್ದವು.ನಿಮಗೂ ತಿಳಿಸೋಣ ಎನ್ನುವ ಇರಾದೆಯಿಂದ ಈ ಲೇಖನ ನಿಮಗಾಗಿ ಪ್ರಸ್ತುತ ಪಡಿಸುತ್ತಿದ್ದೇನೆ.

**ಭೂಮಿಗೆ ಏಲಿಯನ್‌ಗಳು ಸದ್ಯದಲ್ಲೇ ಬರುವವೇ ಅದು ನಿಜವೇ ಸರ್**

ಇಲ್ಲ ರೂಪ, ಇದು ನಿಜವಲ್ಲ. ಸೋಶಿಯಲ್ ಮೀಡಿಯಾಗಳಲ್ಲಿ (ಯೂಟ್ಯೂಬ್, ಇನ್‌ಸ್ಟಾಗ್ರಾಮ್ ಇತ್ಯಾದಿ) ಜನರನ್ನು ಆಕರ್ಷಿಸಲು ಮತ್ತು ವೀಕ್ಷಣೆಗಳನ್ನು (views) ಹೆಚ್ಚಿಸಿಕೊಳ್ಳಲು ಇಂತಹ ರೋಮಾಂಚನಕಾರಿ ಹೆಡ್‌ಲೈನ್‌ಗಳನ್ನು ಬಳಸುತ್ತಾರೆ. ಇಂದಿನವರೆಗೂ ಯಾವುದೇ ಏಲಿಯನ್ ಭೂಮಿಗೆ ಬಂದಿರುವುದಕ್ಕೆ ಅಥವಾ ಸದ್ಯದಲ್ಲೇ ಬರಲಿದೆ ಎನ್ನುವುದಕ್ಕೆ ವಿಜ್ಞಾನಿಗಳಿಗೆ ಯಾವುದೇ ಅಧಿಕೃತ ಸಾಕ್ಷ್ಯ ಸಿಕ್ಕಿಲ್ಲ. ನಾಸಾ (NASA) ನಂತಹ ಜಗತ್ತಿನ ದೊಡ್ಡ ಬಾಹ್ಯಾಕಾಶ ಸಂಸ್ಥೆಗಳೂ ಇದನ್ನು ದೃಢೀಕರಿಸಿಲ್ಲ. ಆದ್ದರಿಂದ ಇಂತಹ ವಿಡಿಯೋಗಳನ್ನು ನೋಡಿ ಆತಂಕ ಪಡುವ ಅಗತ್ಯವಿಲ್ಲ .ಎಂದಾಗ ಈ ವಿಡಿಯೋಗಳು ಮಾಡುವ ಬೋಗಸ್ ಸುದ್ದಿಗಳ ಬಗ್ಗೆ ಕ್ಲಾರಿಟಿ ಸಿಕ್ಕಿತಾದರೂ,

**ಈ ಏಲಿಯನ್ ಗಳು ಎಂದರೆ ಯಾರು ಅವುಗಳು ಎಲ್ಲಿರುತ್ತವೆ ಸರ್**

ನಮ್ಮ ಭೂಮಿಯನ್ನು ಬಿಟ್ಟು, ಈ ಬ್ರಹ್ಮಾಂಡದ ಬೇರೆ ಯಾವುದೇ ಗ್ರಹ ಅಥವಾ ನಕ್ಷತ್ರ ಮಂಡಲದಲ್ಲಿ ಬದುಕುವ ಯಾವುದೇ ಜೀವಿಯನ್ನು ವಿಜ್ಞಾನಿಗಳು 'ಏಲಿಯನ್' (Alien - ಪರಗ್ರಹ ಜೀವಿ) ಎಂದು ಕರೆಯುತ್ತಾರೆ. ಸಿನಿಮಾಗಳಲ್ಲಿ ತೋರಿಸುವಂತೆ ಅವರು ದೊಡ್ಡ ತಲೆ, ವಿಚಿತ್ರ ಕಣ್ಣುಗಳಿರುವ ಮನುಷ್ಯರಂತೆಯೇ ಇರಬೇಕಾಗಿಲ್ಲ. ವಿಜ್ಞಾನದ ಪ್ರಕಾರ, ಬೇರೆ ಗ್ರಹದಲ್ಲಿರುವ ಒಂದು ಸಣ್ಣ ಕಣ್ಣಿಗೆ ಕಾಣದ ಬ್ಯಾಕ್ಟೀರಿಯಾ ಅಥವಾ ಸೂಕ್ಷ್ಮ ಜೀವಿ (microbe) ಸಿಕ್ಕಿದರೂ ಅದನ್ನೂ 'ಏಲಿಯನ್ ಜೀವ' ಎಂದೇ ಪರಿಗಣಿಸಲಾಗುತ್ತದೆ. ಇವರು ಎಲ್ಲಿರುತ್ತಾರೆ ಎನ್ನುವುದಕ್ಕೆ ಇನ್ನೂ ನಿಖರ ಉತ್ತರವಿಲ್ಲ. ಆದರೆ ನಮ್ಮ ಸೌರಮಂಡಲದ ಹೊರಗಿರುವ, ಭೂಮಿಯಂತೆಯೇ ವಾತಾವರಣವಿರಬಹುದಾದ ಕೋಟ್ಯಂತರ ಗ್ರಹಗಳಲ್ಲಿ ಇವರು ಇರಬಹುದು ಎಂದು ವಿಜ್ಞಾನಿಗಳು ಊಹಿಸುತ್ತಾರೆ. ಎನ್ನುವುದು ಸ್ಪಷ್ಟವಾಯಿತು.

**ಬ್ರಹ್ಮಾಂಡದಲ್ಲಿ ಏಲಿಯನ್‌ಗಳು ಇರುವುದು ಸತ್ಯವೇ ಸರ್**

ಇಂದಿನವರೆಗೆ ವಿಜ್ಞಾನಿಗಳಿಗೆ ಬೇರೆ ಗ್ರಹದಲ್ಲಿ ಜೀವ ಇದೆ ಎನ್ನುವುದಕ್ಕೆ ನೇರವಾದ ಯಾವುದೇ ಪುರಾವೆ ಅಥವಾ ಸತ್ಯಾಂಶ ಸಿಕ್ಕಿಲ್ಲ. ಅಂದರೆ, ನಮಗೆ ಇದುವರೆಗೆ ಯಾವುದೇ ಏಲಿಯನ್ ಜೀವಿ ಕಣ್ಣಿಗೆ ಬಿದ್ದಿಲ್ಲ. ಆದರೆ, ವಿಜ್ಞಾನಿಗಳು "ಅವು ಇರಲೇ ಇಲ್ಲ" ಎಂದು ಸಂಪೂರ್ಣವಾಗಿ ನಿರಾಕರಿಸುವುದಿಲ್ಲ. ಏಕೆಂದರೆ ಈ ಬ್ರಹ್ಮಾಂಡ ಎಷ್ಟು ವಿಶಾಲವಾಗಿದೆ ಎಂದರೆ, ಅದರಲ್ಲಿ ಕೋಟ್ಯಂತರ ಗ್ಯಾಲಕ್ಸಿಗಳು ಮತ್ತು ನಕ್ಷತ್ರಗಳಿವೆ. ಅಷ್ಟು ದೊಡ್ಡ ಜಾಗದಲ್ಲಿ ನಮ್ಮ ಭೂಮಿಯಲ್ಲಷ್ಟೇ ಜೀವ ಸೃಷ್ಟಿಯಾಗಿದೆ ಎಂದು ಖಂಡಿತವಾಗಿ ಹೇಳಲು ಬರುವುದಿಲ್ಲ. ವಿಜ್ಞಾನಿಗಳ ಪ್ರಕಾರ ಇದು ಇನ್ನೂ ಪತ್ತೆಯಾಗದ ಒಂದು ರಹಸ್ಯ.

**ಸರ್ ಭೂಮಿಯಲ್ಲಿರುವಂತೆ ಬೇರೆ ಗ್ರಹಗಳಲ್ಲೂ ಜೀವಸೃಷ್ಟಿ ಇದೆಯೇ**

ವಿಜ್ಞಾನಿಗಳು ನಮ್ಮ ಸೌರಮಂಡಲದ ಕೆಲವು ಗ್ರಹಗಳು ಮತ್ತು ಉಪಗ್ರಹಗಳ ಮೇಲೆ ಸಂಶೋಧನೆ ನಡೆಸುತ್ತಿದ್ದಾರೆ.

ಮಂಗಳ ಗ್ರಹ (Mars): ಇಲ್ಲಿ ಹಿಂದೆ ಎಂದೋ ಒಂದು ಕಾಲದಲ್ಲಿ ನೀರು ಹರಿಯುತ್ತಿತ್ತು ಎಂಬ ಸಾಕ್ಷ್ಯ ಸಿಕ್ಕಿದೆ. ಹಾಗಾಗಿ ಅಲ್ಲಿ ಸೂಕ್ಷ್ಮ ಜೀವಿಗಳು ಇರಬಹುದು ಅಥವಾ ಹಿಂದೆ ಇದ್ದಿರಬಹುದು ಎಂದು ಸಂಶೋಧನೆ ನಡೆಯುತ್ತಿದೆ.

**ಶನಿ ಮತ್ತು ಗುರು ಗ್ರಹದ ಚಂದ್ರರು:** ಶನಿ ಗ್ರಹದ ಉಪಗ್ರಹವಾದ 'ಎನ್ಸೆಲಾಡಸ್' (Enceladus) ಮತ್ತು ಗುರು ಗ್ರಹದ ಉಪಗ್ರಹವಾದ 'ಯೂರೋಪಾ' (Europa) ಗಳ ಮಂಜುಗಡ್ಡೆಯ ಪದರದ ಅಡಿಯಲ್ಲಿ ವಿಶಾಲವಾದ ಸಾಗರಗಳಿವೆ ಎಂದು ಪತ್ತೆಯಾಗಿದೆ. ಅಲ್ಲಿ ಜೀವಸೃಷ್ಟಿಗೆ ಪೂರಕವಾದ ವಾತಾವರಣವಿರಬಹುದು ಎಂದು ವಿಜ್ಞಾನಿಗಳು ನಂಬಿದ್ದಾರೆ.

ಸದ್ಯಕ್ಕೆ ಏಲಿಯನ್‌ಗಳು ಭೂಮಿಗೆ ಬರುತ್ತಿರುವುದು ಕೇವಲ ಕಲ್ಪನೆ ಮತ್ತು ಸಿನಿಮಾಗಳ ಕತೆ ಅಷ್ಟೇ ರೂಪ. ಆದರೆ ವಿಜ್ಞಾನಿಗಳು ಮಾತ್ರ ಬ್ರಹ್ಮಾಂಡದ ಯಾವುದಾದರೂ ಒಂದು ಮೂಲೆಯಲ್ಲಿ ಜೀವದ ಕಣ



ಸಿಗಬಹುದೇ ಎಂದು 'ಟೆಲಿಸ್ಕೋಪ್'ಗಳ ಮೂಲಕ ರಾತ್ರಿ–ಹಗಲು ಆಕಾಶವನ್ನು ವೀಕ್ಷಿಸುತ್ತಲೇ ಇದ್ದಾರೆ. ಭವಿಷ್ಯದಲ್ಲಿ ಏನಾದರೂ ಸಿಕ್ಕರೆ ಅದು ಮನುಕುಲದ ಅತಿ ದೊಡ್ಡ ಆವಿಷ್ಕಾರವಾಗಲಿದೆ!

ಸರ್, ಅಕಸ್ಮಾತ್ ಏಲಿಯನ್ ಗಳು ಭೂಮಿಗೆ ಬಂದ್ರೆ ಏನೇನಾಗಬಹುದು ಕುತೂಹಲಕ್ಕೆ ಕೇಳಿದ ಪ್ರಶ್ನೆ

ಒಂದು ವೇಳೆ ಆ ಜೀವಿಗಳು ಶಾಂತಪ್ರಿಯವಾಗಿದ್ದು, ನಮಗೆ ಸಹಾಯ ಮಾಡುವ ಮನೋಭಾವ ಹೊಂದಿದ್ದರೆ, ಮನುಷ್ಯನ ಇಡೀ ಭವಿಷ್ಯವೇ ಬದಲಾಗಿಹೋಗುತ್ತದೆ:

ಅದ್ಭುತ ತಂತ್ರಜ್ಞಾನ ಮತ್ತು ಶಕ್ತಿಯ ಮೂಲ: ಬ್ರಹ್ಮಾಂಡದ ಅಷ್ಟೋ ದೂರದಿಂದ ಭೂಮಿಗೆ ಬರಬೇಕೆಂದರೆ ಅವರ ತಂತ್ರಜ್ಞಾನ ನಮ್ಮಗಿಂತ ಕೋಟ್ಯಂತರ ಪಟ್ಟು ಮುಂದಿರಬೇಕು. ಅವರು ಬಳಸುವ ಇಂಧನ ಅಥವಾ ಶಕ್ತಿಯ ಮೂಲಗಳನ್ನು (Energy sources) ನಮಗೆ ಕಲಿಸಿಕೊಟ್ಟರೆ, ನಮ್ಮ ಭೂಮಿಯಲ್ಲಿರುವ ಮಾಲಿನ್ಯ, ಜಾಗತಿಕ ತಾಪಮಾನ (Global Warming) ಮತ್ತು ಇಂಧನದ ಕೊರತೆ ಒಂದೇ ದಿನದಲ್ಲಿ ಮುಕ್ತಾಯವಾಗಬಹುದು.

ದೊಡ್ಡ ದೊಡ್ಡ ಕಾಯಿಲೆಗಳಿಗೆ ಮುಕ್ತಿ: ಮನುಷ್ಯರನ್ನು ಕಾಡುತ್ತಿರುವ ಕ್ಯಾನ್ಸರ್, ಏಡ್ಸ್ ಅಥವಾ ವಯಸ್ಸಾಗುವ ಪ್ರಕ್ರಿಯೆಗೆ ಅವರಲ್ಲಿ ಸುಲಭವಾದ ಚಿಕಿತ್ಸೆ ಇರಬಹುದು. ಅವರ ವೈದ್ಯಕೀಯ ಜ್ಞಾನದಿಂದ ಮನುಷ್ಯರ ಆಯಸ್ಸು ನೂರಾರು ವರ್ಷಗಳು ಹೆಚ್ಚಾಗಬಹುದು.

ಬ್ರಹ್ಮಾಂಡದ ರಹಸ್ಯಗಳ ಅನಾವರಣ: "ಬ್ರಹ್ಮಾಂಡ ಹೇಗೆ ಸೃಷ್ಟಿಯಾಯಿತು ಕಪ್ಪು ಕುಳಿಗಳು (Black Holes) ಹೇಗೆ ಕೆಲಸ ಮಾಡುತ್ತವೆ " ಎಂಬ ನಮ್ಮ ವಿಜ್ಞಾನಿಗಳ ಶತಮಾನಗಳ ಪ್ರಶ್ನೆಗಳಿಗೆ ಅವರು ಸುಲಭವಾಗಿ ಉತ್ತರ ನೀಡಬಲ್ಲರು. ನಾವು ಕೂಡ ಅವರ ಸಹಾಯದಿಂದ ಬೇರೆ ಗ್ರಹಗಳಿಗೆ ಸುಲಭವಾಗಿ ಪ್ರವಾಸ ಮಾಡಲು ಸಾಧ್ಯವಾಗಬಹುದು.

ಇಡೀ ಜಗತ್ತಿನ ಮನುಷ್ಯರೆಲ್ಲರೂ ಜಾತಿ, ಧರ್ಮ, ದೇಶ ಎಂಬ ಭೇದಭಾವ ಮರೆತು, "ನಾವೆಲ್ಲರೂ ಭೂಮಿಯ ನಿವಾಸಿಗಳು" ಎಂದು ಒಂದಾಗಲು ಈ ಘಟನೆ ಕಾರಣವಾಗುತ್ತದೆ.

ಅವುಗಳಿಂದ ಮನುಕುಲಕ್ಕೆ ಆಗಬಹುದಾದ ತೊಂದರೆಗಳು (Risks) ಇಲ್ಲದಿಲ್ಲ.

ಪ್ರಖ್ಯಾತ ವಿಜ್ಞಾನಿ ಸ್ಟೀಫನ್ ಹಾಕಿಂಗ್ (Stephen Hawking) ಅವರು ಒಂದು ಮಾತು ಹೇಳಿದ್ದರು: "ಹಿಂದೆ ಕೊಲಂಬಸ್ ಎಂಬ ಪ್ರವಾಸಿ ಅಮೆರಿಕಾವನ್ನು ಹುಡುಕಿಕೊಂಡು ಹೋದಾಗ ಅಲ್ಲಿನ ಮೂಲ ನಿವಾಸಿಗಳಿಗೆ ಒಳ್ಳೆಯದಾಗಲಿಲ್ಲ. ಅದೇ ರೀತಿ ಏಲಿಯನ್‌ಗಳು ಭೂಮಿಗೆ ಬಂದರೆ ನಮಗೂ ತೊಂದರೆಯಾಗಬಹುದು." ಒಂದು ವೇಳೆ ಅವುಗಳು ಕ್ರೂರವಾಗಿದ್ದರೆ ಈ ಕೆಳಗಿನ ಅಪಾಯಗಳಿವೆ:

ಹೊಸ ರೋಗಾಣುಗಳ ಭೀತಿ ಎದುರಾಗಬಹುದು. ಏಲಿಯನ್‌ಗಳ ದೇಹದಲ್ಲಿ ನಮಗೆ ಪರಿಚಯವೇ ಇಲ್ಲದ ವಿಚಿತ್ರ ಬ್ಯಾಕ್ಟೀರಿಯಾ ಅಥವಾ ವೈರಸ್‌ಗಳು ಇರಬಹುದು. ಅವುಗಳು ಭೂಮಿಯ ವಾತಾವರಣಕ್ಕೆ ಸೇರಿದರೆ, ನಮ್ಮಲ್ಲಿ ಯಾರಿಗೂ ಅದರ ವಿರುದ್ಧ ಹೋರಾಡುವ ರೋಗನಿರೋಧಕ ಶಕ್ತಿ (Immunity) ಇರುವುದಿಲ್ಲ. ಇದು ಇಡೀ ಮಾನವ ಕುಲವನ್ನೇ ನಾಶ ಮಾಡುವಂತಹ ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗಬಹುದು.

ಸಂಪನ್ಮೂಲಗಳಿಗಾಗಿ ಆಕ್ರಮಣ ಕೂಡಾ ಆಗಬಹುದು. ಅವರ ಗ್ರಹದಲ್ಲಿ ನೀರು, ಆಮ್ಲಜನಕ ಅಥವಾ ಖನಿಜಗಳ ಕೊರತೆಯಾಗಿ, ಅವರು ನಮ್ಮ ಭೂಮಿಯನ್ನು ವಶಪಡಿಸಿಕೊಳ್ಳಲು ಬರಬಹುದು. ನಮ್ಮಗಿಂತ ಶಕ್ತಿಶಾಲಿ ಆಯುಧಗಳು ಅವರ ಬಳಿ ಇರುವುದರಿಂದ, ಅವರು ನಮ್ಮನ್ನು ಗುಲಾಮರನ್ನಾಗಿ ಮಾಡಿಕೊಳ್ಳಬಹುದು ಅಥವಾ ಭೂಮಿಯನ್ನು ಆಕ್ರಮಿಸಬಹುದು.

ಮಾನವನ ಇತಿಹಾಸ, ಧಾರ್ಮಿಕ ನಂಬಿಕೆಗಳು ಮತ್ತು ನಾವು ಇದುವರೆಗೆ ಸಾಧಿಸಿದ ಜ್ಞಾನ ಎಲ್ಲವೂ ಅವರ ಬೃಹತ್ ಶಕ್ತಿಯ ಮುಂದೆ ಶೂನ್ಯವಾಗಿ ಕಾಣಿಸಬಹುದು. ಇದು ಜಾಗತಿಕವಾಗಿ ಮನುಷ್ಯರಲ್ಲಿ ದೊಡ್ಡ ಗೊಂದಲ ಮತ್ತು ನಿರಾಶಾವಾದವನ್ನು ಸೃಷ್ಟಿಸಬಹುದು.

ಹಾಗಾಗಿ, ಏಲಿಯನ್‌ಗಳು ಬಂದರೆ ಅದು ಮನುಕುಲಕ್ಕೆ "ವರದಾನವೂ ಆಗಬಹುದು ಅಥವಾ ಶಾಪವೂ ಆಗಬಹುದು." ಆದರೆ ಸದ್ಯದ ಪರಿಸ್ಥಿತಿಯಲ್ಲಿ ವಿಜ್ಞಾನಿಗಳು ಹೇಳುವುದೇನೆಂದರೆ, ಇಷ್ಟು ವಿಶಾಲವಾದ ಬ್ರಹ್ಮಾಂಡದಲ್ಲಿ ಯಾವುದೋ ಒಂದು ಜೀವಿ ಭೂಮಿಯನ್ನು ಹುಡುಕಿಕೊಂಡು ಬರುವುದು ಅಷ್ಟು ಸುಲಭದ ಮಾತಲ್ಲ. ಹಾಗಾಗಿ ನಾವು ಆತಂಕ ಪಡದೆ, ನಮ್ಮ ಭೂಮಿಯನ್ನು ನಾವು ಹೇಗೆ ಕಾಪಾಡಿಕೊಳ್ಳಬೇಕು ಎಂದು ಯೋಚಿಸುವುದೇ ಇಂದಿನ ಅಗತ್ಯ.

ಪ್ರೊಫೆಸರ್ ತಿಳಿಸಿದ ಹೊಸ ಆಸಕ್ತಿದಾಯಕ ವಿಷಯಗಳು

ಫರ್ಮಿ ಪ್ಯಾರಡಾಕ್ಸ್ (Fermi Paradox) ವಿಜ್ಞಾನದ ದೊಡ್ಡ ಒಗಟು

ವಿಜ್ಞಾನದಲ್ಲಿ ಒಂದು ಪ್ರಸಿದ್ಧವಾದ ಪ್ರಶ್ನೆಯಿದೆ. ಈ ಬ್ರಹ್ಮಾಂಡದಲ್ಲಿ ಕೋಟ್ಯಂತರ ಗ್ರಹಗಳಿದ್ದರೆ, ಭೂಮಿಗಿಂತ ಹಳೆಯದಾದ ಗ್ರಹಗಳೂ ಇರಬೇಕಲ್ವಾ ಹಾಗಿದ್ದಲ್ಲಿ, ನಮ್ಮಗಿಂತ ಬುದ್ಧಿವಂತ ಜೀವಿಗಳು ಇಷ್ಟೊತ್ತಿಗಾಗಲೇ ನಮ್ಮನ್ನು ಸಂಪರ್ಕಿಸಬೇಕಿತ್ತಲ್ಲ "ಹಾಗಾದರೆ, ಎಲ್ಲರೂ ಎಲ್ಲಿದ್ದಾರೆ " ಎಂಬ ಈ ಪ್ರಶ್ನೆಯನ್ನು ಭೌತವಿಜ್ಞಾನಿ ಎನ್ರಿಕೊ ಫರ್ಮಿ ಕೇಳಿದ್ದರು.

ಗೋಲ್ಡಿಲಾಕ್ಸ್ ವಲಯ (Goldilocks Zone)

ವಿಜ್ಞಾನಿಗಳು ಬೇರೆ ಗ್ರಹಗಳಲ್ಲಿ ಜೀವವನ್ನು ಹುಡುಕುವಾಗ ಮೊದಲು ನೋಡುವುದು ಅದು ತನ್ನ ನಕ್ಷತ್ರದಿಂದ (ಸೂರ್ಯನಿಂದ) ಎಷ್ಟು ದೂರದಲ್ಲಿದೆ ಎಂದು. ತುಂಬಾ ಹತ್ತಿರವಿದ್ದರೆ ಅತಿಯಾದ ಶಾಖ, ತುಂಬಾ ದೂರವಿದ್ದರೆ ಅತಿಯಾದ ಚಳಿ ಇರುತ್ತದೆ. ಭೂಮಿಯಂತೆ ತಾಪಮಾನ ಹದವಾಗಿರುವ, ನೀರು ದ್ರವರೂಪದಲ್ಲಿರಬಹುದಾದ ಜಾಗವನ್ನು 'ಗೋಲ್ಡಿಲಾಕ್ಸ್ ವಲಯ' ಅಥವಾ 'ವಾಸಯೋಗ್ಯ ವಲಯ' ಎನ್ನುತ್ತಾರೆ. ಇಂತಹ ಗ್ರಹಗಳಲ್ಲೇ ಏಲಿಯನ್‌ಗಳು ಇರುವ ಸಾಧ್ಯತೆ ಹೆಚ್ಚು.

ನಿಕೋಲಾಯ್ ಕಾರ್ಡಾಶೇವ್ ಎಂಬ ವಿಜ್ಞಾನಿ ಒಂದು ಸಿದ್ಧಾಂತ ಮಂಡಿಸಿದ್ದರು. ಅದರ ಪ್ರಕಾರ, ಬ್ರಹ್ಮಾಂಡದಲ್ಲಿರುವ ನಾಗರಿಕತೆಗಳನ್ನು ಮೂರು ಹಂತಗಳಾಗಿ ವಿಂಗಡಿಸಬಹುದು:

ಟೈಪ್ 1 (Type I): ತನ್ನ ಗ್ರಹದಲ್ಲಿರುವ ಇಡೀ ಶಕ್ತಿಯನ್ನು ಬಳಸಿಕೊಳ್ಳುವ ಜೀವಿಗಳು (ನಾವು ಮನುಷ್ಯರು ಇನ್ನೂ ಈ ಹಂತ ತಲುಪುತ್ತಿದ್ದೇವೆ ಅಷ್ಟೇ).

ಟೈಪ್ 2 (Type II): ತನ್ನ ಇಡೀ ಸೌರಮಂಡಲ ಮತ್ತು ಸೂರ್ಯನ ಶಕ್ತಿಯನ್ನೇ ನಿಯಂತ್ರಿಸುವ ಜೀವಿಗಳು.

ಟೈಪ್ 3 (Type III): ಇಡೀ ಗ್ಯಾಲಕ್ಸಿ (ನಕ್ಷತ್ರ ಮಂಡಲ)ಯ ಶಕ್ತಿಯನ್ನೇ ತನ್ನ ಕೈಯಲ್ಲಿಟ್ಟುಕೊಂಡಿರುವ ಜೀವಿಗಳು.

ನಮ್ಮ ಭೂಮಿಗೆ ಏಲಿಯನ್‌ಗಳು ಬರುವುದಾದರೆ, ಅವರು ಖಂಡಿತ ಟೈಪ್ 2 ಅಥವಾ ಟೈಪ್ 3 ಹಂತದ ಮಹಾ ಬುದ್ಧಿವಂತರಾಗಿರುತ್ತಾರೆ!

"ಏಲಿಯನ್‌ಗಳು ಭೂಮಿಗೆ ಬರುತ್ತಾರೋ ಇಲ್ಲವೋ ಎನ್ನುವುದು ಇಂದಿಗೂ ನಿಗೂಢ. ಆದರೆ, ಒಂದು ವೇಳೆ ಅವರು ಆಕಾಶದಿಂದ ಭೂಮಿಯ ಕಡೆಗೆ ನೋಡಿದರೆ, ಅವರಿಗೆ ಕಾಣಿಸುವುದು ಗಡಿ ರೇಖೆಗಳಿಲ್ಲದ, ಜಾತಿ–ಧರ್ಮಗಳಿಲ್ಲದ ಒಂದು ಸುಂದರವಾದ ನೀಲಿ ಗ್ರಹ ಮಾತ್ರ! ಪರಗ್ರಹ ಜೀವಿಗಳ ಹುಡುಕಾಟ ನಮಗೆ ಬ್ರಹ್ಮಾಂಡದ ರಹಸ್ಯಗಳನ್ನು ತಿಳಿಸುವುದರ ಜೊತೆಗೆ, ನಮ್ಮ ಭೂಮಿ ಎಷ್ಟು ಅಪರೂಪದ್ದು ಮತ್ತು ಇದನ್ನು ನಾವೆಲ್ಲರೂ ಒಟ್ಟಾಗಿ ಎಷ್ಟು ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು ಎಂಬ ಅತ್ಯುನ್ನತ ಪಾಠವನ್ನೂ ಕಲಿಸುತ್ತದೆ."

ಏಲಿಯನ್‌ಗಳ ಬಗ್ಗೆ ಯೋಚಿಸುವಾಗ ನಮಗೆ ತಿಳಿಯದೇ ಮೂಡುವ ಅತಿ ದೊಡ್ಡ ಸತ್ಯವೆಂದರೆ ನಮ್ಮ ಭೂಮಿ ಎಷ್ಟು ಅಪರೂಪದ್ದು ಮತ್ತು ನಾವು ಎಷ್ಟು ಅದೃಷ್ಟವಂತರು ಎಂಬುದು! ಬ್ರಹ್ಮಾಂಡದ ಕೋಟ್ಯಂತರ ಮೈಲಿಗಳ ಶೂನ್ಯ ಪ್ರದೇಶದಲ್ಲಿ, ಜೀವ ಸೃಷ್ಟಿಯಾಗಿ ನಗುತ್ತಿರುವುದು ಕೇವಲ ನಮ್ಮ ಈ ಪುಟ್ಟ ನೀಲಿ ಗ್ರಹದಲ್ಲಿ ಮಾತ್ರ.

ನಮ್ಮ ಭೂಮಿ ಎಷ್ಟು ಅದೃಷ್ಟವಂತ ಗ್ರಹವೆಂದರೆ,

ವಿಜ್ಞಾನಿಗಳು ಬ್ರಹ್ಮಾಂಡದ ಸಾವಿರಾರು ಗ್ರಹಗಳನ್ನು ಜಾಲಾಡಿದರೂ ಭೂಮಿಯಂತಹ ಮತ್ತೊಂದು ಗ್ರಹ ಸಿಕ್ಕಿಲ್ಲ. ಏಕೆಂದರೆ, ಭೂಮಿಯ ಮೇಲೆ ಜೀವ ಸೃಷ್ಟಿಯಾಗಲು ಪ್ರಕೃತಿ ಮಾಡಿರುವ ಸಿದ್ಧತೆಗಳು ನಿಜಕ್ಕೂ ಪವಾಡದಂತಿವೆ:

ನಮಗೂ ಸೂರ್ಯನಿಗೂ ಅಳತೆ ಮಾಡಿದಂತಿರುವ ದೂರ (The Perfect Distance).ಭೂಮಿ ಸೂರ್ಯನಿಗೆ ತೀರಾ ಹತ್ತಿರವೂ ಇಲ್ಲ, ತೀರಾ ದೂರವೂ ಇಲ್ಲ. ಸ್ವಲ್ಪ ಹತ್ತಿರವಿದ್ದರೂ ಬುಧ ಗ್ರಹದಂತೆ ಕಾದ ಕಾವಲಿಯಾಗುತ್ತಿತ್ತು, ಸ್ವಲ್ಪ ದೂರವಿದ್ದರೂ ಪ್ಲುಟೋದಂತೆ ಮಂಜುಗಡ್ಡೆಯಾಗುತ್ತಿತ್ತು. ಈ ನಿಖರವಾದ ದೂರದಿಂದಾಗಿಯೇ ಇಲ್ಲಿ ನದಿ, ಸಾಗರಗಳು ದ್ರವರೂಪದ ನೀರನ್ನು ಹೊಂದಲು ಸಾಧ್ಯವಾಗಿದೆ.

ರಕ್ಷಣಾ ಕವಚವಾಗಿರುವ ವಾತಾವರಣ (The Shield of Atmosphere), ಭೂಮಿಯ ಸುತ್ತ ಇರುವ ಗಾಳಿಯ ಪದರ (Atmosphere) ಕೇವಲ ನಾವು ಉಸಿರಾಡಲು ಆಮ್ಲಜನಕ ನೀಡುವುದಿಲ್ಲ; ಅದು ಸೂರ್ಯನಿಂದ ಬರುವ ಅಪಾಯಕಾರಿ ಯುವಿ (UV) ಕಿರಣಗಳನ್ನು ತಡೆಯುವ ಓಜೋನ್ ಕವಚವಾಗಿದೆ. ಅಷ್ಟೇ ಅಲ್ಲ, ಬಾಹ್ಯಾಕಾಶದಿಂದ ಧುಮುಕುವ ಬೃಹತ್ ಉಲ್ಕೆಗಳನ್ನು ಗಾಳಿಯಲ್ಲೇ ಸುಟ್ಟು ಬೂದಿ ಮಾಡಿ ನಮ್ಮನ್ನು ಸದಾ ಕಾಯುವ ಅದೃಶ್ಯ ಕೋಟೆಯಾಗಿದೆ.

ಭೂಮಿಯ ಕಾಂತೀಯ ವಲಯ (Magnetic Field), ಭೂಮಿಯ ಒಳಭಾಗದಲ್ಲಿರುವ ಕರಗಿದ ಕಬ್ಬಿಣದ ದ್ರವದಿಂದಾಗಿ ಒಂದು ಶಕ್ತಿಶಾಲಿ ಕಾಂತೀಯ ಕ್ಷೇತ್ರ ಸೃಷ್ಟಿಯಾಗಿದೆ. ಇದು ಸೂರ್ಯನಿಂದ ಬರುವ ಭೀಕರ ಸೌರ ಮಾರುತಗಳನ್ನು (Solar Winds) ತಡೆದು, ಭೂಮಿಯ ಜೀವ ಸಂಕುಲವನ್ನು ರಕ್ಷಿಸುತ್ತದೆ. ಒಂದು ವೇಳೆ ಇರದಿದ್ದರೆ ಮಂಗಳ ಗ್ರಹದಂತೆ ಭೂಮಿಯೂ ಒಣಗಿ ಹೋಗುತ್ತಿತ್ತು.

ನಮಗಾಗಿ ಇರುವ ಚಂದ್ರ (The Stable Tilt), ನಮ್ಮ ಚಂದ್ರ ಕೇವಲ ಬೆಳಕು ನೀಡುವುದಷ್ಟೇ ಅಲ್ಲ, ಭೂಮಿ ತನ್ನ ಅಕ್ಷದ ಮೇಲೆ ಸ್ಥಿರವಾಗಿ 23.5 ಡಿಗ್ರಿ ವಾಲಿ ತಿರುಗುವಂತೆ ನೋಡಿಕೊಳ್ಳುತ್ತಾನೆ. ಇದರಿಂದಾಗಿಯೇ ಭೂಮಿಯ ಮೇಲೆ ನಿಯಮಿತವಾಗಿ ಮಳೆಗಾಲ, ಚಳಿಗಾಲ, ಬೇಸಿಗೆಕಾಲಗಳಂತಹ ಸುಂದರ ಋತುಮಾನಗಳು ಸಂಭವಿಸುತ್ತವೆ.

ಪ್ರಸಿದ್ಧ ಖಗೋಳವಿಜ್ಞಾನಿ ಕಾರ್ಲ್ ಸಗನ್ (Carl Sagan) ಅವರು ಬಾಹ್ಯಾಕಾಶದಿಂದ ತೆಗೆದ ಭೂಮಿಯ ಒಂದು ಸಣ್ಣ ಚಿತ್ರವನ್ನು ನೋಡಿ ಹೀಗೆ ಹೇಳಿದ್ದರು:

"ಆ ಸಣ್ಣ ನೀಲಿ ಚುಕ್ಕೆಯನ್ನು ನೋಡಿ. ಅದು ನಮ್ಮ ಮನೆ. ಅದುವೇ ನಾವು. ನಮ್ಮ ಇತಿಹಾಸದ ಎಲ್ಲಾ ರಾಜರು, ಸೈನಿಕರು, ಸಂತರು ಮತ್ತು ಪಾಪಿಗಳು ಬದುಕಿ ಬಾಳಿದ್ದು ಆ ಒಂದು ಸಣ್ಣ ಧೂಳಿನ ಕಣದಂತಹ ಗ್ರಹದ ಮೇಲೆ ಮಾತ್ರ."

"ನಾವು ಬೇರೆ ಗ್ರಹಗಳಲ್ಲಿ ಏಲಿಯನ್‌ಗಳು ಇರಬಹುದೇ ಎಂದು ಆಕಾಶದ ಕಡೆಗೆ ಮುಖ ಮಾಡಿ ಹುಡುಕುತ್ತಿದ್ದೇವೆ. ಆದರೆ, ಒಂದು ವೇಳೆ ನಿಜವಾಗಿಯೂ ಪರಗ್ರಹ ಜೀವಿಗಳು ಇದ್ದರೆ, ಅವರ ಪಾಲಿಗೆ ನಾವೇ ಏಲಿಯನ್‌ಗಳು! ಅವರ ಕಣ್ಣಿಗೆ ನಮ್ಮ ಭೂಮಿ ಎನ್ನುವುದು ಕೋಟ್ಯಂತರ ಮೈಲಿಗಳ ಕತ್ತಲೆಯ ಸಾಗರದಲ್ಲಿ ಮಿನುಗುತ್ತಿರುವ ಒಂದು ದಿವ್ಯ ಜ್ಯೋತಿಯಂತೆ ಕಾಣಿಸುತ್ತದೆ. ಇಂತಹ ಅದ್ಭುತ ವಾತಾವರಣ, ಉಸಿರಾಡಲು ಶುದ್ಧ ಗಾಳಿ, ಕುಡಿಯಲು ಸಿಹಿ ನೀರು ಕೊಟ್ಟಿರುವ ಭೂಮಿಯೇ ನಮಗೆ ಅತ್ಯಂತ ದೊಡ್ಡ ವರ."

"ಪರಗ್ರಹ ಜೀವಿಗಳ ಅನ್ವೇಷಣೆಗಿಂತ ಇಂದಿನ ತುರ್ತು ಅಗತ್ಯ ನಮ್ಮ ಕೈಯಲ್ಲಿರುವ ಭೂಮಿಯನ್ನು ಉಳಿಸಿಕೊಳ್ಳುವುದು. ತಂತ್ರಜ್ಞಾನದಲ್ಲಿ ನಾವು ಎಷ್ಟೇ ಮುಂದುವರಿದರೂ, ನಮಗೆ ಬದುಕಲು ಮತ್ತೊಂದು ಭೂಮಿ ಸಿಗುವುದು ಅಸಾಧ್ಯ. ಆದ್ದರಿಂದ, ಕಾಡುಗಳನ್ನು ಕಡಿದು, ನದಿಗಳನ್ನು ಮಲಿನಗೊಳಿಸಿ, ಜಾಗತಿಕ ತಾಪಮಾನವನ್ನು ಹೆಚ್ಚಿಸುತ್ತಿರುವ ಮನುಷ್ಯ, ಮೊದಲು ತನ್ನ ಸ್ವಾರ್ಥವನ್ನು ಬಿಟ್ಟು ಪ್ರಕೃತಿಯನ್ನು ಪ್ರೀತಿಸಬೇಕಾಗಿದೆ. ಬ್ರಹ್ಮಾಂಡದ ಅತಿಥಿಗಳು ಬರಲಿ, ಬಿಡಲಿ; ಆದರೆ ಭೂಮಿಯೆಂಬ ಸುಂದರ ಮನೆಯನ್ನು ದೇವಸ್ಥಾನದಂತೆ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ." ಎನ್ನುವ ಸಂದೇಶ ಪ್ರೊಫೆಸರ್ ಪ್ರಹ್ಲಾದ್ ಸರ್ ಕೊಟ್ಟಾಗ,ನಾವು ಈಗ ಭೂಮಿಯನ್ನು ತಂದಿಟ್ಟಿರುವ ಸ್ಥಿತಿ ನೋಡಿ,ತಲೆತಗ್ಗಿಸುವಂತಾಗಿತ್ತು. ವಂದನೆಗಳು.

---

### ಜೂನ್ 13– 14 ರಂದು ಮುನ್ನಡೆ ಮಂಡ್ಯ ವಿಷನ್ –2035 ಕಾರ್ಯಾಗಾರ ಕಾರ್ಯಕ್ರಮ: ಕುಮಾರ

## ಉದ್ಯಮಿದಾರರು ಕಾರ್ಯಕ್ರಮವನ್ನು ಸದುಪಯೋಗ ಪಡೆದುಕೊಳಲು ಮುಂದಾಗಬೇಕು




**ಮಂಡ್ಯ:** ಜಿಲ್ಲೆಯ ಎಲ್ಲಾ ಇಲಾಖೆಗಳ ಸಹಕಾರದೊಂದಿಗೆ ಮಂಡ್ಯ ಜಿಲ್ಲೆಯ ಬೆಳವಣಿಗೆಗೆ ಹಾಗೂ ಅಭಿವೃದ್ದಿಯತ್ತ ಸಾಗಲು ಜೂನ್ 13 ಮತ್ತು 14 ರಂದು ಮುನ್ನಡೆ ಮಂಡ್ಯ ವಿಷನ್ –2035 ರ 2 ದಿನಗಳ ಕೃಷಿ ಉದ್ಯಮ ಅಧಿವೇಶನ ಕಾರ್ಯಾಗಾರ ಕಾರ್ಯಕ್ರಮವನ್ನು ಆಯೋಜಿಸಿದ್ದು, ಉದ್ಯಮಿಗಳು ಕಾರ್ಯಕ್ರಮವನ್ನು ಸದುಪಯೋಗ ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಡಾ. ಕುಮಾರ ರವರು ತಿಳಿಸಿದರು.

ಬುಧವಾರ ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಮುನ್ನಡೆ ಮಂಡ್ಯ ವಿಷನ್ –2035 ಕಾರ್ಯಾಗಾರ ಕಾರ್ಯಕ್ರಮ ಕುರಿತು ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಂಡ್ಯ ಒಂದು ಕೃಷಿ ಪ್ರಧಾನ ಜಿಲ್ಲೆಯಾಗಿದ್ದು ಜಿಲ್ಲೆಯಲ್ಲಿ ಹೈನುಗಾರಿಕೆ, ಕುರಿ ಸಾಕಾಣಿಕೆ, ಕೋಳಿ ಸಾಕಾಣಿಕೆ ಉದ್ಯಮವನ್ನು ಮಾಡುತ್ತಿರುವ ಉದ್ಯಮಿದಾರರು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಸದುಪಯೋಗ ಪಡೆದುಕೊಳ್ಳುವಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು

ಉದ್ಯಮಿಗಳು ಉತ್ಪಾದನೆಯಲ್ಲಿ ಉತ್ತಮ ಬ್ರಾಂಡಿಂಗ್ ಮತ್ತು ಉತ್ಪಾದನೆಯ ಗುಣಮಟ್ಟ ತುಂಬಾ ಅಗತ್ಯವಾಗಿದ್ದು ಆದುದರಿಂದ ಕಾರ್ಯಾಗಾರ ಕಾರ್ಯಕ್ರಮದಲ್ಲಿ ಮಾಹಿತಿಯನ್ನು ಉದ್ಯಮಿದಾರಿಗೆ ನೀಡಿ ರೈತರಲ್ಲಿ ಉದ್ಯಮಶೀಲತೆ ಮನೋಭಾವನೆ ಬೆಳೆಸುವುದು ಮತ್ತು ಅವರನ್ನು ಸ್ವಾವಲಂಬಿ ಕೃಷಿ ಉದ್ಯಮಿಗಳಾಗಿ ರೂಪಿಸುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸಿದ್ದು ಕಾರ್ಯಕ್ರಮವನ್ನು ಉದ್ಯಮಿಗಳು ಸದುಪಯೋಗ ಪಡೆದುಕೊಳ್ಳಬೇಕು ಹಾಗೂ ಜಿಲ್ಲಾ ಎಲ್ಲಾ ಇಲಾಖೆವಾರು ಕಾರ್ಯಾಗಾರದ ಮಾಹಿತಿಯನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಎಲ್ಲಾ ಇಲಾಖೆಗಳು ಸಹ ಸರ್ಕಾರದ ಸೌಲಭ್ಯಗಳ ಮಾಹಿತಿ ಹಾಗೂ ಸಂಪನ್ಮೂಲಗಳು ಸೌಲಭ್ಯಗಳನ್ನು ರೈತರಿಗೆ (ಉದ್ಯಮಿಗಳಿಗೆ ) ಒದಗಿಸಬೇಕು ಮತ್ತು ಅವಕಾಶಗಳನ್ನು ಉದ್ಯಮಿಗಳು ಬಳಸಿಕೊಳ್ಳುವಂತೆ ಎಲ್ಲಾ ಇಲಾಖೆಗಳು ಸಹಕರಿಸಬೇಕು ಎಂದು ತಿಳಿಸಿದರು. ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಡಾ. ವಿ. ಎಸ್. ಅಶೋಕ್ ರವರು ಮಾತನಾಡಿ ರೈತರಲ್ಲಿ ಉದ್ಯಮಶೀಲತೆ ಮನೋಭಾವನೆ ಬೆಳೆಸುವುದು ಮತ್ತು ಅವರನ್ನು ಸ್ವಾವಲಂಬಿ ಕೃಷಿ ಉದ್ಯಮಿಗಳಾಗಿ ರೂಪಿಸುವುದು ಕಾರ್ಯಾಗಾರದ ಉದ್ದೇಶವಾಗಿದೆ.

ಜಿಲ್ಲೆಯಲ್ಲಿ ರೈತರು ಸಂಸ್ಕರಣೆ, ಮೌಲ್ಯವರ್ಧನೆ, ಮಾರ್ಕೆಟಿಂಗ್ ಹಾಗೂ ಆರ್ಥಿಕ ನಿರ್ವಹಣೆ ಸೇರಿದಂತೆ ವಿವಿಧ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ರೈತರು ಕೇವಲ ಉತ್ಪಾದಕರಾಗಿಯೇ ಉಳಿಯದೆ ಕೃಷಿ ಉದ್ಯಮಿಗಳಾಗಿ ಬೆಳೆಯಬೇಕು ಎಂಬ ದೃಷ್ಟಿಯಿಂದ ಕಾರ್ಯಾಗಾರವನ್ನು ಆಯೋಜಿಸಿದ್ದು ಉದ್ಯಮಿಗಳು ಕಾರ್ಯಾಗಾರ ಕಾರ್ಯಕ್ರಮವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಫಸ್ಟ್ ಸರ್ಕಲ್ ಅಧ್ಯಕ್ಷರಾದ ಡಾ. ಬಿ. ಶಿವಲಿಂಗಯ್ಯ, ಕಾರ್ಯಾಧ್ಯಕ್ಷರು ಚಂದ್ರಶೇಖರ್, ಕಾರ್ಯದರ್ಶಿ ಕಾರಸವಾಡಿ ಮಹದೇವ್, ಯೋಜನಾಧಿಕಾರಿಗಳಾದ ಯೋಗೇಶ್, ಶಿವಕುಮಾರ್, ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

---

## ಸಣ್ಣ ಚಿಪ್‌ನಲ್ಲಿ ಅಡಗಿರುವ ದೊಡ್ಡ ಕ್ರಾಂತಿ



| ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 35

ಕಾಲಚಕ್ರದ ತಿರುವಿನಲ್ಲಿ ಮಾನವನ ಬದುಕನ್ನು ಬೆಸೆದ ಮಾಂತ್ರಿಕ ಸೂತ್ರವೆಂದರೆ ಮೊಬೈಲ್. ಈ ಯಂತ್ರಲೋಕದಲ್ಲಿ ನಮ್ಮ ನೆನಪು, ಸಂಖ್ಯೆ, ಅಸ್ತಿತ್ವವನ್ನು ಫೋನಿನಿಂದ ಫೋನಿಗೆ ಹೊತ್ತು ಸಾಗುವ ಪುಟ್ಟ ವಾಹಕವೇ ಸಿಮ್ ಕಾರ್ಡ್. 1991ರಲ್ಲಿ ಜರ್ಮನಿಯ ಗೀಸೆಕೆ ಅಂಡ್ ದೇವ್ರಿಯಂಟ್ ಸಂಸ್ಥೆಯ ಕೈಯಲ್ಲಿ ಜನ್ಮತಾಳಿದ ಈ ಚಿಪ್, ಕೇವಲ ತಂತ್ರಜ್ಞಾನದ ಮೈಲಿಗಲ್ಲಲ್ಲ; ವೈಯಕ್ತಿಕ ಸಂವಹನದ ಸ್ವಾತಂತ್ರ್ಯಕ್ಕೆ ಬರೆದ ಸುವರ್ಣ ಮುನ್ನುಡಿ. ಕ್ರೆಡಿಟ್ ಕಾರ್ಡ್‌ನಷ್ಟು ವಿಶಾಲವಾಗಿದ್ದ ಅದರ ಕಾಯ, ಕಾಲದ ಒರೆಗಲ್ಲಿಗೆ ಸಾಣೆಹಿಡಿದು ಇಂದು ನ್ಯಾನೋ ರೂಪದ ಸೂಕ್ಷ್ಮವಾಗಿ ಮೈದಳೆದಿದೆ. ಈ ರೂಪಾಂತರದ ಒಡಲಲ್ಲಿ ಅಡಗಿರುವ ಸಂದೇಶವೊಂದೇ: ಜಗದ ಓಟಕ್ಕೆ ತಕ್ಕಂತೆ ನಮ್ಮ ಚಿಂತನೆಯೂ ಚುರುಕಾಗಬೇಕು.

ಸಿಮ್ ಕಾರ್ಡ್ ಹೊರಗೆ ಕಾಣಲು ಕಿರಿದಾದರೂ ಒಳಗೆ ಹುದುಗಿಸಿಕೊಂಡಿರುವ ಜ್ಞಾನಸಾಗರ ಅನಂತ. ಇದು ಯುವಮನಸ್ಸುಗಳಿಗೆ ತೋರುವ ದೀವಟಿಗೆ: ಬಾಹ್ಯದ ಮಿನುಗಿಗಿಂತ ಅಂತರಂಗದ ಬೆಳಕೇ ಶ್ರೇಷ್ಠ. ರೂಪ ಸಣ್ಣದಾದರೇನು, ಗುಣದಲ್ಲಿ ಗಿರಿಯಾಗಿರಬೇಕು ಎಂಬುದಕ್ಕೆ ಇದೇ ಸಾಕ್ಷಿ. ಯಂತ್ರಗಳು ನಿತ್ಯ ನವೀಕರಣಗೊಂಡರೂ ನಮ್ಮ ಅಸ್ಮಿತೆಯನ್ನು ಕಾಪಾಡುವ ಈ ಚಿಪ್‌ನಂತೆ, ಬದುಕಿನ ಬಿರುಗಾಳಿಯಲ್ಲೂ ನಮ್ಮ ನೀತಿ, ನಿಷ್ಠೆ, ಮೌಲ್ಯಗಳ ಬೇರು ಗಟ್ಟಿಯಾಗಿರಬೇಕು. ಸಣ್ಣ ಆಲೋಚನೆಯ ಕಿಡಿಯೂ



ಜಗವನ್ನೇ ಬೆಳಗಬಲ್ಲದು.

ಆರಂಭದ ಹೆಜ್ಜೆ ಅಣುವಿನಷ್ಟಿರಲಿ, ಆದರೆ ಗುರಿ ಗಗನದೆತ್ತರಕ್ಕಿರಲಿ. ಶ್ರಮ ಸ್ಮಾರ್ಟ್ ಆಗಿರಲಿ, ಸೃಜನಶೀಲತೆ ಸದಾ ಜಾಗೃತವಾಗಿರಲಿ. ನಿಮ್ಮೊಳಗಿನ ಕಲ್ಪನೆಯ ಕಿಡಿಯೇ ನಾಳಿನ ಕ್ರಾಂತಿಯ ಕಹಳೆ. ಸಣ್ಣದಾಗಿ ಅಂಕುರಿಸಿ, ಸಾಧನೆಯ ವಟವೃಕ್ಷವಾಗಿ ಬೆಳೆಯಿರಿ. ಇತಿಹಾಸ ನಿಮ್ಮ ಹೆಜ್ಜೆಗುರುತಿಗೆ ಕಾಯುತ್ತಿದೆ. ಜಗ ನಿಮ್ಮ ಪ್ರತಿಭೆಯ ತೋರಣ ಕಟ್ಟಲು ಸಿದ್ಧವಾಗಿದೆ!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,